# ಅಖಿಲ ಭಾರತ ಪತ್ರಿಕೆ

ಜೂನ್ 2025



# ಅಭೀಪ್ಸೆ

ಬೆಲೆ : 15/-



ಫೋಟೋ: ಇಮೇಜಿಂಗ್ ಸಾವಿತ್ರಿ

ಪರಾಮರ್ಶೆಯಲಿ ಅವಳ ಬೆರಳುಗಳು ಸರಿದಾಡುತಿರುವ ಸಮಯ
ಆ ಗೂಢ–ರಾಶಿ–ಕುಂಡಲದ ಬಂಧ ಮಂಡಳದಲೀಗ ಲೀಯ,
ಅವರ ಅಚ್ಚರಿಯ ಬಂಧ–ಬಂಧುತ್ವದೊಡನೀಗ ಯೋಗಗೊಂಡು
ಅವುಗಳಿದೋ ಅವರ ಸಂಯೋಗಗೊಳಿಸೆ ತಾವೀಗ ಸೂತ್ರಗೊಂಡು
ಸಂಲಗ್ನಗೊಂಡ ದ್ವಂದ್ವದಲಿ ಅವರ ಆ ಕೆಲವು ಚಣಗಳೊಳಗೆ
ಜ್ಞಾನವರ್ಧಕದ ಅಗ್ನಿದೀಪ್ತಿಯದು ಕೆಲವೊಮ್ಮೆ ವಿರತಿಯೊಳಗೆ
ದಿವ್ಯಾಗ್ನಿಯೊಂದು ತಾನುದಿತಗೊಂಡು ಅನಂತಾನಂತದಿಂದು,
ವಿಜ್ಞಾನಘನದ ಬೃಹದ್–ಸತ್ತೆಯದು ಆದರಿಸಿ ಜಗವನಿಂದು
ಸರ್ವಜ್ಞವಲಯದಾ ದೂರದಲ್ಲಿ ಉತ್ತರಣಗೊಳಲು ಅಲ್ಲಿ
ಚಿನ್ಮಯದ ಜ್ಯೋತಿ ನಿರ್ಮಾಯ ಶಾಂತದಾರ್ಣವದ ಸರಣಿಯಲ್ಲಿ
ತನ್ಮಯದ ಸ್ಪಂದ–ನಾದದಲಿ–ಛಂದದೇಕಾಂತ ಭಾವದಲ್ಲಿ
ಉಜ್ವಲದ ದ್ಯುತಿಯ ಘನಸಾಂದ್ರದೆದೆಯ ಸ್ಪಂದದಲಿ ತೇಲಿ ತೇಲಿ
ಆ ಅಂತರಾಳದಾ ಹೃದಯಪದ್ಮ ತಾನಾಗ ಕಾಂತಿಗೊಳಲು
ಜೊತೆಜೊತೆಗೆ ಸರ್ವ–ವಸ್ತು–ವಿಷಯಗಳು ನಿತ್ಯದಲಿ ಬೆಳಗುಗೊಳಲು.

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 10 ಪುಟ 258)**

**ಅಖಿಲ ಭಾರತ ಪತ್ರಿಕೆ**

**ಜೂನ್ 2025**

ಸಂಪುಟ: 35 ಸಂಚಿಕೆ: 06


## ಪರಿವಿಡಿ


**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ:**
ಡಾ॥ ಆರ್.ಕೆ. ಕುಲಕರ್ಣಿ



**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
https://www.sriaurobindo
complex.org/archive.php
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


## ಅಭೀಪ್ಸೆ

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಅಭೀಪ್ಸೆಯ ಮೌಲ್ಯ** 3

**ಆಧ್ಯಾತ್ಮಿಕ ಜೀವನದ ನಿಯಮ** 4
ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್

**ಅಭೀಪ್ಸೆ– ತಿರಸ್ಕಾರ– ಸಮರ್ಪಣೆ** 14
ಅನು: ನಾಗಜ್ಯೋತಿ ಮಾನ್ವಿ

**ಅಭೀಪ್ಸೆ– ಆಹ್ವಾನ–ಸಮರ್ಥನೆ** 18
ಅನು: ಡಾ॥ ಮಹಾದೇವ ಸಕ್ರಿ

**ತೆರೆದುಕೊಳ್ಳುವ ಆಂತರ್ಯ** 21
ಅನು: ಶ್ರೀ ಕಿಶೋರಕುಮಾರ ಕಾಸಾರ

**ಶ್ರೀ ಅರವಿಂದರ 'ಉಪನಿಷತ್'** 44
ಅನು: ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ 'ಉರ್ವಶಿ'** 47
ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ)

**'ಸಾವಿತ್ರೀ' – ಲೋಕ–ಲೋಕಗಳ ಅನ್ವೇಷಣೆ** 60
– ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ 'ಗೀತಾ ಪ್ರಬಂಧಗಳು'** 68
ಅನು: ಜಾನ್ವಿ

# ಸಂಪಾದಕರ ಟಿಪ್ಪಣಿ

ನಮ್ಮ ಹೃದಯದಲ್ಲಿ ಸ್ಥಿತವಿರುವ ದೈವೀ ಅಸ್ತಿತ್ವದಿಂದ ಉದಿತಗೊಂಡ ತೇಜಪೂರ್ಣವಾಗಿರುವ ಅಗ್ನಿಯ ಪ್ರಕಾಶದ ಮುಂದಾಳ್ತನದಲ್ಲಿ ಇರುವ ಅಭೀಪ್ಸೆಯ ಮೂಲಕವೇ ಯೋಗದ ಯಾನವು ಪ್ರಾರಂಭವಾಗುವದು. ಯಾವಾಗ ನಮ್ಮ ಆತ್ಮವು ಆ ದೈವೀ ಕೃಪೆಯ ಸ್ಪರ್ಶದಿಂದ ಜಾಗ್ರತಗೊಳ್ಳುವದೊ, ಆಗಲೇ ಅಭೀಪ್ಸೆಯು ಉದಿತಗೊಳ್ಳುತ್ತದೆ. ಉಳಿದುದೆಲ್ಲವೂ ಕಾಲದ ನಿಯತಿಯ ಪ್ರಕಾರವೇ ಅನುಷ್ಠಾನಗೊಳ್ಳುತ್ತದೆ.

ಈ ರೀತಿಯಲ್ಲಿ ಮಾನವನ ಇಂತಹ ಯಾನದ ಅತಿ ಪ್ರಮುಖ ಹಂತದ ಕುರಿತು ಚಿಂತನಗಳನ್ನು ಸಾದರಪಡಿಸುತ್ತದೆ, ತನ್ಮೂಲಕ ಮಾನವನ ಅಂತರಂಗದಲ್ಲಿರುವ ಅಭೀಪ್ಸೆಯನ್ನು ಪ್ರಕಾಶಮಾನಗೊಳಿಸುವ ಮತ್ತು ಪೋಷಿಸುವ ಕುರಿತು ರೂಪಿಸಲ್ಪಟ್ಟಿದೆ. (ಎಐಎಮ್)

# ಅಭೀಪ್ಸೆಯ ಮೌಲ್ಯ

**– ಅನು: ಶ್ರೀಮತಿ ವಿಶಾಲಾಕ್ಷೀ ಸತ್ಯನ್, ಬೆಂಗಳೂರು**

ನೀವು ಹೇಳುವದು ನಿಜವಾದ ಮಾತು. ಹೃದಯದಿಂದ ಹೊರಹೊಮ್ಮುವ ಒಂದು ಸರಳ, ನೇರ ಮತ್ತು ಪ್ರಾಮಾಣಿಕ ಕರೆ ಹಾಗೂ ಅಭೀಪ್ಸೆಯು ಒಂದು ಪ್ರಮುಖ ಅಂಶ. ಸಾಮರ್ಥ್ಯಗಳಿಗಿಂತಲೂ ಅದು ಹೆಚ್ಚು ಅವಶ್ಯಕ ಮತ್ತು ಪರಿಣಾಮಕಾರಿ. ಜೊತೆಗೆ ಚೇತನವು ಹೊರಮುಖವಾಗಿಯೇ ಉಳಿಯದೆ ಒಳಮುಖವಾಗಿ ತಿರುಗುವಂತೆ ಮಾಡುವದು ಅತಿ ಮುಖ್ಯ – ಅಂದರೆ ಆಂತರಿಕ ಕರೆ, ಆಂತರಿಕ ಅನುಭವ ಮತ್ತು ಆಂತರಿಕ ಸನ್ನಿಧಿಯನ್ನು ತಲುಪುವದು.

ನೀವು ಕೇಳುವ ನೆರವು ನಿಮ್ಮದಾಗಿರುವದು. ಅಭೀಪ್ಸೆಯು ವೃದ್ಧಿಯಾಗು–ವಂತಾಗಲಿ ಮತ್ತು ಆಂತರಿಕ ಚೇತನವೆಲ್ಲವನ್ನೂ ಒಟ್ಟಿಗೆ ತೆರೆಯಲಿ.

*

ನೀವು ಪ್ರಾಮಾಣಿಕವಾದ ಅಭೀಪ್ಸೆಯನ್ನು ಹೊಂದಿರಬೇಕು ಮತ್ತು ಶ್ರೀಮಾತೆಯ ಶಕ್ತಿಗೆ ಸಾಧ್ಯವಾದಷ್ಟು ತೆರೆದುಕೊಂಡಿರಬೇಕು. ನಂತರ ಯಾವುದೇ ಕಷ್ಟಗಳು ಬಂದರೂ, ಅವುಗಳನ್ನು ಜಯಿಸಬಹುದು – ಅದಕ್ಕೆ ಸ್ವಲ್ಪ ಕಾಲವು ಬೇಕಾಗಬಹುದು, ಆದರೆ ಫಲವು ಖಂಡಿತವಾಗಿ ಸಿಗುವದು.

*

ನೀನು ಆ (ಶ್ರೀಮಾತೆಯ) ಶಕ್ತಿಯು ಎಲ್ಲೆಡೆ ಇದೆಯೆಂದು ಭಾವಿಸಬೇಕು ಮತ್ತು ಅದನ್ನು ಒಳಗಡೆಗೆ ಆಹ್ವಾನಿಸಬೇಕು – ನೀನು ಅದನ್ನು ಅನುಭವಿಸಿದರೆ, ಅದು ಬಹಳ ಉತ್ತಮ, ಆದರೆ ಹಾಗೆ ಆಗದಿದ್ದರೂ, ಕರೆಯಲ್ಲಿ ಶಕ್ತಿಯಿದ್ದರೆ, ಅದು ಒಳಗಡೆಗೆ ಹರಿಯುವುದು.

*

ನೀನು ದಿವ್ಯತ್ವವನ್ನು ಅವಲಂಬಿಸಿರಬೇಕು. ಆದರೆ ಶಕ್ತಿಯನ್ನು ಒದಗಿಸುವ ಸ್ವಲ್ಪ ಸಾಧನೆಯನ್ನು ಮಾಡಬೇಕು. – ದಿವ್ಯವು ಫಲವನ್ನು ನೀಡುವದು, ಸಾಧನೆಯ ಅಳತೆಗೆ ಅನುಗುಣವಾಗಿ ಅಲ್ಲ. ಆದರೆ ಜೀವ ಮತ್ತು ಅದರ ಅಭೀಪ್ಸೆಯ ಅಳತೆಗೆ ಅನುಗುಣವಾಗಿ. ಚಿಂತಿಸುವದರಿಂದ ಉಪಯೋಗವಿಲ್ಲ. “ನಾನು ಇದಾಗಿರುವೆ, ನಾನು ಅದಾಗಿರುವೆ, ನಾನು ಏನಾಗಬೇಕು” ಈ ರೀತಿ ಹೇಳು: “ನಾನು

ಏನಾಗಬೇಕೆಂದುಕೊಂಡಿರುವನೋ ಅದಾಗದೆ ಹೋದರೂ ಪರವಾಗಿಲ್ಲ. ನಾನು ಆ ಸ್ಥಿತಿಗೆ ಸಿದ್ಧನಾಗಿರುವನು. ಆದರೆ ದಿವ್ಯವು ನಾನು ಏನಾಗಬೇಕೆನ್ನುವದೋ ಅದಾಗಬೇಕು. – ಉಳಿದುದೆಲ್ಲವೂ ಅದರ ಆಧಾರದ ಮೇಲೆ ಚಲಿಸಬೇಕು.

*

ನನ್ನ ಪ್ರಕಾರ ಜೀವದ ಪ್ರಾಮಾಣಿಕತೆಯ ಅಳತೆಯೆಂದರೆ ದಿವ್ಯತೆಯ ಕಡೆಗಿನ ಒಂದು ಹಂಬಲ ಮತ್ತು ಉನ್ನತ ಜೀವನದ ಕಡೆಗಿನ ಅದರ ಅಭೀಪ್ಸೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/55–56 – ಶ್ರೀ ಅರವಿಂದರು**

## ಆಧ್ಯಾತ್ಮಿಕ ಜೀವನದ ನಿಯಮ

ನೀನು ಮತ್ತು ದಿವ್ಯದ ನಡುವೆ ಯಾವುದೇ ಚಿಂತನೆ, ಯಾವುದೇ ಘಟನೆ, ಮತ್ತಿನ್ನೇನಾದರೂ ಬರಲು ಏಕೆ ಅವಕಾಶಕೊಡಬೇಕು? ನೀನು ಸಂತಸ ಮತ್ತು ಅಭೀಪ್ಸೆಯಿಂದ ತುಂಬಿರುವಾಗ, ಯಾವುದನ್ನೂ ಗಣನೆಗೆ ತೆಗೆದುಕೊಳ್ಳಬೇಡ; ದಿವ್ಯತೆ ಮತ್ತು ನಿನ್ನ ಅಭೀಪ್ಸೆಯನ್ನು ಹೊರತುಪಡಿಸಿ ಇನ್ಯಾವುದೂ ಮುಖ್ಯವಲ್ಲ. ದಿವ್ಯವು ನಿನಗೆ ಶೀಘ್ರವಾಗಿ, ಸಮಗ್ರವಾಗಿ, ಪೂರ್ತಿಯಾಗಿ ಬೇಕಾಗಿದ್ದರೆ, ಆ ಹಾದಿಯಲ್ಲಿ ನೀನು ಮುನ್ನಡೆಯಬೇಕು, ಸಮಗ್ರವಾಗಿ, ಎಲ್ಲವನ್ನೂ ಒಳಗೊಂಡಿರುವ ಅದೇ ನಿನ್ನ ಗುರಿಯಾಗಿದ್ದು, ಅದರಲ್ಲಿ ಇನ್ಯಾವುದೂ ಹಸ್ತಕ್ಷೇಪ ಮಾಡಬಾರದು.

ದಿವ್ಯವನ್ನು ಉದ್ದೇಶಿಸಿದ ಮಾನಸಿಕ ಚಿಂತನೆಗಳ ಮೌಲ್ಯವಾದರೂ ಏನು? ಆತನು ಹೇಗಿರಬೇಕು ಎಂಬ ಚಿಂತನೆ, ಆತನ ಪಾತ್ರವೇನು? ಆತನು ಏನು ಮಾಡಬಾರದು – ಅವುಗಳು ಹಾದಿಯ ನಡುವೆ ಬರಬಹುದು ಅಷ್ಟೇ. ಸ್ವತಃ ದಿವ್ಯತೆಯು ಮಾತ್ರವೇ ಮುಖ್ಯ. ನಿನ್ನ ಚೇತನವು ದಿವ್ಯತೆಯನ್ನು ಆಲಂಗಿಸಿದಾಗ, ದಿವ್ಯತೆಯೆಂದರೆ ಏನೆಂಬುದನ್ನು ನೀನು ಅರಿಯುವೆ. ಅದಕ್ಕೆ ಮೊದಲಲ್ಲ, ಕೃಷ್ಣನೆಂದರೆ ಕೃಷ್ಣ ಮಾತ್ರ. ಆತನು ಏನು ಮಾಡಿದನು ಅಥವಾ ಏನು ಮಾಡಲಿಲ್ಲ ಎಂಬುದನ್ನು ತಿಳಿಯುವದು ಅನವಶ್ಯಕ. ಆತನ ದರ್ಶನವನ್ನು ಪಡೆಯಬೇಕು, ಆತನನ್ನು ಭೇಟಿ ಮಾಡಬೇಕು, ಪ್ರಕಾಶ, ಸಾನ್ನಿಧ್ಯ, ಪ್ರೇಮ ಮತ್ತು ಆನಂದವನ್ನು ಅನುಭವಿಸಬೇಕು ಅದು ಮಾತ್ರವೇ ಮುಖ್ಯ. ಆದುದರಿಂದ ಅದು ಯಾವಾಗಲೂ ಆಧ್ಯಾತ್ಮಿಕ ಅಭೀಪ್ಸೆಗಾಗಿ – ಅದೇ ಆಧ್ಯಾತ್ಮಿಕ ಜೀವನದ ನಿಯಮ.

ಮನಸ್ಸಿನ ಚಿಂತನೆಗಳಲ್ಲಿ ಇನ್ನು ಸಮಯವನ್ನು ವ್ಯರ್ಥಗೊಳಿಸಬೇಡ ಅಥವಾ ಯಾವುದೇ ಭಾವನೆಗಳ ಪ್ರಾರಂಭದಲ್ಲಿ ತೊಡಗಬೇಡ. – ಈ ಮೋಡಗಳನ್ನು ದೂರ ಸರಿಸು. ಅನಿವಾರ್ಯವಾದುದರ ಕಡೆ ಮಾತ್ರ ಗಮನ ಹರಿಸು.

*

**ಅಭೀಪ್ಸೆಯ ಅರ್ಥ**

ಅಭೀಪ್ಸೆಗೆ ಆಳವಾದ ಅರ್ಥವೇನೂ ಇಲ್ಲ – ಅದರ ಅರ್ಥವು ಬಹಳ ಸರಳ. ಔನ್ನತ್ಯದಲ್ಲಿರುವದನ್ನು ಸತ್ತೆಯು ಆಹ್ವಾನಿಸುವದು – ದಿವ್ಯತ್ವವನ್ನು ಕರೆಯುವದು – ದಿವ್ಯ ಅಥವಾ ಉನ್ನತ ಚೇತನಕ್ಕೆ ಸೇರಿದವನ್ನು ಆಹ್ವಾನಿಸಬೇಕು.

*

ದಿವ್ಯ ಚೇತನಕ್ಕೆ ಸೇರಿದ ಉನ್ನತವಾದವುಗಳನ್ನು ಅಥವಾ ದಿವ್ಯತ್ವಕ್ಕಾಗಿ ಸತ್ತೆಯು ಹಂಬಲಿಸಿ ಕರೆಯುವದೇ ಅಭೀಪ್ಸೆ. ಉನ್ನತವಾದವುಗಳನ್ನು ಕರೆಯುವದೇ ಅಭೀಪ್ಸೆ.

*

ಒಂದು ಕರೆಯೊಂದಿಗೆ ಆಂತರಿಕ ಸತ್ತೆಯ ಊರ್ಧ್ವ ಗಮನವೇ ಅಭೀಪ್ಸೆ; ಅದು ದಿವ್ಯಕ್ಕಾಗಿ ಒಂದು ಹಂಬಲ, ಪ್ರಾರ್ಥನೆ, ಸತ್ಯಕ್ಕಾಗಿ, ಚೇತನ, ಶಾಂತಿ, ಆನಂದ, ಜ್ಞಾನ, ದಿವ್ಯ ಶಕ್ತಿಯ ಅವರೋಹಣ ಅಥವಾ ನಾವು ಪ್ರಯತ್ನಿಸುತ್ತಿರುವ ಮತ್ತಿನ್ಯಾವುದಾದರೂ ಗುರಿಯ ಕಡೆಗಿನ ಅಭೀಪ್ಸೆಯಾಗಿರಬಹುದು.

*

ಶಕ್ತಿಗಳನ್ನು ಆಹ್ವಾನಿಸುವದೇ ಅಭೀಪ್ಸೆ; ಶಕ್ತಿಗಳು ಉತ್ತರಿಸಿದಾಗ, ಒಂದು ಶಾಂತವಾದ ಸಹಜ ಕೇಂದ್ರೀಕೃತ ಗ್ರಹಣದ ಅವಸ್ಥೆಯು ಉಂಟಾಗುವದು. ಅದು ಅಸಂಕಲ್ಪಿತ ಮತ್ತು ಸ್ವಾಭಾವಿಕವಾಗಿರುವದು.

*

ದಿವ್ಯದತ್ತಲಿನ ಕರೆಯೇ ಅಭೀಪ್ಸೆ – ಪ್ರಕೃತಿಯ ಮೇಲೆ ಚೇತನಾಶಕ್ತಿಯು ಬೀರುವ ಪ್ರಭಾವವೇ ಸಂಕಲ್ಪ.

*

ಸತ್ತೆಯಲ್ಲಿನ ಕರೆಯೇ ಅಭೀಪ್ಸೆ; ಅದು ತೆರೆದುಕೊಳ್ಳುವಿಕೆಯಲ್ಲ.

*

**ಅಭೀಪ್ಸೆಯ ವಸ್ತು**

ಪ್ರಪಂಚದಲ್ಲಿನ ಸುಳ್ಳಿನ ವಿರುದ್ಧದ ಜಯ ಮತ್ತು ಸತ್ಯದ ಸಂಪೂರ್ಣ ಅವರೋಹಣವೇ ನಮ್ಮ ಅಭೀಪ್ಸೆಯಾಗಿರಬೇಕು.

*

ಬೆಳಕು ಮತ್ತು ನಿರಂತರವಾದ ಸಂಪರ್ಕಕ್ಕಾಗಿ ಅಭೀಪ್ಸೆಯನ್ನು ಹೊಂದಿರಿ. ಸತ್ಯದಲ್ಲಿ ಸತ್ತೆಯ ವ್ಯವಸ್ಥಿತವಾಗುವದು ಬೆಳಕಿನಲ್ಲಿಯೇ.

*

ದಿವ್ಯ ಸಂಕಲ್ಪದೊಂದಿಗೆ ನಿಮ್ಮ ಸಂಕಲ್ಪವು ಒಂದಾಗಲೆಂಬ ಅಭೀಪ್ಸೆಯನ್ನು ಹೊಂದಿರಿ. ಹೃದಯದಲ್ಲಿ ಗಮನವನ್ನು ಕೇಂದ್ರೀಕರಿಸಿ ಮತ್ತು ಏನೇ ಅನುಭವ ಬಂದರೂ ಸೃಜನಾತ್ಮಕವಾಗಿರಿ, ಯಾವುದೇ ಆಧ್ಯಾತ್ಮಿಕ ಅನುಭವವನ್ನು ತಡೆಯಬೇಡಿ ಅಥವಾ ಒತ್ತಾಯಿಸಬೇಡಿ.

*

ಅಕಾಲಿಕವೆನ್ನಬಹುದು ಸುಪ್ರಮಾನಸದ ಅಭೀಪ್ಸೆ. ಇಡೀ ಸತ್ತೆಯ ಆಧ್ಯಾತ್ಮಿಕ ಬದಲಾವಣೆ ಮತ್ತು ಚೈತ್ಯ ಬದಲಾವಣೆಯ ಅಭೀಪ್ಸೆಯನ್ನು ನೀನು ಹೊಂದುವದು ಸೂಕ್ತ – ಸುಪ್ರಮಾನಸದ ಬಗ್ಗೆ ಚಿಂತಿಸುವ ಮೊದಲು ಈ ಅತ್ಯಾವಶ್ಯಕ ಷರತ್ತನ್ನು ಪೂರೈಸಲೇಬೇಕು.

*

ಲೋಕಾತೀತ ಪುರುಷನಾಗಬೇಕೆಂದು ಬಯಸುವದು ತಪ್ಪು; ಅದು ಅಹಂಕಾರವನ್ನು ಹೆಚ್ಚಿಸುವದು ಅಷ್ಟೇ. ಸುಪ್ರಮಾನಸ ಪರಿವರ್ತನೆಯನ್ನು ತರಲು ದಿವ್ಯದ ಅಭೀಪ್ಸೆಯನ್ನು ನಾವು ಹೊಂದಿರಬಹುದು. ಆದರೆ ಶ್ರೀಮಾತೆಯ ಶಾಂತಿ, ಶಕ್ತಿ, ಬೆಳಕು ಮತ್ತು ಪರಿಶುದ್ಧತೆಯು ಅವರೋಹಿಸಿ ಸತ್ತೆಯು ಚೈತ್ಯ ಮತ್ತು ಆಧ್ಯಾತ್ಮಿಕತೆಯನ್ನು ಪಡೆಯುವವರೆಗು ಅದನ್ನು ಸಹ ಮಾಡಬಾರದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/55–63**

**ಅಭೀಪ್ಸೆಯಲ್ಲಿ ಪದಗಳ ಅವಶ್ಯಕತೆಯಿಲ್ಲ**

ಅಭೀಪ್ಸೆಯಲ್ಲಿ ಪದಗಳ ಅವಶ್ಯಕತೆ ಇಲ್ಲ. ಅದನ್ನು ಪದಗಳಲ್ಲಿ ವ್ಯಕ್ತಪಡಿಸಬಹುದು ಅಥವಾ ವ್ಯಕ್ತಪಡಿಸದೆಯೂ ಇರಬಹುದು.

*

ಅಭೀಪ್ಸೆಯು ಚಿಂತನೆಯ ರೂಪದಲ್ಲೇ ಇರಬೇಕೆಂದೇನೂ ಇಲ್ಲ. – ಮನಸ್ಸು ಕಾರ್ಯನಿರತವಾಗಿರುವಾಗಲೂ ಅದು ಒಂದು ಆಂತರ್ಯದ ಭಾವನೆಯಾಗಿರಬಹುದು.

*

**ಅಭೀಪ್ಸೆಯ ಅವಶ್ಯಕತೆ**

ಅದು ನಾವು ತಲುಪಿರುವ ಸ್ತರವನ್ನು ಅವಲಂಬಿಸಿರುವದು. ಅಭಿವೃದ್ಧಿಗೆ ಸ್ವಲ್ಪಮಟ್ಟಿಗಿನ ಜ್ಞಾನ ಮತ್ತು ಅಂಗೀಕಾರವು ಮಾತ್ರ ಅವಶ್ಯಕವಾಗಿದ್ದು ಎಲ್ಲವೂ ತನ್ನಂತೆ ತಾನೇ ಆಗಮಿಸುವ ಸ್ಥಿತಿಯನ್ನು ತಲುಪುವವರೆಗೂ ವೈಯಕ್ತಿಕ ಅಭೀಪ್ಸೆಯು ಅವಶ್ಯಕ.

*

ನೀನು ಮೇಲೇರದೆ ಇದ್ದರೂ, ಅಭೀಪ್ಸೆಯು ಉನ್ನತ ಚೇತನದೊಂದಿಗೆ ನಿಮಗೆ ಸಂಪರ್ಕವನ್ನು ಕಲ್ಪಿಸುವದು ಮತ್ತು ಅದರಿಂದ ಕೆಲ ಭಾಗವನ್ನು ಕೆಳಗೆ ತರಲು ನೆರವಾಗುವದು ಅಥವಾ ಸಿದ್ಧತೆಯನ್ನು ಮಾಡುವದು.

*

ಅದು (ಉನ್ನತ ಚೇತನವು) ಅಭೀಪ್ಸೆಗೆ ಅನುಗುಣವಾಗಿ ಕೆಳಗೆ ಇಳಿಯದಿರಬಹುದು, ಆದರೆ ಅಭೀಪ್ಸೆಯು ಪರಿಣಾಮಕಾರಿಯಾಗಿರುವದು. ಅದು ಚೇತನವನ್ನು ತೆರೆದಿಡುವದು, ಆಗಮಿಸುವದರಲ್ಲಿ ಇರುವ ಜಡ ಅವಸ್ಥೆಯನ್ನು ತಡೆಗಟ್ಟುವದು ಮತ್ತು ಉನ್ನತ ಚೇತನದ ಮೂಲಗಳನ್ನು ಒಂದು ರೀತಿಯಲ್ಲಿ ಸೆಳೆಯತೊಡಗುವದು.

*

ನೀನೇಕೆ ನಾನು (ಅಭೀಪ್ಸೆಯನ್ನು) ಪಡೆದರೆ ಎಂದು ಬರೆಯುವೆ – ನೀನು ಯಾವಾಗಲೂ ಅಭೀಪ್ಸೆಯನ್ನು ಹೊಂದಬಹುದು. ಯಾವುದೂ ನಿನ್ನ ಶಕ್ತಿಯ

ಪರಿಮಿತಿಯಲ್ಲಿ ಇಲ್ಲ. ಎಲ್ಲವೂ ತನ್ನಂತೆ ತಾನೇ ಬರಬೇಕು ಎಂದು ಚಿಂತಿಸುವದು ತಪ್ಪು. ಎಲ್ಲಾ ಚಲನೆಗಳಲ್ಲಿರುವ ಈ ರೀತಿಯ ಜಡತ್ವದ ಅವಶ್ಯಕತೆಯಲ್ಲಿನ ನಂಬಿಕೆಯನ್ನು ಹೊರದೂಡಬೇಕು. ಸಂಕಲ್ಪ, ಅಭೀಪ್ಸೆ, ಶರಣಾಗತಿ – ಈ ಮೂರನ್ನೂ ನೀನು ಅವಶ್ಯಕವಾಗಿ ಹೊಂದಿರಬೇಕು – ಇವುಗಳು ಕ್ರಿಯಾಶೀಲ–ವಾಗಿರುವಾಗಲೂ ನಿನ್ನ ಸಂಕಲ್ಪ, ಅಭೀಪ್ಸೆ ಮತ್ತು ಶರಣಾಗತಿಗಳಿಗೆ ನೆರವಾಗಲು ಮತ್ತು ಅವು ಪರಿಣಾಮಕಾರಿಯಾಗಲು ದಿವ್ಯ ಶಕ್ತಿಯನ್ನು ಆಹ್ವಾನಿಸಬೇಕು.

*

ಅಭೀಪ್ಸೆಯನ್ನು ಏಕೆ "ಪಡೆಯಬೇಕು"? ಸಂಕಲ್ಪದ ಕ್ರಿಯೆಯಾಗಿದೆ ಅಭೀಪ್ಸೆ. ನೀನು ಅದನ್ನು ಯಾವಾಗಲೂ ಪಡೆಯಬಹುದು.

*

ಅಭೀಪ್ಸೆಯಲ್ಲಿ ಕ್ರಿಯಾಶೀಲವಾಗಿರಬೇಕು, ತಪೋನಿರತರಾಗಿರಬೇಕು. ಶ್ರೀಮಾತೆಯ ಭಕ್ತಿಭರಿತ ಕಾರ್ಯ ಅಂದರೆ ನಿಜವಾದ ಕಾರ್ಯದಲ್ಲಿನ ಜಡತೆ ಮತ್ತು ದುಷ್ಟ ಶಕ್ತಿಗಳನ್ನು ನಿರಾಕರಿಸಬೇಕು. ಸಾಧನೆಯಲ್ಲಿ ಇದೇ ಸಮರ್ಪಕವಾದ ಕ್ರಿಯಾಶೀಲತೆ.

*

ನಾವು ದಿವ್ಯದ ಕಡೆ ಅಭೀಪ್ಸೆಯನ್ನು ಹೊಂದಬೇಕು. ಆಧಾರವು ಪರಿಪೂರ್ಣವಾದ ಮೇಲೆ ದಿವ್ಯವು ನೈಜ ಮತ್ತು ಸಮರ್ಪಕವಾದುದನ್ನು ನೆರವೇರಿಸಲೆಂದು ಅದಕ್ಕೆ ಶರಣಾಗಬೇಕು.

*

**ಅಭೀಪ್ಸೆಯಲ್ಲಿನ ತೀವ್ರತೆ ಮತ್ತು ಭಾವನಾತ್ಮಕ ಅಸಹನೆ**

ತೀವ್ರವಾದ ಅಭೀಪ್ಸೆಯು ಯಾವಾಗಲೂ ಒಳ್ಳೆಯದು. ಆದರೆ ಹೃದಯ ಮತ್ತು ಮನಸ್ಸಿನಲ್ಲಿ ಸಂತಸ, ಶಾಂತಿ ಮತ್ತು ಸಮಾಧಾನಗಳು ಸಹ ಇರಲಿ. ಮತ್ತು ಸರಿಯಾದ ಸಮಯದಲ್ಲಿ ಎಲ್ಲವೂ ನೆರವೇರುವದು ಎಂಬ ದೃಢ ನಂಬಿಕೆಯೂ ಇರಲಿ.

*

ಆಂತರಿಕ ಸತ್ತೆಯ ಸಾಮರಸ್ಯಕ್ಕೆ ಭಂಗ ತರದಿರುವ ತೀವ್ರವಾದ ಆದರೆ ಶಾಂತವಾದ ಅಭೀಪ್ಸೆಯು ಇರಬಹುದು.

*

ಹೌದು – ಅದೇ ಹಾದಿ. ಅಭೀಪ್ಸೆಯ ತೀವ್ರತೆಯು ಅನುಭವದ ತೀವ್ರತೆಯನ್ನು ತರುವದು ಮತ್ತು ಪುನರಾವರ್ತಿತ ಅನುಭವದ ತೀವ್ರತೆಯು ಬದಲಾವಣೆಯನ್ನು ಉಂಟುಮಾಡುವದು.

*

ಪ್ರಾಣಿಕದಿಂದ ಬರುವ ಅಸಹನೆ ಮತ್ತು ವಿಶ್ರಾಂತಿರಹಿತ ಅಶಾಂತಿಗಳು ಅಭೀಪ್ಸೆಯನ್ನೂ ಸಹ ಪ್ರವೇಶಿಸುವವು. ಅಭೀಪ್ಸೆಯು ತೀವ್ರವಾಗಿ, ಸಮಾಧಾನ–ಭರಿತವಾಗಿ ಬಲವಾಗಿರಬೇಕು (ನೈಜ ಪ್ರಾಣಿಕದ ಸ್ವಭಾವವು ಅದೇ ಆಗಿದೆ). ಅಭೀಪ್ಸೆಯು ವಿಶ್ರಾಂತಿರಹಿತ ಮತ್ತು ಅಸಹಿಷ್ಣುವಾಗಿರಬಾರದು. – ಆಗ ಮಾತ್ರ ಅದು ಸ್ಥಿರವಾಗಿರುವದು.

*

ನಿಜವಾದ ಅಭೀಪ್ಸೆಯನ್ನು ಕೊಡುವದು ಚೈತ್ಯ. ಪ್ರಾಣಿಕವು ಪರಿಶುದ್ಧವಾಗಿ ಚೈತ್ಯದ ಪ್ರಭಾವಕ್ಕೆ ಒಳಗಾದರೆ, ಆಗ ಪ್ರಾಣಿಕವು ತೀವ್ರತೆಯನ್ನು ನೀಡುವದು. – ಆದರೆ ಅಪರಿಶುದ್ಧವಾಗಿದ್ದರೆ ಅದು ನಿರುತ್ಸಾಹ ಮತ್ತು ನಿರಾಶೆಗಳ ಪ್ರತಿಕ್ರಿಯೆ ಮತ್ತು ಅಸಹನೆಯನ್ನು ಹೊಂದಿರುವ ರಾಜಸಿಕ ತೀವ್ರತೆಯನ್ನು ತರುವದು. ಸಮಾಧಾನ ಮತ್ತು ಸಮತ್ವವು ಅವಶ್ಯಕವಾಗಿರುವದರಿಂದ ಅದು ಮೇಲಿನಿಂದ ಮನಸ್ಸಿನ ಮೂಲಕ ಕೆಳಗೆ ಬರಬೇಕು.

*

ಆ (ಜ್ವಲಿಸುವ ಅಬೀಪ್ಸೆಯು) ಸಮಂಜಸವಾದುದು. ಅದೇ ಚೈತ್ಯ ಅಭೀಪ್ಸೆ, ಚೈತ್ಯ ಜ್ವಾಲೆ. ಭಾವನೆಗಳು ಒಳ ನುಗ್ಗಿದಾಗ ಅಸಹನೆಯೇ ಫಲಿತಾಂಶ ಮತ್ತು ಪರಿಣಾಮವು ತತ್‌ಕ್ಷಣವಾದುದಲ್ಲದಿದ್ದರೆ ಅಸಂತೃಪ್ತಿ. ಅದು ಇಲ್ಲವಾಗಬೇಕು.

*

**ಅಭೀಪ್ಸೆ ಮತ್ತು ಅಪೇಕ್ಷೆ**

ತನಗೆ ಏನು ಸಿಗುವದೋ ಅದರಿಂದ ತೃಪ್ತನಾಗಿರಬೇಕು ಮತ್ತು ಶಾಂತವಾಗಿ, ಸಂಘರ್ಷವಿಲ್ಲದೆ, ಹೆಚ್ಚಿನದಕ್ಕಾಗಿ ಅಭೀಪ್ಸೆಯನ್ನು ಹೊಂದಿರಬೇಕು – ಎಲ್ಲವೂ ಆಗಮಿಸುವವರೆಗೂ, ಅಪೇಕ್ಷೆಯು ಇಲ್ಲ, ಒದ್ದಾಟವು ಇಲ್ಲ – ಅಭೀಪ್ಸೆ, ಶ್ರದ್ಧೆ, ತೆರೆದುಕೊಂಡಿರುವಿಕೆ – ಮತ್ತು ಅನುಗ್ರಹ.

*

ನೀನು ಮಾಡುವದರಲ್ಲೆಲ್ಲಾ ಅಪೇಕ್ಷೆಯು ಮಿಶ್ರವಾಗಿರುವದರಲ್ಲಿ ಸಂದೇಹವೇ ಇಲ್ಲ, ನಿನ್ನ ಸಾಧನೆಯಲ್ಲಿಯ ಪ್ರಯತ್ನದಲ್ಲಿಯೂ ಸಹ. ಅದೇ ಕಷ್ಟಕರವಾದುದು. ಅಪೇಕ್ಷೆಯು ಒಂದು ಅಸಹಿಷ್ಣು ಪ್ರಯತ್ನದ ಚಲನೆಯನ್ನು ತರುವದು ಆಶಾಭಂಗದ ಪ್ರತಿಕ್ರಿಯೆಯನ್ನು ತರುವದು ಮತ್ತು ಕಷ್ಟ ಬಂದಾಗ ಪ್ರತಿಭಟಿಸುವದು. ತಕ್ಷಣವೇ ಫಲವು ಸಿಗುವದಿಲ್ಲ ಮತ್ತು ಮತ್ತಿತರ ಗೊಂದಲ ಹಾಗು ನೆಮ್ಮದಿ ಗೆಡಿಸುವ ಭಾವನೆಗಳನ್ನು ತರುವದು. ಅಭೀಪ್ಸೆಯು ಅಪೇಕ್ಷೆಯ ಒಂದು ರೂಪವಾಗಿ ಇರಬಾರದು – ಆದರೆ ಆಂತರಿಕ ಜೀವದ ಅವಶ್ಯಕತೆಯ ಭಾವನೆಯಾಗಿರಬೇಕು. ಜೊತೆಗೆ ದಿವ್ಯದ ಕಡೆಗೆ ತಿರುಗಿ ದಿವ್ಯವನ್ನು ಅರಸುತ್ತಿರುವ ಶಾಂತ ಹಾಗು ಸ್ಥಿರವಾದ ಸಂಕಲ್ಪವಾಗಿರಬೇಕು. ಈ ಅಪೇಕ್ಷೆಯ ಮಿಶ್ರಣದಿಂದ ಹೊರಬರುವದೇನೂ ನಿಜಕ್ಕೂ ಸುಲಭ ಸಾಧ್ಯವಾದ ಕಾರ್ಯವಲ್ಲ – ಯಾರಿಗೂ ಸುಲಭವಲ್ಲ; ಆದರೆ ಅದನ್ನು ನೆರವೇರಿಸುವ ಸಂಕಲ್ಪವಿದ್ದರೆ; ಕಾಪಾಡುವ ಶಕ್ತಿಯ ಮೂಲಕ ಇದನ್ನು ಸಹ ಸಾಧಿಸಬಹುದು. ಅಪೇಕ್ಷೆಯು ಇದ್ದರೆ ಆಕರ್ಷಣೆಯು ಇರುವದು, ಬೇಡಿಕೆ, ಹಂಬಲವೂ ಇದ್ದು ಸಮತ್ವವನ್ನು ಕಳೆದುಕೊಳ್ಳಬಹುದು ಜೊತೆಗೆ ಸಿಗದಿದ್ದಲ್ಲಿ ದುಃಖವು ಉಂಟಾಗುವದು. ಇದೆಲ್ಲವೂ ಯೋಗಕ್ಕೆ ವಿರೋಧವಾದುದು.

*

**ಅಭೀಪ್ಸೆ ಮತ್ತು ಸೆಳೆಯುವಿಕೆ**

ತನಗಾಗಿ ವಸ್ತುಗಳನ್ನು ಪಡೆಯುವ ಅಪೇಕ್ಷೆಯಿಂದ ಸಾಮಾನ್ಯವಾಗಿ ಸೆಳೆಯುವಿಕೆಯು ಬರುವದು. – ಅಭೀಪ್ಸೆಯಲ್ಲಿ ಉನ್ನತ ಚೇತನವು ಕೆಳಗೆ ಅವರೋಹಿಸಿ ಸ್ವಾಧೀನಪಡಿಸಿಕೊಳ್ಳಲಿಕ್ಕಾಗಿ ಒಂದು ಸ್ವ–ಸಮರ್ಪಣೆಯು ಇರುವದು – ಕರೆಯು ತೀವ್ರವಾಗಿದ್ದಷ್ಟೂ ಸ್ವ–ಸಮರ್ಪಣೆಯು ಹೆಚ್ಚು ಹೆಚ್ಚಾಗುವದು.

*

ಶಕ್ತಿಯ ಮೂಲಕ ಬೆಳಕನ್ನು ಕೆಳಗೆ ತರುವದು – ಅದನ್ನು ಕೆಳಗೆ ಎಳೆಯುವದು ನಿಜಕ್ಕೂ ಒಂದು ಪ್ರಮಾದವೇ ಸರಿ – ಅಬ್ಬರಿಸಿ ಸುಪ್ರಮಾನಸವನ್ನು ಪಡೆಯಲು ಸಾಧ್ಯವಿಲ್ಲ. ಸಮಯವು ಕೂಡಿಬಂದಾಗ ಅದು ತನ್ನಂತೆ ತಾನೇ ತೆರೆದುಕೊಳ್ಳುವದು – ಆದರೆ ಮೊದಲಿಗೆ ಮಾಡಬೇಕಾದುದು ಬಹಳವಿದೆ. ಅದನ್ನು ಸಹನೆಯಿಂದ ಆತುರತೆಯಿಲ್ಲದೆ ನೆರವೇರಿಸಬೇಕು.

*

**ಅಭೀಪ್ಸೆಯಿಲ್ಲದಿರುವದು**

ಸಹಜವಾಗಿ ಅಭೀಪ್ಸೆಯು ಏಕಮುಖವಾಗಿದ್ದಷ್ಟೂ ಪ್ರಗತಿಯು ಹೆಚ್ಚು ಹೆಚ್ಚು ಶೀಘ್ರಗತಿಯಲ್ಲಿರುವದು. ಆದರೆ ಪ್ರಾಣಿಕವು ತನ್ನ ಅಪೇಕ್ಷೆಗಳೊಂದಿಗೆ ಅಥವಾ ಭೌತಿಕವು ತನ್ನ ಹಿಂದಿನ ಅಭ್ಯಾಸಗಳ ಚಲನೆಗಳೊಂದಿಗೆ ಪ್ರವೇಶಿಸಿದಾಗ ಮಾತ್ರ ಕಷ್ಟವು ಉಂಟಾಗುವದು – ಸಾಮಾನ್ಯವಾಗಿ ಈ ರೀತಿ ಎಲ್ಲರಿಗೂ ಆಗುವದು. ಆಗಲೇ ಸ್ವ–ಪ್ರೇರಿತ ಅಭೀಪ್ಸೆಯ ಕಷ್ಟ ಮತ್ತು ಶುಷ್ಕತೆಯು ಉಂಟಾಗುವದು. ಶುಷ್ಕತೆಯು ಸಾಧನೆಗೆ ಒಂದು ದೊಡ್ಡ ಅಡ್ಡಿ ಎಂಬುದು ಎಲ್ಲರಿಗೂ ತಿಳಿದ ವಿಷಯವೇ ಆಗಿದೆ. ಆದರೆ ನಾವು ಬಿಡದೆ ಸತತವಾಗಿ ಕುಗ್ಗದೆ ಮುಂದುವರೆಯಬೇಕು. ಈ ನೀರಸ ಅವಧಿಗಳಲ್ಲಿಯೂ ನಾವು ದೃಢ ಸಂಕಲ್ಪವನ್ನು ಹೊಂದಿರಬೇಕು. ಈ ಅವಧಿಗಳನ್ನು ದಾಟಿದ ಮೇಲೆ ಒಂದು ಇನ್ನೂ ಹೆಚ್ಚು ಶ್ರೇಷ್ಠವಾದ ಅಭೀಪ್ಸೆಯ ಶಕ್ತಿ ಮತ್ತು ಅನುಭವವು ನಮಗೆ ಲಭಿಸುವದು.

*

ಮೇಲ್ಮೈಯಲ್ಲಿ ಏನೂ ಸಂಭವಿಸದೆ ಎಲ್ಲವೂ ಶಾಂತವಾಗಿರುವ ಈ ಮಧ್ಯದ ಅವಧಿಗಳನ್ನು ಸಹಿಸುವದು ನಿನಗೆ ಕಷ್ಟಕರವಾಗಿದೆ. ಆದರೆ ಅಂತಹ ಮಧ್ಯಂತರ ಅವಧಿಗಳು ಎಲ್ಲರಿಗೂ ಉಂಟಾಗುವದು ಮತ್ತು ಅವುಗಳನ್ನು ತಡೆಯಲು ಸಾಧ್ಯವಿಲ್ಲ. ನಿನ್ನ ಅಭೀಪ್ಸೆಯು ಕಡಿಮೆಯಾಗಿದ್ದರಿಂದ ಹೀಗಾಯಿತು ಎಂದಾಗಲೀ ಅಥವಾ ಮತ್ತಿನ್ಯಾವುದೇ ಅನರ್ಹತೆಯಿಂದ ಹೀಗಾಗಿದೆ ಎಂದು ಭಾವಿಸಬಾರದು. ನೀನು ನಿರಂತರವಾದ ಉತ್ಕಟ ಅಭೀಪ್ಸೆಯನ್ನು ಹೊಂದಿದ್ದರೆ, ಅಂತಹ ಅವಧಿಗಳು ಉಂಟಾಗುವದಿಲ್ಲ ಮತ್ತು ನಿರಂತರವಾದ ಅನುಭವಗಳ ಪ್ರವಾಹವು ಹೊರಹೊಮ್ಮುವವೇ? ಇಲ್ಲ ಇದು ಹಾಗೆ ಅಲ್ಲ. ಅಭೀಪ್ಸೆಯು ಇದ್ದರೂ ಮಧ್ಯಂತರ ಅವಧಿಗಳು ಬರುವವು. ಅದರಲ್ಲಿಯೂ ನಾವು ಅಭೀಪ್ಸೆಯನ್ನು ಹೊಂದಿದ್ದರೆ, ಅದು ಅತ್ಯುತ್ತಮವಾದ ಕ್ರಿಯೆ – ಆದರೆ ಅತ್ಯಂತ ಮುಖ್ಯವಾದ ವಿಷಯವೇನೆಂದರೆ ನಾವು ಅದನ್ನು ಮೌನವಾಗಿ ಎದುರಿಸಬೆಕು, ವಿಶ್ರಾಂತಿರಹಿತರಾಗಬಾರದು, ನಿರುತ್ಸಾಹಿಗಳಾಗಬಾರದು ಅಥವಾ ನಿರಾಶರಾಗಬಾರದು. ಒಂದು ನಿರ್ದಿಷ್ಟ ಹಂತವನ್ನು ತಲುಪಿದ ಮೇಲೆ ಮಾತ್ರ ನಿರಂತರವಾದ ಜ್ವಾಲೆಯು ಇರಲು ಸಾಧ್ಯ ಅಂದರೆ, ನಾವು ಚೈತ್ಯ ಸತ್ತೆಯ ಒಳಗೆ ಜಾಗೃತರಾಗಿ ಯಾವಾಗಲೂ ಆಂತರಿಕವಾಗಿ ವಾಸಿಸುತ್ತಿದ್ದಾಗ ಮಾತ್ರ ಸಾಧ್ಯ. ಅದಕ್ಕಾಗಿಯೇ ಈ ಮನಸ್ಸು, ಪ್ರಾಣ ಮತ್ತು

ಭೌತಿಕಗಳ ಸಿದ್ಧತೆಯು ಅವಶ್ಯಕವಾಗಿರುವದು. ಏಕೆಂದರೆ ಈ ಜ್ವಾಲೆಯು ಚೈತ್ಯ ಪುರುಷನಿಗೆ ಸೇರಿದುದಾಗಿದೆ. ಹೀಗಾಗಿ ಮನಸ್ಸಿನ ಪ್ರಯತ್ನದಿಂದ ನಾವು ಯಾವಾಗಲೂ ಇದರ ಒಡೆತನವನ್ನು ಪಡೆಯಲು ಸಾಧ್ಯವಿಲ್ಲ. ಚೈತ್ಯವು ಸಂಪೂರ್ಣವಾಗಿ ಮುಕ್ತವಾಗಬೇಕು ಅದು ಪೂರ್ತಿಯಾಗಿ ಸಾಧ್ಯವಾಗಲೆಂದೇ ಶಕ್ತಿಯು ಕ್ರಿಯಾಶೀಲವಾಗಿ ಇರುವದು.

*

ಭೌತಿಕ ಚೇತನವು ಎಲ್ಲರಲ್ಲಿಯೂ ಯಾವಾಗಲೂ ಇದೆ. ಅದು ಸ್ವಭಾವತಃ ಸ್ವಲ್ಪ ಜಡ ಮತ್ತು ಅದರಲ್ಲಿ ಬಲವಾದ ನಿರಂತರ ಅಭೀಪ್ಸೆಯು ಸಹಜವಾಗಿ ಇರುವದಿಲ್ಲ. ಅದನ್ನು ಸೃಷ್ಟಿಸಬೇಕು. ಆದರೆ ಮೊದಲಿಗೆ ಒಂದು ತೆರಪು ಅಥವಾ ವಿಸ್ತರಣೆ, ಒಂದು ಶುದ್ಧೀಕರಣ, ಒಂದು ದೃಢವಾದ ಶಾಂತತೆಯು ಇರಬೇಕು. ಹಾಗಿಲ್ಲದಿದ್ದರೆ, ಭೌತಿಕ ಪ್ರಾಣವು ಬಲವಾದ ಅಭೀಪ್ಸೆಯನ್ನು ಅತಿಯಾದ ಆತುರ ಮತ್ತು ಅಸಹನೆಯಾಗಿ ಮಾರ್ಪಡಿಸುವದು ಅಥವಾ ಅದನ್ನು ಬೇರೆಯ ಕಡೆಗೆ ತಿರುಗಿಸಲು ಪ್ರಯತ್ನಿಸುವದು. ಹೀಗಾಗಿ ಸ್ವಭಾವದ ಸ್ಥಿತಿಯು ಬಹಳ ತಟಸ್ಥವಾಗಿದ್ದು ಮೌನವಾಗಿದ್ದರೆ ಬೇಸರಿಸಬೇಡ ಅದರಲ್ಲಿ ಸಾಕಷ್ಟು ಅಭೀಪ್ಸೆ ಇಲ್ಲದೆ ಚಲನಾರಹಿತವಾಗಿದ್ದರೂ ಎದೆಗುಂದದಿರು. ಪ್ರಗತಿಗೆ ಅದು ಒಂದು ಅವಶ್ಯಕವಾದ ಹಾದಿ ಮತ್ತು ಇತರವು ಬರುವವು.

*

**ಅಭೀಪ್ಸೆ ಮತ್ತು ಪರಿವರ್ತನೆ**

ಇಲ್ಲಿಗೆ ಬರುವವರು ಅಭೀಪ್ಸೆ ಮತ್ತು ಒಂದು ಸಾಧ್ಯತೆಯನ್ನು ಹೊಂದಿರುವರು. – ಅವರ ಚೈತ್ಯ ಸತ್ತೆಯಲ್ಲಿ ಇರುವದೇನೋ ಅವರನ್ನು ನೂಕುವರು ಮತ್ತು ಅವರು ಅದನ್ನು ಅನುಸರಿಸಿದರೆ ಇಲ್ಲಿಗೆ ಆಗಮಿಸುವರು; ಆದರೆ ಅದು ಪರಿವರ್ತನೆಯಲ್ಲ.

*

ನಿಮ್ಮ ವಸ್ತುಗಳಿಂದ ದಿವ್ಯದ ಕಡೆ ಸತ್ತೆಯು ನಿಶ್ಚಿತವಾಗಿ ತಿರುಗುವಿಕೆಯೇ ಪರಿವರ್ತನೆ.

*

ಅಭೀಪ್ಸೆಯು ಇಲ್ಲಿಂದ ಮುಂದೆ ಪರಿವರ್ತನೆಯ ಕಡೆ ಮುನ್ನಡೆಸಬಹುದು. ಆದರೆ ಅಭೀಪ್ಸೆಯೇ ಪರಿವರ್ತನೆಯಲ್ಲ.

*

ಚೇತನದ ಸ್ವಯಂಪ್ರೇರಿತ ಚಲನೆಯಾಗಿದೆ ಪರಿವರ್ತನೆ; ಬಾಹ್ಯ ವಸ್ತುಗಳಿಂದ ದಿವ್ಯದ ಕಡೆಗೆ ಅದರ ತಿರುಗುವಿಕೆ. ಸಾಮಾನ್ಯವಾಗಿ ಆಂತರ್ಯ ಮತ್ತು ಔನ್ನತ್ಯದಿಂದ ಉಂಟಾಗುವ ಒಂದು ಸ್ಪರ್ಶದಿಂದ ಅದು ಆಗಮಿಸುವದು. ಸ್ವ–ಸಮರ್ಪಣೆಯು ಸ್ಪರ್ಶಕ್ಕೆ ತೆರೆದುಕೊಳ್ಳಲು ನೆರವಾಗಬಹುದು ಅಥವಾ ಸ್ಪರ್ಶವು ತನ್ನಂತೆ ತಾನೇ ಬರಬಹುದು. ಆದರೆ ದೀರ್ಘ ಕಾಲದ ಅಭೀಪ್ಸೆ ಮತ್ತು ತಪಸ್ಸುಗಳ ಪ್ರಕ್ರಿಯೆಯ ಅಂತಿಮ ಭಾಗವಾಗಿಯೂ ಪರಿವರ್ತನೆಯು ಆಗಮಿಸಬಹುದು. ಈ ವಿಷಯಗಳಲ್ಲಿ ಯಾವುದೇ ನಿರ್ದಿಷ್ಟ ನಿಯಮವೂ ಇಲ್ಲ.

ಚೈತ್ಯ ಸತ್ತೆಯು ಮುಂಭಾಗಕ್ಕೆ ಬಂದರೆ, ಆಗ ಪರಿವರ್ತನೆಯು ಸುಲಭವಾಗಿ ಆಗುವದು ಅಥವಾ ಸ್ವ–ಪ್ರೇರಣೆಯಿಂದ ಸಂಭವಿಸುವದು ಅಥವಾ ಪರಿವರ್ತನೆಯು ಚೈತ್ಯ ಸತ್ತೆಯನ್ನು ಮುಂಭಾಗಕ್ಕೆ ತರುವದು. ಇಲ್ಲಿಯೂ ಸಹ ಯಾವುದೇ ನಿಯಮವು ಇಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/55–63 – ಶ್ರೀ ಅರವಿಂದರು**

**ಪ್ರಾಮಾಣಿಕವಾದ ಅಭೀಪ್ಸೆ**

*ನಿರ್ದಿಷ್ಟವಾಗಿ ಪ್ರಾಮಾಣಿಕ ಅಭೀಪ್ಸೆ ಎಂದರೆ ಏನು?*

ಅದು ಯಾವುದೇ ಆಸಕ್ತ ಮತ್ತು ಅಹಂಕಾರದ ಲೆಕ್ಕಾಚಾರಗಳೊಂದಿಗೆ ಮಿಶ್ರಿತವಾಗದ ಅಭೀಪ್ಸೆ.

*

ನಿನ್ನ ಅಭೀಪ್ಸೆಯ ಪ್ರಾಮಾಣಿಕತೆಗೇ ಸ್ವಯಂಪ್ರೇರಿತವಾಗಿ ಪ್ರೇಮವು ಉತ್ತರಿಸುವದು.

*

ಪರಮೋತ್ತಮ ಚೇತನದ ಕಡೆಗೆ ನಿನ್ನ ಅಭೀಪ್ಸೆಯು ಪರಿಶುದ್ಧವಾಗಿ ಮತ್ತು ನೇರವಾಗಿ ಹಾರುತ್ತಾ ಮುನ್ನಡೆಯಲಿ. ಅದು ಸಂಪೂರ್ಣವಾದ ಸಂತಸ ಮತ್ತು ಸೌಂದರ್ಯವಾಗಿದೆ.

ನಮ್ಮ ಎಲ್ಲಾ ಸತ್ತೆಯೊಂದಿಗೆ ಅಭಿವ್ಯಕ್ತತೆಯು ಶೀಘ್ರವಾಗಿ ಮತ್ತು ಸಂಪೂರ್ಣವಾಗಿ ಆಗಮಿಸಲೆಂಬ ಅಭೀಪ್ಸೆಯನ್ನು ಹೊಂದಿರುವಂತಾಗಲಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/72 – ಶ್ರೀಮಾತೆ**

# ಅಭೀಪ್ಸೆ– ತಿರಸ್ಕಾರ– ಸಮರ್ಪಣೆ

**– ಅನು: ನಾಗಜ್ಯೋತಿ ಮಾನ್ವಿ**

## ಸಾಧನವು ಅವಶ್ಯವಿದೆ

ಸಾಧನದ ಬಗೆಗೆ ನೀನು ಏನು ಹೇಳಿದ್ದೀಯೋ ಅದು ನಿಜವಾಗಿದೆ. ಸಾಧನವು ಅವಶ್ಯವಾಗಿದೆ ಮತ್ತು ದೈವೀ ಶಕ್ತಿಯು ಶೂನ್ಯದಲ್ಲಿ ಏನೂ ಮಾಡಲಾರದು. ಆದರೆ ಆತನು ಅಂತರಂಗದಲ್ಲಿ ಶ್ರೀಮಾತೆಯ ಕಾರ್ಯಪರತೆ ಮತ್ತು ಎಲ್ಲವೂ ಆತನ ಸಲುವಾಗಿಯೇ ಮಾಡಲ್ಪಡುತ್ತದೆ ಎಂದು ಭಾವಿಸುವ ಸ್ಥಿತಿಯವರೆಗೆ ಪ್ರತಿಯೊಬ್ಬರನ್ನೂ ಅವರವರ ಪ್ರಕೃತಿಗನುಗುಣವಾಗಿ ಮುನ್ನಡೆಸುತ್ತದೆ. ಅಲ್ಲಿಯವರೆಗೆ ಸಾಧಕನ ಅಭೀಪ್ಸೆ, ಸ್ವ–ಅರ್ಪಣೆ, ಆರೋಹಣ ಮತ್ತು ಶ್ರೀಮಾತೆಯವರ ಕಾರ್ಯಕ್ಕೆ ಪ್ರೋತ್ಸಾಹಿಸುವದು, ಮಾರ್ಗದಲ್ಲಿ ಬರುವ ಎಲ್ಲ ಅಡೆತಡೆಗಳನ್ನು ತಿರಸ್ಕರಿಸುವದು ಬಹಳ ಅವಶ್ಯಕವಾಗಿರುತ್ತದೆ – ಅತ್ಯಾವಶ್ಯಕವಾಗಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/137**

## ಸಾಧನದ ಮುಖ್ಯ ರೀತಿಗಳು

ಅಭೀಪ್ಸೆ, ತಿರಸ್ಕಾರ ಮತ್ತು ಶ್ರೀಮಾತೆಯ ಸ್ಮರಣೆ ಮತ್ತು ಆಕೆಗೆ ಸಮರ್ಪಿಸಿ–ಕೊಳ್ಳುವದು ಮತ್ತು ಆಕೆಯ ಪ್ರಜ್ಞೆಯೊಂದಿಗೆ ಐಕ್ಯರಾಗುವದು ಇವು ಸಾಧನ ಮುಖ್ಯ ರೀತಿಗಳಾಗಿವೆ ಎನ್ನುವದು ನಿಜವಾಗಿದೆ. ಅತಿಮಾನಸವನ್ನು ತನಗಾಗಿ ಮತ್ತು ತನ್ನ ತನ್ನ ವೈಯಕ್ತಿಕ ಪ್ರಯತ್ನದಿಂದಲೇ ಹುಡುಕುವದು ಮೂರ್ಖತನದಿಂದ ಕೂಡಿದೆ ಎಂಬುದು ನಿಜ; ಇದನ್ನು ನಾನು ಪ್ರಾರಂಭದಿಂದಲೂ ಹೇಳಿದ್ದೇನೆ. ಜೊತೆಗೆ ಇದಕ್ಕೆ ಹೆಚ್ಚು ಹೆಚ್ಚು ಮಹತ್ವವನ್ನೂ ಕೊಡುತ್ತಿದ್ದೇನೆ. ದೈವದೊಂದಿಗೆ ಐಕ್ಯತೆ ಸಾಧಿಸುವದು ಸಾಧನದ ಗುರಿಯಾಗಿರಬೇಕು. ಉಳಿದುದೆಲ್ಲವೂ ಅದರ ಪರಿಣಾಮ ಮತ್ತು ಪೂರಕ ಅಂಶಗಳಾಗಿರಬೇಕಾಗಿದೆ. ಪ್ರಗತಿ, ಅನುಭಾವ ಮುಂತಾದವುಗಳನ್ನು ಅವುಗಳಿಗಾಗಿ ಅಥವಾ ತನ್ನ ಅಹಂಕಾರಕ್ಕಾಗಿ ಹುಡುಕಬಾರದು ಎನ್ನುವದೂ ಸಾಧಕನ ನಿಜ ದೃಷ್ಟಿಕೋನವಾಗಬೇಕು. ಸಾಧಕನು ಸ್ವಾರ್ಥಪರ, ಅಹಂಕಾರಭರಿತ ಮತ್ತು ಅಸ್ಪಷ್ಟನಾಗಿದ್ದರೆ, ಧ್ಯಾನ ಮತ್ತು ದರ್ಶನ ಹಾಗು

ಯೋಗದಲ್ಲಿ ಆಗುವ ಉಳಿದೆಲ್ಲವುಗಳನ್ನು ದುರುಪಯೋಗಪಡಿಸಿಕೊಳ್ಳುತ್ತಾನೆ. ಆದರೆ ಧ್ಯಾನ, ದರ್ಶನ ಮುಂತಾದವುಗಳು ಉಪಯೋಗಕ್ಕೆ ಬಾರದಂತಾಗುತ್ತವೆ ಮತ್ತು ಸಾಧನದಲ್ಲಿ ಅವುಗಳನ್ನು ತಿರಸ್ಕರಿಸಬೇಕೆಂದೇನೂ ಇಲ್ಲ.

ಶ್ರೀಮಾತೆಯವರನ್ನು ಯಾವಾಗಲೂ ನೆನೆಸಿಕೊಂಡರೆ, ಎಲ್ಲವೂ ದೈವದಿಂದಲೇ ಹರಿದು ಬರುತ್ತದೆ. ನಾನು ಏನು ಮಾಡಿದರೂ ತಪ್ಪಲ್ಲ ಎನ್ನುವ ಸಿದ್ಧಾಂತವು ಅಪಾಯಕಾರಿಯಾಗಿದೆ. ಹೀಗಾದರೆ ಪ್ರಕೃತಿಯಿಂದ ಹೊರಹೊರಗೆ ಹೋಗಬೇಕಾದ ಬಹಳಷ್ಟು ಅಂಶಗಳನ್ನು ತಿರಸ್ಕರಿಸುವ ಬದಲಾಗಿ, ಅವುಗಳಿಗೆ ಒಪ್ಪಿಗೆ ಕೊಡಲು ಮುಂದಾಗುತ್ತೇವೆ.

ಸ್ವತಂತ್ರವಾಗಿ ಬಹಿರಂಗದ ಜೀವನ ನಡೆಸುವದು ಎಲ್ಲರಿಗೆ ಎಲ್ಲಾ ಹಂತದಲ್ಲಿಯೂ ಒಳ್ಳೇಯದಲ್ಲವೋ, ಅದೇ ರೀತಿ ನಿವೃತ್ತಿ ಜೀವನ ಮಾಡುವದೂ ಎಲ್ಲಾ ಹಂತದಲ್ಲಿಯು ಒಳ್ಳೆಯದಲ್ಲ. ಸ್ವತಂತ್ರವಾಗಿ ಮೋಜಿನ ಬಹಿರಂಗದ ಸಾಮಾಜಿಕ ಜೀವನವನ್ನು ಯಾವುದೇ ಕಟ್ಟುಪಾಡುಗಳಿಲ್ಲದೇ ನಡೆಸುವದರಿಂದ ಆಗುವ ಅನಾನುಕೂಲತೆಗಳೆಂದರೆ, ಅವರ ಜೀವನವನ್ನು ಭಾಗಶಃ ಅಥವಾ ಪೂರ್ಣವಾಗಿಯೇ ಬಹಿರಂಗ ಜೀವನವಾಗುತ್ತದೆ ಮತ್ತು ಎಲ್ಲಾ ರೀತಿಯ ಪ್ರಾಣಿಕ ವಿನಿಮಯಗಳು ಅದರ ಭಾಗವಾಗಿ ಅದು ಅಂತರಂಗದ ಬೆಳವಣಿಗೆಗೆ ಅಥವಾ ದೈವಕ್ಕೆ ಸಂಪೂರ್ಣ ಸಮರ್ಪಣೆಯಾಗಲು ಅಡ್ಡಿಯಾಗುತ್ತದೆ. ಸಂಪೂರ್ಣ ನಿವೃತ್ತ ಜೀವನ ಮಾಡುವದರ ಅನಾನುಕೂಲವೆಂದರೆ, ಆ ವ್ಯಕ್ತಿಯು ಏಕಮುಖಿಯಾಗಿ ತನ್ನೊಳಗೆ ತಾನು ಇದ್ದುಕೊಂಡು, ಅಂತರ್ಮುಖಿಯಾಗಿ ಮತ್ತು ಪ್ರಕೃತಿಯ ಜೊತೆಗೆ ಸ್ಥಿರತೆರಹಿತ ಜೀವನವನ್ನು ಹೊಂದಿ, ಬಹಿರಂಗದ ಸಂಪರ್ಕವನ್ನು ಸಂಪೂರ್ಣವಾಗಿ ತಿರಸ್ಕಾರ ಮಾಡಲಾರದೇ, ಕಡಿಮೆ ಮಾಡಿಕೊಳ್ಳುವ ಅವಶ್ಯಕತೆಯು, ಈ ಪ್ರಜ್ಞೆಯು ಪಲ್ಲಟಗೊಳ್ಳುವ ಪ್ರಕ್ರಿಯೆಯಲ್ಲಿ ಇರುತ್ತದೆ. ಈ ವಿಷಯದಲ್ಲಿ ಯಾವುದೇ ನಿರ್ದಿಷ್ಟ ನಿಯಮವನ್ನು ಹಾಕುವಂತಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/137–38**

## ಮಾಡಬೇಕಾದ ಪ್ರಯತ್ನ

ಅಭೀಪ್ಸೆ, ತಿರಸ್ಕಾರ ಮತ್ತು ಆತ್ಮ ಸಮರ್ಪಣೆಗಳು ಸಾಧಕನಿಂದ ಮಾಡಲ್ಪಡುವ ಪ್ರಯತ್ನವಾಗಿವೆ. ಈ ಮೂರನ್ನೂ ಮಾಡಿದ ಮೇಲೆ ಉಳಿದುದೆಲ್ಲವೂ ಶ್ರೀಮಾತೆಯ

ಕೃಪೆ ಮತ್ತು ಆಕೆಯ ಶಕ್ತಿ ನಿಮ್ಮಲ್ಲಿ ಕಾರ್ಯಗೈಯುವದರ ಮೂಲಕ ಉಳಿದುದೆಲ್ಲವೂ ತಂತಾನೆ ಆಗುತ್ತದೆ. ಆದರೆ, ಈ ಮೂರರಲ್ಲಿ ಅತಿ ಮುಖ್ಯವಾದುದು ಆತ್ಮಸಮರ್ಪಣೆಯಾಗಿದೆ. ಅದರ ಮೊದಲ ಅವಶ್ಯಕ ರೂಪವು ಕಷ್ಟದಲ್ಲಿಯೂ ನಂಬಿಕೆ ಮತ್ತು ಭರವಸೆಯನ್ನು ಹೊಂದಿ ತಾಳ್ಮೆಯನ್ನು ಹೊಂದುವದಾಗಿದೆ. ಕೇವಲ ಅಭೀಪ್ಸೆ ಇದ್ದಲ್ಲಿ ಮಾತ್ರ ನಂಬಿಕೆ ಮತ್ತು ಭರವಸೆ ಇರುತ್ತದೆ ಎನ್ನುವ ಯಾವುದೇ ನಿಯಮವಿಲ್ಲ. ತದ್ವಿರುದ್ಧವಾಗಿ, ತಮಸ್ಸಿನ ಒತ್ತಡದಿಂದಾಗಿ ಅಭೀಪ್ಸೆಯಿಲ್ಲದಿದ್ದಾಗ, ಆವಾಗಲೂ ನಂಬಿಕೆ ಮತ್ತು ಭರವಸೆ ಹಾಗು ತಾಳ್ಮೆಯನ್ನು ಉಳಿಸಿಕೊಳ್ಳಬಹುದು. ಅಭೀಪ್ಸೆಯು ನಿಶ್ಚಲವಾದಾಗ, ನಂಬಿಕೆ ಮತ್ತು ತಾಳ್ಮೆಯು ಸೋಲಬಹುದು.ಅಂದರೆ ಸಾಧಕನು ಕೇವಲ ತನ್ನ ವೈಯಕ್ತಿಕ ಪ್ರಯತ್ನದ ಮೇಲೆ ಅವಲಂಬಿತನಾಗಿದ್ದಾನೆ ಎಂದರ್ಥ – ಅಂದರೆ, 'ಓಹ್, ನನ್ನ ಅಭೀಪ್ಸೆಯು ಸೋತಿದೆ, ನನಗೆ ಯಾವ ಭರವಸೆಯೂ ಉಳಿದಿಲ್ಲ, ನನ್ನ ಅಭೀಪ್ಸೆಯೇ ಸೋತಿರುವಾಗ, ಶ್ರೀಮಾತೆಯವರು ತಾನೇ ಏನು ಮಾಡಲು ಸಾಧ್ಯ?'

ತದ್ವಿರುದ್ಧವಾಗಿ ಸಾಧಕನ ಭಾವನೆ ಹೀಗಿರಬೇಕು – 'ಪರವಾಗಿಲ್ಲ, ನನ್ನ ಅಭೀಪ್ಸೆಯು ಮರಳಿ ಬರುತ್ತದೆ. ಈ ನಡುವೆ ಆಕೆಯನ್ನು ನಾನು ಭಾವಿಸದಿದ್ದರೂ ಶ್ರೀಮಾತೆಯವರೇ ನನ್ನ ಜೊತೆಗೆ ಇದ್ದಾರೆ ಎನ್ನುವದು ನನಗೆ ತಿಳಿದಿದೆ; ಈ ಕಗ್ಗತ್ತಲಿನ ಸಮಯದಲ್ಲಿಯೂ ಆಕೆ ನನ್ನನ್ನು ಎತ್ತಿಕೊಂಡು ಒಯ್ಯುತ್ತಾಳೆ', ಸಂಪೂರ್ಣವಾಗಿ ಹೊಂದಬೇಕಾದ ಸರಿಯಾದ ಮನೋಧೋರಣೆ ಹೊಂದಿದವರನ್ನು ಖಿನ್ನತೆಯೂ ಸಹ ಏನೂ ಮಾಡಲಾರದು; ಅದು ಬಂದರೂ ಅದುವೇ ತಬ್ಬಿಬ್ಬಾಗಿ ವಾಪಾಸಾಗಬೇಕಾಗುತ್ತದೆ. ಇದು ತಾಮಸಿಕ ಆತ್ಮ ಸಮರ್ಪಣೆಯಲ್ಲ. ತಾಮಸಿಕ ಆತ್ಮ ಸಮರ್ಪಣೇ ಎಂದರೆ, – ನಾನೇನೂ ಮಾಡುವದಿಲ್ಲ; ಶ್ರೀಮಾತೆಯವರೇ ಎಲ್ಲವನ್ನೂ ಮಾಡಲಿ. ಅಭೀಪ್ಸೆ, ತಿರಸ್ಕಾರ, ಆತ್ಮಸಮರ್ಪಣೆಯ ಅವಶ್ಯಕತೆಯೂ ಇರುವದಿಲ್ಲ. ನನ್ನಲ್ಲಿ ಎಲ್ಲವನ್ನೂ ಆಕೆಯೇ ಮಾಡಲಿ'.

ಈ ಎರಡೂ ಮನೋಧೋರಣೆಯ ನಡುವೆ ಬಹಳಷ್ಟು ವ್ಯತ್ಯಾಸವಿದೆ. ಒಂದು ಏನನ್ನೂ ಮಾಡದ ಸೋಮಾರಿಯ ಮನೋಧೋರಣೆಯಾಗಿದೆ. ಇನ್ನೊಂದು ಸಾಧಕನ ಅತ್ಯುತ್ತಮ ಪ್ರಯತ್ನವಾಗಿದೆ. ಆತ ಕೆಲ ಸಮಯ

ನಿಶ್ಚಲನಾದಾಗ, ಮತ್ತು ಪ್ರತಿಕೂಲ ವಾತಾವರಣವಿದ್ದಾಗ, ತನ್ನ ಹಿಂದಿರುವ ಶ್ರೀಮಾತೆಯ ಶಕ್ತಿ ಮತ್ತು ಸಾನಿಧ್ಯದ ಮೇಲೆ ಯಾವಾಗಲೂ ನಂಬಿಕೆಯನ್ನು ಇಟ್ಟಿರುತ್ತಾನೆ. ಈ ನಂಬಿಕೆಯೇ ವಿರೋಧಿ ಶಕ್ತಿಗಳನ್ನು ತಬ್ಬಿಬ್ಬುಗೊಳಿಸಿ ಸಾಧನದ ಚಟುವಟಿಕೆಗಳನ್ನು ಸುಗಮಗೊಳಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/139–40**

***ನನ್ನ ಸತ್ತೆಯ ಎಲ್ಲಾ ಭಾಗಗಳು ಶ್ರೀಮಾತೆಯವರ ಕಡೆಗೆ ತಿರುಗಲು ಮತ್ತು ಶರಣಾಗಲು ಎಷ್ಟು ಸಮಯ ಬೇಕಾಗುತ್ತದೆ?***


ಅದು ನಿಮ್ಮ ಮೇಲೆ ಅವಲಂಬಿತವಾಗಿರುವ ವಿಷಯವಾಗಿದೆ. ಒಂದು ವೇಳೆ ನಿನ್ನ ಬಲವಾದ ಅಭೀಪ್ಸೆ ಮತ್ತು ನಿಶ್ಚಲತೆಯಿಂದ ಕೂಡಿದ ಸತತ ಪ್ರಯತ್ನ ಇದ್ದರೆ, ಆದಷ್ಟು ತೀವ್ರವಾಗಿ ಈಡೇರಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/40**

**ಚೈತ್ಯದ ಭಾವನೆ**

ಶ್ರೀಮಾತೆಯವರ 'ಬೆಳಕು ಮತ್ತು ಶಕ್ತಿಯ'ಯ ಸಂಪರ್ಕದಲ್ಲಿರುವದು ಒಂದು ಮೂಲಭೂತವಾದ ವಿಷಯವಾಗಿದೆ. ಇದಕ್ಕಾಗಿ ನೀವು ಅಭೀಪ್ಸೆ ಪಡಲೇಬೇಕು. ಇದಕ್ಕಾಗಿ ಚೈತ್ಯನ ಭಾವನೆಯು ಅತ್ಯಾವಶ್ಯಕವಾದ ಸ್ಥಿತಿಯಾಗಿದೆ; ಚೈತ್ಯನ ಮೂಲಕವೇ ಈ ಸಂಪರ್ಕವು ಸರಳ ಮತ್ತು ಸಹಜವಾಗಿರಲು ಸಾಧ್ಯವಾಗುತ್ತದೆ. ಇವು ಚೈತ್ಯನ ಆಧಾರವನ್ನು ಕೊಡುತ್ತದೆ. ಒಮ್ಮೆ ಈ ಆಧಾರ ಅಥವಾ ತಳಹದಿಯು ದೃಢವಾಗಿ ಸ್ಥಾಪಿತವಾದ ಮೇಲೆ ಉಳಿದುದೆಲ್ಲವನ್ನು ಅವಶ್ಯಕತೆಗೆ ಅನುಗುಣವಾಗಿ ಮಾಡಬಹುದು, ಅಷ್ಟೇ ಅಲ್ಲ ಅದನ್ನು ಇನ್ನೂ ಚೆನ್ನಾಗಿ ಮಾಡಬಹುದು. ಏಕೆಂದರೆ ಅಸುರೀ ಶಕ್ತಿಗಳ ಆಕ್ರಮಣದಿಂದ ದೂರವಾಗಿರುವ ಸುರಕ್ಷಿತ ಮತ್ತು ಸೂಕ್ತ ಮಾರ್ಗದರ್ಶನ ಇಲ್ಲಿ ಇರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/136–37 – ಶ್ರೀ ಅರವಿಂದರು**



ಶ್ರೀಮಾತೆಯವರ ಶಕ್ತಿಯು ನಿನ್ನಲ್ಲಿ ಕಾರ್ಯಗೈಯಲಿ. ಆದರೆ ಯಾವುದೇ ಕಲಬೆರಕೆ ಅಥವಾ ಪರ್ಯಾಯವಾದುದಾಗಲೀ ಅದರ ಜಾಗದಲ್ಲಿ ವರ್ಧಿತ ಅಹಂಕಾರದ ಕಾರ್ಯ ಅಥವಾ ಅಜ್ಞಾನದ ಶಕ್ತಿಯು ತಾನೇ 'ಸತ್ಯ'ವೆಂದು ವ್ಯಕ್ತಪಡಿಸುವದಾಗಲಿ ಇರದ ಹಾಗೆ ಜಾಗರೂಕರಾಗಿರಿ. ಪ್ರಕೃತಿಯಲ್ಲಿರುವ ಎಲ್ಲಾ ಅಸ್ಪಷ್ಟತೆ ಮತ್ತು ಅಪ್ರಜ್ಞಾಪೂರ್ವಕ ಅಂಶಗಳನ್ನು ತೆಗೆದು ಹಾಕಲು ವಿಶೇಷವಾಗಿ ಅಭೀಪ್ಸೆ ಪಡಿ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/136 – ಶ್ರೀ ಅರವಿಂದರು**

## ಅಭೀಪ್ಸೆ– ಆಹ್ವಾನ–ಸಮರ್ಥನೆ

**– ಅನು: ಡಾ॥ ಮಹಾದೇವ ಸಕ್ರಿ, ವಿಜಯಪುರ**

**ಆಹ್ವಾನಿಸುವಿಕೆ ಮತ್ತು ಸೆಳೆಯುವಿಕೆ (ಆಕರ್ಷಣೆ)**

***ನನ್ನ ಪ್ರೀತಿಯ ಮಾ, ಶ್ರೀಮಾತೆಯವರ ಪ್ರಭಾವಕ್ಕೆ ಸಂಬಂಧಿಸಿದಂತೆ, ಆಹ್ವಾನಿಸುವಿಕೆ ಮತ್ತು ಸೆಳೆಯುವಿಕೆ ಇವುಗಳ ಮಧ್ಯೆ ಏನಾದರೂ ವ್ಯತ್ಯಾಸವಿದೆಯೇ, ಇದ್ದರೆ ತಿಳಿಸಿ.***

ನಿಶ್ಚಿತವಾಗಿಯೂ ಅವೆರಡರ ಮಧ್ಯೆ ಬಹಳೆ ವ್ಯತ್ಯಾಸವಿದೆ – ಸಹಾಯಕ್ಕಾಗಿ ಮತ್ತು ಬೇರೆ ಯಾವುದಕ್ಕೂ ನೀನು ಯಾವಾಗಲು ಕರೆಯಬಹುದು ಮತ್ತು ಕರೆಯಲೇಬೇಕು – ಕರೆಗೆ ಉತ್ತರವು, ನಿನ್ನ ಮನ್ನಣೆಯ ಹಾಗೂ ಸ್ವೀಕೃತಿಯ ಸಾಮರ್ಥ್ಯಕ್ಕೆ ತಕ್ಕಂತೆ ಇರುತ್ತದೆ. ಸೆಳೆಯುವಿಕೆಯು ಒಂದು ಸ್ವಾರ್ಥಪ್ರೇರಿತ ಕ್ರಿಯೆಯಾಗಿದೆ, ಅದು ನಿಮ್ಮ ಸಾಮರ್ಥ್ಯಗಳ ಅನುಗುಣಕ್ಕಿಂತ ಕಡಿಮೆ

ಪ್ರಮಾಣದಲ್ಲಿ ಶ್ರೀಮಾತೆಯವರ ಪ್ರಭಾವಗಳನ್ನು ತರಬಹುದು. ಹಾಗಾಗಿ ಅದೊಂದು ಹಾನಿಕಾರಕ ಕ್ರಿಯೆಯಾಗಿದೆ.

***ಆದರೆ, ಶ್ರೀಮಾತೆಯವರನ್ನು ಕರೆಯದೆ, ನಾನು ನನ್ನ ಸಾಧನೆಯನ್ನು ಹೇಗೆ ಮುಂದುವರೆಸುವುದು? ಅಭೀಪ್ಸೆ ಪಟ್ಟು ನಾನದನ್ನು ಸೆಳೆಯಬಹುದೆ?***

ಅಭೀಪ್ಸೆ ಪಡುವುದು ಮತ್ತು ಸಹಾಯಕ್ಕಾಗಿ ಕರೆಯುವುದು, ಇವೆರಡೂ ಅನಿವಾರ್ಯ.

*

**ಭೌತಿಕದಲ್ಲಿ ಅಭೀಪ್ಸೆ (ಹಂಬಲ/ಆಕಾಂಕ್ಷೆ)**

ಭೌತಿಕವು, ದೈವೀ ಪ್ರೇಮಕ್ಕಾಗಿ ಭೌತಿಕದಲ್ಲಿನ ಆಕಾಂಕ್ಷೆಯು ಏನನ್ನೂ ಕೇಳುವುದಿಲ್ಲ ಎನ್ನುವುದನ್ನು ಸೂಚಿಸುತ್ತದೆ. ಅದರ ಸಹಜ ತೃಪ್ತಿಗಳು ಅತ್ಯಂತ ಅಪರ್ಯಾಪ್ತವಾಗಿವೆ ಎನ್ನುವುದನ್ನು ಅದು ಅರಿತುಕೊಳ್ಳುತ್ತದೆ. ಆದರೆ ಅಲ್ಲಿ ಯಾವುದೇ ರಾಜಿ ಅಥವಾ ಹೊಂದಾಣಿಕೆ ಇಲ್ಲ: ಒಂದು ವೇಳೆ ಭೌತಿಕವು ದೈವೀ ಪ್ರೇಮವನ್ನು ಬಯಸುವುದಾದರೆ, ಅದು ಅದನ್ನು ಮಾತ್ರ ಬಯಸಬೇಕು ಮತ್ತು “ನಾನು ದೈವೀ ಪ್ರೇಮವನ್ನು ಹೊಂದುತ್ತೇನೆ ಮತ್ತು ಅದೇ ಸಮಯದಲ್ಲಿ ನನ್ನ ಮಮಕಾರಗಳನ್ನು, ಅಗತ್ಯಗಳನ್ನು ಮತ್ತು ಸುಖಗಳನ್ನು ... ಬಿಡುವುದಿಲ್ಲ” ಎಂದು ಹೇಳಬಾರದು.

ಅಭೀಪ್ಸೆಯ ಮೂಲಸ್ಥಾನ ಚೈತ್ಯ ಕೇಂದ್ರವಾಗಿದೆ. ಅಲ್ಲಿಂದ ಅದು ಪುರುಷನ ಅಥವಾ ಜೀವಿಯ ಒಂದು ಭಾಗದಲ್ಲಿ ಅಥವಾ ಇನ್ನೊಂದರಲ್ಲಿ ಹೊರಹೊಮ್ಮುತ್ತದೆ ಅಥವಾ ಅಭಿವ್ಯಕ್ತಗೊಳ್ಳುತ್ತದೆ. ಭೌತಿಕದಲ್ಲಿನ ಅಭೀಪ್ಸೆಯ ಬಗ್ಗೆ ನಾನು ಮಾತನಾಡುವಾಗ, ಪ್ರಾಪಂಚಿಕ ಸೌಖ್ಯಕ್ಕಾಗಿ ಮತ್ತು ತನ್ನ ಯೋಗಕ್ಷೇಮಕ್ಕಾಗಿ ಹಂಬಲಿಸುವಂಥ ನಿಮ್ಮಲ್ಲಿಯ ಪ್ರಜ್ಞೆ ಎಂದು ಅರ್ಥ. ಅದು ನಿಮ್ಮ ಸ್ವಭಾವದ ಉನ್ನತ ಭಾಗಗಳಿಂದ ಒತ್ತಾಯಿಸಲ್ಪಡುತ್ತದೆ, ದೈವೀ ಪ್ರೇಮವನ್ನು ಪ್ರತ್ಯೇಕವಾಗಿ ಕೋರುತ್ತದೆ. ಸಾಮಾನ್ಯವಾಗಿ, ನೀವು ಅದಕ್ಕೆ ನಿಮ್ಮ ಉನ್ನತ ಭಾಗಗಳ ಮೂಲಕ ಬೆಳಕನ್ನು ತೋರಿಸಬೇಕಾಗುತ್ತದೆ; ಖಚಿತವಾಗಿ, ಇದನ್ನು ನಿರಂತರವಾಗಿ ಮಾಡಬೇಕಾಗುತ್ತದೆ. ಇಲ್ಲದಿದ್ದರೆ, ಭೌತಿಕವು ಎಂದಿಗೂ ಕಲಿತುಕೊಳ್ಳುವುದಿಲ್ಲ ಮತ್ತು ಅದು ಸ್ವತಃ ಕಲಿತುಕೊಳ್ಳುವ ಮುಂಚೆ ಅದು ಯುಗಗಳ ಪ್ರಕೃತಿಯ ಸಾಮಾನ್ಯ ಸುತ್ತನ್ನು ತೆಗೆದುಕೊಳ್ಳಬೇಕಾಗುತ್ತದೆ. ಪ್ರಕೃತಿಯ ಸುತ್ತುವ ಉದ್ದೇಶ, ಸಾಧ್ಯವಾದ ಎಲ್ಲ ರೀತಿಯ ತೃಪ್ತಿಗಳನ್ನು ಅದಕ್ಕೆ ತೋರಿಸುವುದಾಗಿದೆ ಮತ್ತು

ಅವುಗಳನ್ನು ಬರಿದುಮಾಡುವುದರಿಂದ ಅವುಗಳಲ್ಲಿಯ ಯಾವ ಸಂಗತಿಯೂ ನಿಜವಾಗಿಯೂ ಅದನ್ನು ತೃಪ್ತಿಪಡಿಸಲಾಗದು ಎಂದು ಮತ್ತು ಅವುಗಳಲ್ಲಿ ಕೆಳಗಿರುವಂಥದ್ದು ದೈವೀ ತೃಪ್ತಿಯನ್ನು ಬಯಸುತ್ತದೆ ಎಂದು ಮನವರಿಕೆ ಮಾಡಿಕೊಡುವುದು. ಯೋಗದಲ್ಲಿ, ನಾವು, ಪ್ರಕೃತಿಯ ನಿಧಾನವಾದ ಪ್ರಕ್ರಿಯೆಯನ್ನು ಕ್ಷಿಪ್ರಗೊಳಿಸುತ್ತೇವೆ ಮತ್ತು ಸತ್ಯವನ್ನು ನೋಡುವಂಥ ಮತ್ತು ಅದನ್ನು ಅಂಗೀಕರಿಸಲು ಹಾಗೂ ಅದನ್ನು ಆಶಿಸಲು ಕಲಿಸುವಂಥ ಭೌತಿಕ ಪ್ರಜ್ಞೆಗಾಗಿ ಒತ್ತಾಯಿಸುತ್ತೇವೆ. ಆದರೆ, ಅದಕ್ಕೆ ಸತ್ಯವನ್ನು ಹೇಗೆ ತೋರಿಸುವುದು? ಒಂದು ಕತ್ತಲ ಕೋಣೆಯಲ್ಲಿ ನೀವು ಬೆಳಕನ್ನು ತರುವಂತೆ. ನಿಮ್ಮ ಶುದ್ಧೀಕರಿಸಿದ ಭಾಗಗಳ ಸಾಕ್ಷಾತ್ಕಾರ ಹಾಗೂ ಆಕಾಂಕ್ಷೆಯಿಂದ ನಿಮ್ಮ ಭೌತಿಕ ಪ್ರಜ್ಞೆಯ ಕತ್ತಲನ್ನು ಬೆಳಕಾಗಿಸಿರಿ. ನಿಮ್ನವಾದ ಸಾಮಾನ್ಯ ಸಂಗತಿಗಳಿಗಾಗಿ ಅದರ ಹಸಿವು ಎಷ್ಟು ನಿರರ್ಥಕ ಹಾಗೂ ಅತೃಪ್ತಿಕರ ಎಂದು ಅದಕ್ಕೆ ಅರಿವು ಆಗುವವರೆಗೆ ಮತ್ತು ಅದು ಸತ್ಯದ ಕಡೆಗೆ ಹೊರಳುವವರೆಗೆ ನೀವಿದನ್ನು ಮಾಡುತ್ತ ಇರಬೇಕು. ಒಮ್ಮೆ ಅದು ಸತ್ಯದ ಕಡೆ ಹೊರಳಿದರೆ, ನಿಮ್ಮ ಇಡೀ ಜೀವನವೇ ಬದಲಾಗುತ್ತದೆ – ಅನುಭವವು ಸ್ಪಷ್ಟವಾಗುತ್ತದೆ.

ನಾನು ಚಿಕ್ಕವಳಿದ್ದಾಗ, ಆಹಾರದ ಬಗ್ಗೆ ಅಥವಾ ಇಂತಹ ಚಿಕ್ಕ ಸಂಗತಿಗಳ ಬಗ್ಗೆ ನನ್ನ ತಾಯಿಯ ಮುಂದೆ ಗೊಣಗುತ್ತಿದ್ದೆ. ಆಗ ಅವರು, ನಿನ್ನ ಕೆಲಸವನ್ನು ಮಾಡಿಕೊ ಹೋಗು, ನಿನ್ನ ಅಭ್ಯಾಸದ ಕಡೆ ಗಮನ ಕೊಡು, ಕೆಲಸಕ್ಕೆ ಬಾರದ ಸಂಗತಿಗಳ ಬಗ್ಗೆ ತಲೆ ಕೆಡಿಸಿಕೊಳ್ಳಬೇಡ ಎಂದು ಹೇಳುತ್ತಿದ್ದರು. “ನೀನು ಅತ್ಯುನ್ನತ ಆದರ್ಶವನ್ನು ಅರಿತುಕೊಳ್ಳಲು ಜನ್ಮ ತಾಳಿರುವಿ,” ಎಂದು ಹೇಳಿ ಅಲ್ಲಿಂದ ಕಳಿಸುತ್ತಿದ್ದರು. ನೀನು ಹಾಯಾದ ಜೀವನ ಸಾಗಿಸಲು ನೆಮ್ಮದಿಯ ಕಲ್ಪನೆಯನ್ನು ಹೊಂದಿದ್ದರೆ, ಅದನ್ನು ಬಿಟ್ಟುಬಿಡು ಎಂದು ಹೇಳುತ್ತಿದ್ದರು. ಅವರು ಹೇಳುವುದು ಸರಿಯಾಗಿತ್ತಾದರೂ, ಅವರು ಹೇಳುವ ಉನ್ನತ ಆದರ್ಶದ ಕಲ್ಪನೆಯು (ನಮ್ಮಮಟ್ಟಗಳಿಗಿಂತ) ಸಾಧಾರಣವಾಗಿತ್ತು. ನಾವೆಲ್ಲರೂ ಆ ಉನ್ನತ ಆದರ್ಶದ (ಆದರ್ಶವನ್ನು ಅರಿತುಕೊಳ್ಳುವ) ಸಲುವಾಗಿ ಜನಿಸಿದ್ದೇವೆ. ಆದ್ದರಿಂದ, ನಮ್ಮ ಆಶ್ರಮದಲ್ಲಿ, ಹೆಚ್ಚಿನ ಸೌಖ್ಯಕ್ಕಾಗಿ ಅಥವಾ ಪ್ರಾಪಂಚಿಕ ಸಂತೋಷಕ್ಕಾಗಿ ಮಾಡಿದ ಕ್ಷುಲ್ಲಕ ಮನವಿಯನ್ನು ತಿರಸ್ಕರಿಸಲಾಗುತ್ತದೆ. ಈ ತಿರಸ್ಕಾರವು ಸಾಧಕರ ಒಳಿತಿಗಾಗಿ, ಅವರ (ಆಶ್ರಮಕ್ಕೆ ಬಂದ) ಉದ್ದೇಶ ಈಡೇರುವ ಸಲುವಾಗಿ. ಹಾಗೆಯೇ, ಈ ತಿರಸ್ಕಾರವು, ಸಾಧಕರಿಗೆ ಮಾಡಿದ ಉಪಕಾರವಾಗಿದೆ ಮತ್ತು ಆ ಅತ್ಯುನ್ನತ

ಆದರ್ಶದ ಮುಂದೆ ನಿಂತು ಅದರ ಹಾಗೆ ರೂಪಗೊಳ್ಳಲು ಯೋಗ್ಯರನ್ನಾಗಿ ಮಾಡುವುದು ಈ ತಿರಸ್ಕಾರದ ಉದ್ದೇಶ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/130–31 – ಶ್ರೀಮಾತೆ**



ಶ್ರೀಮಾತೆಯವರ ಬೆಳಕನ್ನು ಮತ್ತು ಬಲವನ್ನು ನಿರಂತರವಾಗಿ ಆಶಿಸುವ ಮೂಲಕ ಮಾತ್ರ ನೀವು ನಿಜವಾದ ಮತ್ತು ಸ್ಥಿರವಾದ ಪ್ರಗತಿಯನ್ನು ಸಾಧಿಸಬಹುದು. ಶ್ರೀಮಾತೆಯವರ ಬೆಳಕು ಮತ್ತು ಬಲದ ನಿರಂತರ ಪುನರಾವರ್ತನೆಯಿಂದ ಮತ್ತು ಛಲದಿಂದ (ದೀರ್ಘ ಪ್ರಯತ್ನದಿಂದ) ಮಾತ್ರ ಅಸಮಾಧಾನದ ಅಭ್ಯಾಸ ಮತ್ತು ಸಂಘಟನೆಯ ಕೊರತೆಯು ಕಡಿಮೆಯಾಗಬಹುದು ಮತ್ತು ಅಂತಿಮವಾಗಿ ಕಣ್ಮರೆಯಾಗಬಹುದು. ಆಗ ಮಾತ್ರ, ನಿಮ್ಮ ಸ್ವಭಾವದ ಪುರುಷನನ್ನು ಸಿದ್ಧಪಡಿಸ–ಬಹುದು ಮತ್ತು ಸತ್ಯದ ಹಾಗೂ ಬೆಳಕಿನ ನಿರ್ಣಾಯಕ ಅವರೋಹಣವನ್ನು ಅಂತಿಮವಾಗಿ ಸಾಧ್ಯವಾಗಿಸಬಹುದು.

**– ಶ್ರೀ ಅರವಿಂದರು**

## ತೆರೆದುಕೊಳ್ಳುವ ಆಂತರ್ಯ

**ತೆರೆದುಕೊಳ್ಳುವುದು ಹೇಗೆ?**

***ನಿಜವಾದ ತೆರೆದುಕೊಳ್ಳುವಿಕೆ ಎಂದರೇನು?***

ತೆರೆದುಕೊಳ್ಳುವಿಕೆಯು, ಶ್ರೀಮಾತೆಯವರ ಉಪಸ್ಥಿತಿ ಮತ್ತು ಅವರ ಶಕ್ತಿಗಳಿಗೆ ನಮ್ಮ ಗ್ರಹಿಸುವಿಕೆಯಾಗಿದೆ (ಸ್ವೀಕರಿಸುವಿಕೆಯಾಗಿದೆ).

***ತೆರೆದುಕೊಳ್ಳುವಿಕೆಯ ಸರಿಯಾದ ಮತ್ತು ಪರಿಪೂರ್ಣ ನಿಯಮ ಯಾವುದು?***

ಆಕಾಂಕ್ಷೆ, ಸ್ತಬ್ಧತೆ, ಸ್ವೀಕೃತಿಗೆ ತನ್ನನ್ನು ತಾನು ವಿಶಾಲಗೊಳಿಸುವುದು, ನಿಮ್ಮನ್ನು ದೇವರೆಡೆಗೆ ಹೋಗುವುದನ್ನು ತಡೆಯಲು ಪ್ರಯತ್ನಿಸುವ ಎಲ್ಲವನ್ನು ತಿರಸ್ಕರಿಸುವುದು.

***ನಾನು ಶ್ರೀಮಾತೆಯವರ ಶಕ್ತಿಗಳಿಗೆ ತೆರೆದುಕೊಳ್ಳುತ್ತಿದ್ದೇನೆ ಮತ್ತು ಇತರ ಶಕ್ತಿಗಳಿಗೆ ಅಲ್ಲ ಎನ್ನುವುದನ್ನು ನಾನು ಹೇಗೆ ತಿಳಿಯಬೇಕು?***

ನೀನು ಜಾಗರೂಕನಾಗಿರಬೇಕು ಮತ್ತು ತೊಂದರೆಯ, ಬಯಕೆಯ, ಅಹಂನ ಕ್ರಿಯೆ ಅಲ್ಲಿ ಇಲ್ಲ ಎನ್ನುವುದನ್ನು ಗಮನಿಸಬೇಕು.

***ಶ್ರೀಮಾತೆಯವರಿಗೆ ನಾನು ನಿಜವಾಗಿಯೂ ತೆರೆದುಕೊಳ್ಳುತ್ತಿದ್ದೇನೆ ಎಂದು ತೋರಿಸುವ ಚಿಹ್ನೆಗಳು ಯಾವುವು?***

ನೀನು ದೈವೀ ಶಾಂತಿಯನ್ನು, ಸಮಾನತೆಯನ್ನು, ವಿಶಾಲತೆಯನ್ನು, ಬೆಳಕನ್ನು, ಆನಂದ, ಜ್ಞಾನ, ಶಕ್ತಿಯನ್ನು ಅನುಭವಿಸಿದಾಗ ಮತ್ತು ಶ್ರೀಮಾತೆಯವರ ಸಾಮಿಪ್ಯದ ಅಥವಾ ಅವರ ಶಕ್ತಿಯ ಇರುವಿಕೆಯ ಅಥವಾ ಅದರ ಕಾರ್ಯ ನಿರ್ವಹಿಸುವಿಕೆಯ, ಅರಿವು ನಿನಗಾದಾಗ, ತೆರೆದುಕೊಳ್ಳುವಿಕೆಯು ನಿನ್ನ ಗಮನಕ್ಕೆ ಬರುತ್ತದೆ. ಈ ಯಾವುದಾದರೂ ವಿಷಯಗಳು ನಿನ್ನ ಅನುಭವಕ್ಕೆ ಬಂದರೆ ಅದು ತೆರೆದುಕೊಳ್ಳುವಿಕೆ – ಇವುಗಳನ್ನು ನೀನು ಹೆಚ್ಚು ಅನುಭವಿಸಿದಂತೆ ತೆರೆದುಕೊಳ್ಳುವಿಕೆಯು ಹೆಚ್ಚು ಪೂರ್ಣವಿರುತ್ತದೆ.

***ಜೀವಿಯ ಅಥವಾ ಪುರುಷನ ಎಲ್ಲಾ ಗಂಟುಗಳನ್ನು ತೆರೆಯುವ ಮಾರ್ಗವೇನು?***

ಆಕಾಂಕ್ಷೆಯಿಂದ, ದೈವೀ ಶಕ್ತಿಯ ಕಾರ್ಯ ನಿರ್ವಹಿಸಲು ಜೀವಿಯ ಅನುಮತಿಯಿಂದ, ಆ ಬಲವು ನಮ್ಮಲ್ಲಿ ಇಳಿದು ಕಾರ್ಯ ನಿರ್ವಹಿಸುವುದರಿಂದ ಗಂಟುಗಳನ್ನು ತೆರೆಯಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/150**

***"ತೆರೆದುಕೊಳ್ಳುವಿಕೆ" ಎಂದರೇನು? "ಶ್ರೀಮಾತೆಯಿಂದ ಯಾವುದನ್ನೂ ರಹಸ್ಯವಾಗಿಡಬಾರದು" ಎನ್ನುವುದು ಇದರರ್ಥವೆ?***

ಅದು, ತೆರೆದುಕೊಳ್ಳಿವಿಕೆಯ ಕಡೆಗೆ ಮೊದಲ ಹೆಜ್ಜೆಯಾಗಿದೆ.

**ನಾವು "ತೆರೆದುಕೊಳ್ಳುವುದು" ಹೇಗೆ?**

ಶಾಂತ ಮನಸ್ಸಿನಲ್ಲಿ ನಂಬಿಕೆ ಮತ್ತು ಶರಣಾಗತಿಯಿಂದ.

**ಶ್ರೀಮಾತೆಯ ಶಕ್ತಿಗೆ ತೆರೆದುಕೊಂಡಿರುವ ಅರ್ಥ**

ಯಾವ ಸಂಗತಿಯೂ ಶ್ರೀಮಾತೆಯವರ ಕಾರ್ಯವನ್ನು ತಿರಸ್ಕರಿಸದೆ ಅಥವಾ ಅಡ್ಡಿಗೊಳಿಸದೆ ನಿಮ್ಮಲ್ಲಿ ಕೆಲಸ ಮಾಡುವಂತೆ ಮಾಡುವಷ್ಟು ಅವರ ಕಡೆಗೆ ಹೊರಳುವುದೇ ತೆರೆದುಕೊಂಡಿರುವಿಕೆಯಾಗಿದೆ. ಮನಸ್ಸು ತನ್ನದೇ ಆದ ಆಲೋಚನೆಗಳಲ್ಲಿ ಮುಳುಗಿಹೋಗಿದ್ದರೆ ಮತ್ತು ಬೆಳಕು ಮತ್ತು ಸತ್ಯವನ್ನು ತರಲು ಶ್ರೀಮಾತೆಯವರಿಗೆ ಅನುಮತಿಯನ್ನು ನಿರಾಕರಿಸಿದರೆ, ಪ್ರಾಣವು ತನ್ನ ಆಸೆಗಳಿಗೆ ಅಂಟಿಕೊಂಡಿದ್ದರೆ ಮತ್ತು ಶ್ರೀಮಾತೆಯವರ ಪ್ರಭಾವವು ತರುವಂಥ ನೈಜ ಪ್ರಾರಂಭವನ್ನು ಹಾಗೂ ಪ್ರಚೋದನೆಗಳನ್ನು ಒಪ್ಪಿಕೊಳ್ಳದಿದ್ದರೆ, ಭೌತಿಕವು ತನ್ನ ಬಯಕೆಯಲ್ಲಿ, ಅಭ್ಯಾಸಗಳಲ್ಲಿ ಮತ್ತು ಜಡತ್ವದಲ್ಲಿ ಬಂದಿಯಾಗಿದ್ದರೆ ಮತ್ತು ಬೆಳಕು ಹಾಗೂ ಬಲ ಅದನ್ನು (ಭೌತಿಕ) ಪ್ರವೇಶಿಸಿ ಕಾರ್ಯ ಮಾಡಲು ಅನುಮತಿಸದಿದ್ದರೆ, ಆಗ ನಾವು ತೆರೆದುಕೊಂಡಿಲ್ಲ ಎಂದು ಅರ್ಥ. ಎಲ್ಲಾ ಕ್ರಿಯೆಗಳಲ್ಲಿ ಏಕ ಕಾಲದಲ್ಲಿ ಸಂಪೂರ್ಣವಾಗಿ ತೆರೆದುಕೊಳ್ಳಲು ಸಾಧ್ಯವಿಲ್ಲ, ಆದರೆ ಪ್ರತಿಯೊಂದು ಭಾಗದಲ್ಲಿ ಒಂದು ಪ್ರಮುಖ ಅಥವಾ ಪ್ರಧಾನ ತೆರೆದುಕೊಳ್ಳುವಿಕೆ ಮತ್ತು ಪ್ರತಿಯೊಂದು ಭಾಗದಲ್ಲಿ ಶ್ರೀಮಾತೆಯವರ ಕಾರ್ಯಗಳನ್ನು ಮಾತ್ರ ಒಪ್ಪಿಕೊಳ್ಳಲು (ಮನಸ್ಸಿನಲ್ಲಿ ಮಾತ್ರವಲ್ಲದೆ) ಒಂದು ಪ್ರಬಲವಾದ ಆಕಾಂಕ್ಷೆ ಅಥವಾ ಇಚ್ಛೆ ಇರಲೇಬೇಕು, ಆಗ ಉಳಿದ್ದನ್ನು ಹಂತ–ಹಂತವಾಗಿ ಮಾಡಲಾಗುತ್ತದೆ.

*

ನಾವು ಶ್ರೀಮಾತೆಯವರಿಗೆ ತೆರೆದುಕೊಂಡಿರಬೇಕೆಂದರೆ, ನಾವು ಯಾವಾಗಲೂ ಶಾಂತವಾಗಿ ಮತ್ತು ಸಂತೋಷದಿಂದ ಮತ್ತು ಆತ್ಮವಿಶ್ವಾಸದಿಂದ ಇರಬೇಕು, ಪ್ರಕ್ಷುಬ್ಧವಾಗಿರಬಾರದು, ದುಃಖಿಸಬಾರದು ಅಥವಾ ಎದೆಗುಂದಬಾರದು, ನಿಮ್ಮನ್ನು ನಿರ್ದೇಶಿಸಲು, ನಿಮಗೆ ಜ್ಞಾನವನ್ನು ಕೊಡಲು, ನಿಮಗೆ ಶಾಂತಿ ಹಾಗೂ ಆನಂದವನ್ನು ಕೊಡಲು ಮಾತೆಯವರ ಶಕ್ತಿಯು ನಿಮ್ಮಲ್ಲಿ ಕಾರ್ಯ ಮಾಡಲು ಬಿಡಬೇಕು. ನಿಮ್ಮನ್ನು ನೀವು ಮುಕ್ತವಾಗಿರಿಸಿಕೊಳ್ಳಲು ಸಾಧ್ಯವಾಗದಿದ್ದರೆ, ಆಗ

ನೀವು ನಿರಂತರವಾಗಿ ಹಂಬಲಿಸಿ, ಆದರೆ ಸದ್ದಿಲ್ಲದೆ; ಆಗ ನೀವು ತೆರೆದುಕೊಳ್ಳಲು ಸಾಧ್ಯವಾಗಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/150–51 – ಶ್ರೀ ಅರವಿಂದರು**

**ಆಕಾಂಕ್ಷೆ ಮತ್ತು ಬೇಡಿಕೆ**

***ಆಕಾಂಕ್ಷೆ ಮತ್ತು ಬೇಡಿಕೆ, ಇವುಗಳ ನಡುವಿನ ವ್ಯತ್ಯಾಸವೇನು?***

ನೀನು ಅವೆರಡನ್ನೂ ಅನುಭವಿಸಿದಾಗ, ಅವುಗಳ ನಡುವಿನ ವ್ಯತ್ಯಾಸವನ್ನು ಗಮನಿಸಬಹುದು. ಆಕಾಂಕ್ಷೆಯಲ್ಲಿ, ನಾನು ಕರೆಯಬಹುದಾದ ಒಂದು ನಿಸ್ವಾರ್ಥ ಜ್ವಾಲೆ ಎನ್ನುವುದು ಇದೆ, ಆದರೆ ಅದು ಬಯಕೆಯಲ್ಲಿ ಇಲ್ಲ. ನಿಮ್ಮ ಆಕಾಂಕ್ಷೆಯು ನಿಮ್ಮ ಮೇಲಿನ ತಿರುಗು ಬಾಣವಲ್ಲ – ಆದರೆ ಬಯಕೆಯು ಯಾವಾಗಲೂ ನಮ್ಮ ಕಡೆಗೆ ತಿರುಗುತ್ತದೆ. ಮನೋವೈಜ್ಞಾನಿಕ ದೃಷ್ಟಿಯಿಂದ, ಆಕಾಂಕ್ಷೆಯು ನಮ್ಮ ಸಮರ್ಪಣೆಯಾಗಿದೆ (ಯಾವಾಗಲೂ), ಆದರೆ ಬಯಕೆ ಎನ್ನುವುದು ಯಾವಾಗಲೂ ನಾವು ನಮ್ಮ ಕಡೆಗೆ ಸೆಳೆಯುವಂಥ ಸಂಗತಿಯಾಗಿದೆ; ಆಕಾಂಕ್ಷೆಯು, ತನ್ನನ್ನು ತಾನು ಕೊಟ್ಟುಕೊಳ್ಳುವ ಸಂಗತಿಯಾಗಿದೆ, ಅದು ಚಿಂತನೆಯ ರೂಪದಲ್ಲಿಯೇ ಇರಬೇಕೆಂದೇನಿಲ್ಲ, ಆದರೆ ಅದು ಕ್ರಿಯೆಯಲ್ಲಿ, ಕಂಪನದಲ್ಲಿ, ಪ್ರಾಣ ಪ್ರಚೋದನೆಯಲ್ಲಿ ಇರಬಹುದು.

ನಿಜವಾದ ಆಕಾಂಕ್ಷೆ ಮಸ್ತಿಷ್ಕದಿಂದ ಬರುವುದಿಲ್ಲ; ಅದು ಒಂದು ಚಿಂತನೆಯಿಂದ ರೂಪಿತವಾದಾಗಲೂ, ಅದು ಹೃದಯದಿಂದ ಜ್ವಾಲೆಯಂತೆ ಚಿಮ್ಮುತ್ತದೆ. ವೇದಗಳ ಬಗ್ಗೆ ಶ್ರೀ ಅರಬಿಂದೋ ಅವರು ಬರೆದ ಲೇಖನಗಳನ್ನು ನೀವು ಓದಿರುವ ಬಗ್ಗೆ ನನಗೆ ತಿಳಿದಿಲ್ಲ. ಈ ಶ್ಲೋಕಗಳನ್ನು ಮನಸ್ಸಿನಿಂದ ಬರೆಯಲಾಗಿಲ್ಲ ಎಂದು ಅವರು, ಎಲ್ಲೋ ಒಂದು ಕಡೆ ವಿವರಿಸುತ್ತಾರೆ; ನಾವು ಯೋಚನೆ ಮಾಡಿದಂತೆ ಅವುಗಳನ್ನು ಬರೆಯಲಾಗಿಲ್ಲ, ಆದರೆ ಇದೊಂದು ಆಕಾಂಕ್ಷೆಯ ಅಭಿವ್ಯಕ್ತಿಯಾಗಿತ್ತು, ಹೃದಯದಿಂದ ಬರುವ ಒಂದು ಜ್ವಾಲೆಯಂತೆ (ನಿಖರವಾದ ಪದಗಳಲ್ಲಿ ಹೇಳಬೇಕೆಂದರೆ, ಈ ಅಭಿವ್ಯಕ್ತಿ "ಹೃದಯ"ವಲ್ಲವಾದರೂ, ಅದು ಪುರುಷನ ಮನೋವೈಜ್ಞಾನಿಕ ಕೇಂದ್ರವಾಗಿದೆ). ಅವುಗಳು "ಪೂರ್ವ ಯೋಜಿತ"ವಲ್ಲದ ಚಿಂತನೆಗಳು, ಪದಗಳು ಅನುಭವಗಳಿಗೆ ಹೊಂದಿದವುಗಳಲ್ಲ, ಅನುಭವವು ಅತ್ಯಂತ ನಿಖರವಾದ, ಅನಿವಾರ್ಯ ಪದಗಳೊಂದಿಗೆ ಸಂಪೂರ್ಣವಾಗಿ ರೂಪಿಸಲ್ಪಟ್ಟಿತು –

ಅವುಗಳನ್ನು ಬದಲಾಯಿಸಲು ಸಾಧ್ಯವಿಲ್ಲ. ಇದು ಆಕಾಂಕ್ಷೆಯ ಸ್ವರೂಪವಾಗಿದೆ: ನೀವು ಅದನ್ನು ರೂಪಿಸಲು ಪ್ರಯತ್ನಿಸುವುದಿಲ್ಲ, ಅದು ಸಿದ್ಧ ಜ್ವಾಲೆಯಂತೆ ನಿಮ್ಮಿಂದ ಪುಟಿಯುತ್ತದೆ. ಮತ್ತು ಕೆಲವೊಮ್ಮೆ ಪದಗಳಿದ್ದರೆ (ಕೆಲವೊಮ್ಮೆ ಯಾವುದೂ ಇಲ್ಲ), ಅವುಗಳನ್ನು ಬದಲಾಯಿಸಲಾಗುವುದಿಲ್ಲ: ನೀವು ಒಂದು ಪದವನ್ನು ಇನ್ನೊಂದರಿಂದ ಬದಲಾಯಿಸಲು ಸಾಧ್ಯವಿಲ್ಲ, ಪ್ರತಿಯೊಂದು ಪದವೂ ಸಂದರ್ಭಕ್ಕೆ ಸೂಕ್ತವಾಗಿದೆ. ಆಕಾಂಕ್ಷೆಯನ್ನು ನಿಸ್ಸಂದಿಗ್ಧವಾಗಿ, ಸ್ಪಷ್ಟವಾಗಿ, ಬದಲಾವಣೆಯ ಯಾವುದೇ ಸಾಧ್ಯತೆಯಿಲ್ಲದೆ ರೂಪಿಸಲಾಗುತ್ತದೆ. ಮತ್ತು ಇದು ಯಾವಾಗಲೂ ಎದ್ದು ಕಾಣುವ ಮತ್ತು ತನ್ನನ್ನು ತಾನು ಕೊಟ್ಟುಕೊಳ್ಳುವ ಸಂಗತಿಯಾಗಿದೆ, ಆದರೆ ವಿಷಯಗಳನ್ನು ತನ್ನ ಕಡೆಗೆ ಎಳೆದುಕೊಳ್ಳುವುದು ಬಯಕೆಯ ಸ್ವರೂಪವಾಗಿದೆ.

ಆಕಾಂಕ್ಷೆಯಲ್ಲಿನ ಪ್ರೀತಿಯ ಮತ್ತು ಬಯಕೆಯಲ್ಲಿನ ಪ್ರೀತಿಯ ನಡುವಿನ ಅಗತ್ಯ ವ್ಯತ್ಯಾಸವೆಂದರೆ, ಆಕಾಂಕ್ಷೆಯಲ್ಲಿನ ಪ್ರೀತಿಯು ತನ್ನನ್ನು ತಾನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುತ್ತದೆ ಮತ್ತು ಪ್ರತಿಯಾಗಿ ಏನನ್ನೂ ಕೇಳುವುದಿಲ್ಲ – ಹಕ್ಕನ್ನು ಸಾಧಿಸುವುದಿಲ್ಲ. ಆದರೆ, ಬಯಕೆಯಲ್ಲಿನ ಪ್ರೀತಿಯು ಸಾಧ್ಯವಾದಷ್ಟು ಕಡಿಮೆ ನೀಡುತ್ತದೆ, ಸಾಧ್ಯವಾದಷ್ಟು ಕೇಳುತ್ತದೆ, ಅದು ವಿಷಯಗಳನ್ನು ತನ್ನೆಡೆಗೆ ಎಳೆಯುತ್ತದೆ ಮತ್ತು ಯಾವಾಗಲೂ ಬೇಡಿಕೆಗಳನ್ನು ಮುಂದಿಡುತ್ತದೆ.

***ಆಕಾಂಕ್ಷೆಯು ಯಾವಾಗಲೂ ಸಂತೋಷವನ್ನು ನೀಡುತ್ತದೆ, ಅಲ್ಲವೇ?***

ಖಚಿತವಾಗಿ ಅದೊಂದು ವಿಪುಲತೆಯ ಅನುಭವ – "ಸಂತೋಷ" ಎನ್ನುವುದು ತಪ್ಪು ದಾರಿತೋರುವ ಪದವಾಗಿದೆ; ಅದು ವಿಪುಲತೆಯ, ಬಲದ, ನಿಮ್ಮನ್ನು ವ್ಯಾಪಿಸುವವಂಥ ಒಂದು ಆಂತರಿಕ ಜ್ವಾಲೆಯ ಸಮೃದ್ಧಿಯ ಭಾವನೆಯನ್ನು ನೀಡುತ್ತದೆ. ಆಕಾಂಕ್ಷೆಯು ನಿಮಗೆ ಸಂತೋಷವನ್ನು ನೀಡಬಹುದು, ಬಹಳ ವಿಶೇಷವಾದ ಸಂತೋಷ, ಆದರೆ ಅದರಲ್ಲಿ ಯಾವುದೇ ಉತ್ಸಾಹವಿರುವುದಿಲ್ಲ.

***ಆತ್ಮ ಮತ್ತು ಚೈತ್ಯ ಪುರುಷ, ಇವೆರಡೂ ಸಂಗತಿಗಳು ಒಂದೇ ಆಗಿವೆಯೆ?***

ಅದು ನೀವು ಪದಗಳಿಗೆ ನೀಡುವ ವ್ಯಾಖ್ಯಾನವನ್ನು ಅವಲಂಬಿಸಿರುತ್ತದೆ. ಹೆಚ್ಚಿನ ಧರ್ಮಗಳಲ್ಲಿ, ಮತ್ತು ಬಹುಶಃ ಹೆಚ್ಚಿನ ತತ್ತ್ವ ಚಿಂತನೆಗಳಲ್ಲೂ ಸಹ, ಪ್ರಾಣ ಪುರುಷನನ್ನು "ಆತ್ಮ"ನೆಂದು ಕರೆಯುತ್ತಾರೆ, ಏಕೆಂದರೆ "ಆತ್ಮವು ದೇಹವನ್ನು ತೊರೆಯುತ್ತದೆ" ಎಂದು ಹೇಳಲಾಗುತ್ತದೆ, ಬದಲಿಗೆ ದೇಹವನ್ನು ತೊರೆಯುವುದು

ಪ್ರಾಣ ಪುರುಷ. "ಆತ್ಮವನ್ನು ಕಾಪಾಡುವುದು", "ದುಷ್ಟ ಆತ್ಮಗಳು", "ಆತ್ಮವನ್ನು ಉದ್ಧರಿಸುವುದು" ... ಎಂದು ನಾವು ಮಾತನಾಡುತ್ತೇವೆ, ಆದರೆ ಅದೆಲ್ಲವೂ ಅನ್ವಯವಾಗುವುದು ಪ್ರಾಣ ಪುರುಷನಿಗೆ, ಚೈತ್ಯ ಪುರುಷನನ್ನು ಉಳಿಸುವ ಅಗತ್ಯವಿಲ್ಲ! ಇದು ಬಾಹ್ಯ ವ್ಯಕ್ತಿಯ ದೋಷಗಳನ್ನು ಹಂಚಿಕೊಳ್ಳುವುದಿಲ್ಲ, ಇದು ಎಲ್ಲಾ ಪ್ರತಿಕ್ರಿಯೆಗಳಿಂದ ಮುಕ್ತವಾಗಿದೆ.

*

**ಏಕಾಗ್ರತೆಯನ್ನು ತೀವ್ರಗೊಳಿಸಿ**

> ***ನಾವು ಯಾವುದೇ ಕೆಲಸ ಮಾಡುವಾಗ ಮತ್ತು ಅದನ್ನು ಅತ್ಯುತ್ತಮವಾಗಿ ಮಾಡಲು ಬಯಸಿದಾಗ, ನಮಗೆ ಹೆಚ್ಚು ಸಮಯ ಬೇಕಾಗುತ್ತದೆ. ಆದರೆ ಸಾಮಾನ್ಯವಾಗಿ ನಮಗೆ ಸಮಯದ ಅಭಾವವಿದೆ, ನಾವು ಅವಸರದಲ್ಲಿದ್ದೇವೆ. ನಾವು ಅವಸರದಲ್ಲಿದ್ದಾಗ ಕೆಲಸವನ್ನು ಅತ್ಯುತ್ತಮವಾಗಿ ಹೇಗೆ ಮಾಡುವುದು?***

ಇದು ಬಹಳ ಆಸಕ್ತಿದಾಯಕ ವಿಷಯವಾಗಿದೆ ಮತ್ತು ನಾನು ಅದರ ಬಗ್ಗೆ ಒಂದು ದಿನ ವಿವರವಾಗಿ ನಿಮ್ಮೊಂದಿಗೆ ಮಾತನಾಡಲು ಬಯಸುತ್ತೇನೆ. ಸಾಮಾನ್ಯವಾಗಿ, ನಾವು ಅವಸರದಲ್ಲಿದ್ದಾಗ, ನಾವು ಮಾಡಬೇಕಾಗಿರುವುದನ್ನು ಸಂಪೂರ್ಣವಾಗಿ (ಉತ್ತಮವಾಗಿ) ಮಾಡುವುದಿಲ್ಲ, ಅಥವಾ ಮಾಡಿದ್ದನ್ನು ಕೆಟ್ಟದಾಗಿ ಮಾಡುತ್ತೇವೆ. ಕೆಲಸವನ್ನು ಅತ್ಯುತ್ತಮವಾಗಿ ಮಾಡಲು ಮೂರನೆಯ ಮಾರ್ಗವೊಂದಿದೆ. ನಮ್ಮ ಏಕಾಗ್ರತೆಯನ್ನು ತೀವ್ರಗೊಳಿಸುವುದೇ ಆ ಮಾರ್ಗ. ನೀವು ಅದನ್ನು ಮಾಡಿದರೆ ಅರ್ಧ ಸಮಯವನ್ನು ಉಳಿಸಬಹುದು. ಬಹಳೇ ಸಾಮಾನ್ಯವಾದ ಒಂದು ಉದಾಹರಣೆಯನ್ನು ತೆಗೆದುಕೊಳ್ಳಿ: ಸ್ನಾನ ಮಾಡಿ ಕೆಲಸಕ್ಕೆ ಸಿದ್ಧವಾಗುವುದು; ಇದಕ್ಕೆ ತಗಲುವ ಸಮಯ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತದೆ, ಅಲ್ಲವೇ? ಆದರೆ ಈ ಕೆಲಸವನ್ನು ಮಾಡಲು ಅರ್ಧ ಘಂಟೆಯ ಸಮಯದ ಅಗತ್ಯವಿದೆ ಎಂದು ಅಂದುಕೊಳ್ಳೋಣ (ಸಮಯವನ್ನು ವ್ಯರ್ಥಮಾಡದೆ ಮತ್ತು ಆತುರಪಡದೆ). ಆಗ ಒಂದು ವೇಳೇ ನೀವು ಅವಸರದಲ್ಲಿದ್ದರೆ, ಇವೆರಡರಲ್ಲಿ ಯಾವುದಾದರೊಂದು ಸಂಗತಿ ಸಂಭವಿಸಬಹುದು: ನೀವು ಶುಚಿಯಾಗಿ ಸ್ನಾನ ಮಾಡದಿರಬಹುದು ಅಥವಾ ಚೆನ್ನಾಗಿ ಬಟ್ಟೆಯನ್ನು ಧರಿಸದೇ ಇರಬಹುದು! ಆದರೆ, ಅಲ್ಲೊಂದು ಅನ್ಯ ಮಾರ್ಗವಿದೆ – ನಮ್ಮ ಗಮನ ಮತ್ತು ನಮ್ಮ ಶಕ್ತಿಯನ್ನು (ನಾವು ಮಾಡುವ ಕೆಲಸದ ಮೇಲೆ) ಕೇಂದ್ರೀಕರಿಸುವುದು, ನಾವು ಮಾಡುವ ಕೆಲಸದ ಬಗ್ಗೆ ಮಾತ್ರ

ಚಿಂತಿಸುವುದು (ಬೇರೆ ಯಾವುದೇ ವಿಷಯದ ಬಗ್ಗೆ ಯೋಚಿಸಬಾರದು), ಕ್ರಿಯೆಯನ್ನು ಅತಿಯಾಗಿ ಮಾಡದೆ ಇರುವುದು, ಅತ್ಯಂತ ನಿಖರವಾಗಿ ಕೆಲಸವನ್ನು ಮಾಡುವುದು, ಮತ್ತು (ಇದು ಜೀವನದಿಂದ ಆದ ಅನುಭವ, ಇದರ ಬಗ್ಗೆ ನಾನು ನಿಖರವಾಗಿ ಮಾತನಾಡಬಲ್ಲೆ) ಮೊದಲು ನೀವು ಅರ್ಧ ಘಂಟೆಯಲ್ಲಿ ಮಾಡುವ ಕೆಲಸವನ್ನು ಈಗ ಹದಿನೈದು ನಿಮಿಷಗಳಲ್ಲಿ ಮಾಡಬಹುದು ಮತ್ತು ಅದನ್ನು ಅತ್ಯುತ್ತಮವಾಗಿ ಮಾಡಬಹುದು (ಏನನ್ನೂ ಮರೆಯದೆ), ಬರೀ ಏಕಾಗ್ರತೆಯನ್ನು ತೀವ್ರಗೊಳಿಸುವುದರಿಂದ ಕೆಲಸವನ್ನು ಉತ್ತಮವಾಗಿ ಮಾಡಬಹುದು.

"ನಾವು ಕೆಲಸವನ್ನು ಉತ್ತಮವಾಗಿ ಮಾಡಬೇಕಾದರೆ, ನಮ್ಮಲ್ಲಿ ಸಮಯವಿರಬೇಕು" ಎಂದು ಹೇಳುವವರಿಗೆ ಇದು ಅತ್ಯಂತ ಉತ್ತಮವಾದ ಉತ್ತರವಾಗಿದೆ. ಇದು ನಿಜವಲ್ಲ. ನೀವು ಮಾಡುವ ಕೆಲಸವೆಲ್ಲವೂ – ಅಧ್ಯಯನ, ಆಟ, ಇತರೇ ಕೆಲಸಗಳು... ಇವುಗಳನ್ನು ಅತ್ಯುತ್ತವಾಗಿ ಮಾಡಲು ಒಂದೇ ಒಂದು ಪರಿಹಾರವಿದೆ: ಅದು, ನಮ್ಮ ಏಕಾಗ್ರತೆಯ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು. ಮತ್ತು ನೀವು ಈ ಏಕಾಗ್ರತೆಯನ್ನು ಸಾಧಿಸಿದಾಗ, ನಿಮಗೆ ಯಾವ ಕೆಲಸವೂ ದಣಿವೆನಿಸುವುದಿಲ್ಲ. ಸ್ವಾಭಾವಿಕವಾಗಿ, ಆರಂಭದಲ್ಲಿ, ಇದು ಉದ್ವೇಗವನ್ನು ಉಂಟುಮಾಡುತ್ತದೆ, ಆದರೆ ಒಮ್ಮೆ ಅದರ ಅಭ್ಯಾಸವಾದರೆ ಒತ್ತಡವು ಕಡಿಮೆಯಾಗುತ್ತದೆ, ಮತ್ತು ಯಾವುದು ನಿಮಗೆ ಆಯಾಸವನ್ನುಂಟು–ಮಾಡುತ್ತದೆಯೊ (ನಿಮ್ಮನ್ನು ಚಂಚಲಗೊಳಿಸುವ, ಎಲ್ಲ ರೀತಿಯ ಸಂಗತಿಗಳಿಂದ ನಿಮ್ಮನ್ನು ಗ್ರಸ್ತಗೊಳಿಸುವ, ನೀವು ಮಾಡುವ ಕೆಲಸದ ಮೇಲೆ ಗಮನಕೊಡದಂತೆ ಮಾಡುವ) ಅದರ ಬಗ್ಗೆ ಹೆಚ್ಚು ಗಮನ ಹರಿಸದಿರುವಂತಹ ಒಂದು ಕ್ಷಣ ಬರುತ್ತದೆ. ಏಕಾಗ್ರತೆಯ ಶಕ್ತಿಯಿಂದ ಕೆಲಸಗಳನ್ನು ಇನ್ನಷ್ಟು ಉತ್ತಮವಾಗಿ ಮತ್ತು ವೇಗವಾಗಿ ಮಾಡುವಲ್ಲಿ ನಾವು ಯಶಸ್ವಿಯಾಗಬಹುದು. ಮತ್ತು ಈ ರೀತಿಯಾಗಿ ನೀವು ಕೆಲಸವನ್ನು ಬೆಳವಣಿಗೆಯ ಸಾಧನವನ್ನಾಗಿ ಬಳಸಿಕೊಳ್ಳಬಹುದು; ಇಲ್ಲದಿದ್ದರೆ ಕೆಲಸವನ್ನು "ನಿರಾಸಕ್ತಿಯಿಂದ" ಮಾಡಬೇಕು ಎಂಬ ಈ ಅಸ್ಪಷ್ಟ ಕಲ್ಪನೆಯನ್ನು ನೀವು ಹೊಂದುವಿರಿ, ಆದರೆ ಅಲ್ಲೊಂದು ದೊಡ್ಡ ಅಪಾಯವಿದೆ, ಏಕೆಂದರೆ ನಾವು ನಿರಾಸಕ್ತಿಯನ್ನು ಉಪೇಕ್ಷೆಯೊಂದಿಗೆ ಹೋಲಿಸಿ ಶೀಘ್ರವಾಗಿ ಗೊಂದಲಕ್ಕೊಳಗಾಗುತ್ತೇವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/135–38**

**ದುರಂತಗಳನ್ನು ತಪ್ಪಿಸಿಕೊಳ್ಳುವುದು**

ವಿಚಿತ್ರ ಅನುಭವ ... ನಿನ್ನೆ ರಾತ್ರಿಯಿಂದ, ಭಗವಂತನು ...ಈ ರೀತಿಯಾಗಿ ಕೆಳಗೆ ಒತ್ತುತ್ತಿರುವ (ಭೂಮಿಯ ಮೇಲಿನ ಒತ್ತಡದ ಸನ್ನೆ) ಸುವರ್ಣ ಬಲದಂತೆ ಆಗಿರುವಂಥ ಒಂದು ವಿಚಿತ್ರ ಅನಿಸಿಕೆ (ಅದನ್ನು ಹೇಗೆ ವ್ಯವಸ್ಥಿತವಾಗಿ ನಿರೂಪಿಸಿವುದು?). ತಮ್ಮ ಆಕಾಂಕ್ಷೆಯಿಂದ ದೈವೀ ಮೂಲಕ್ಕೆ ಹೋಗಲು ಯಶಸ್ವಿಯಾಗುವವರು ಮಾತ್ರ ದುರಂತಗಳನ್ನು ತಪ್ಪಿಸಿಕೊಳ್ಳುವರು.

ಮದ್ರಾಸ್‌ನಲ್ಲಿ ಒಂದು ದುರಂತ ಸಂಭವಿಸಿತ್ತು: ನಮ್ಮ ಅತ್ಯುತ್ತಮ ಕಾರುಗಳಲ್ಲಿ ಒಂದು ಅತ್ಯಂತ ಗಂಭೀರ ಅಪಘಾತಕ್ಕೆ ಒಳಗಾಗಿತ್ತು.

ಭಗವಂತನೆಡೆಗೆ, ಪ್ರಾಮಾಣಿಕ ಮತ್ತು ಬೇಷರತ್ತಾದ ಆಕಾಂಕ್ಷೆಯನ್ನು ಹೊಂದಿರುವವರು ಮಾತ್ರ ದುರಂತಗಳಿಂದ ಪಾರಾಗುವರು – ಅವರು ಸುವರ್ಣ ವೈಭವದ ಸಾಲಿನಲ್ಲಿ ನಿಲ್ಲುತ್ತಾರೆ.

ಅತ್ಯಂತ ಆಸಕ್ತಿದಾಯಕ ಸಂಗತಿ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಮೇ 4, 1972**

**ಆಕಾಂಕ್ಷೆಯು ಧೈರ್ಯವನ್ನು ಸೂಚಿಸುತ್ತದೆ**

ಧೈರ್ಯವು, ಪರಿಪೂರ್ಣತೆಗಳಲ್ಲಿ ಒಂದು ಎನ್ನುವುದರ ಬಗ್ಗೆ ನಾವು ಮಾತನಾಡಿದ್ದು ನನಗೆ ನೆನಪಿದೆ; ನಾನು ಅದನ್ನು ಒಮ್ಮೆ ಪಟ್ಟಿಯಲ್ಲಿ ಬರೆದಿದ್ದು ನನಗೆ ನೆನಪಿದೆ. ಆದರೆ ಈ ಧೈರ್ಯವೆಂದರೆ, ಸರ್ವೋಚ್ಚ ಸಾಹಸದ ಅಭಿರುಚಿಯನ್ನು ಹೊಂದಿರುವುದು. ಮತ್ತು ಸರ್ವೋಚ್ಚ ಸಾಹಸದ ಈ ಅಭಿರುಚಿಯು ಆಕಾಂಕ್ಷೆಯಾಗಿದೆ – ಲೆಕ್ಕಿಸದೆ, ನಮ್ರತೆಯಿಲ್ಲದೆ ಮತ್ತು ಬೇರ್ಪಡುವಿಕೆಯ ಸಾಧ್ಯತೆಯಿಲ್ಲದೆ, ದೈವೀ ಆವಿಷ್ಕಾರದ ಮಹಾಸಾಹಸದಲ್ಲಿ, ದೈವೀ ಸಂಧಿಯ ಮಹಾಸ್ಸಾಹಸದಲ್ಲಿ, ದೈವೀ ಸಾಕ್ಷಾತ್ಕಾರದ ಸಾಹಸದಲ್ಲಿ ನಿಮ್ಮನ್ನು ಸಂಪೂರ್ಣ ಹಿಡಿದುಕೊಳ್ಳುವಂಥ ಮತ್ತು ನಿಮ್ಮನ್ನು ಎಸೆಯುವಂಥ ಒಂದು ಆಕಾಂಕ್ಷೆಯಾಗಿದೆ; ಹಿಂದಿರುಗಿ ನೋಡದೆ ಮತ್ತು ಒಂದು ನಿಮಿಷ ಸಮಯವನ್ನೂ ಕೇಳದೆ, ಸಾಹಸಕ್ಕೆ ನಿಮ್ಮನ್ನು ನೀವು ಅಣಿಗೊಳಿಸಿಕೊಳ್ಳುವಿರಿ, "ಏನು ಸಂಭವಿಸಬಹುದು?" ಏನು ಸಂಭವಿಸುತ್ತದೆ ಎಂದು ನೀವು ಕೇಳಿದರೆ, ನೀವು ಎಂದಿಗೂ ಪ್ರಾರಂಭ ಮಾಡುವುದಿಲ್ಲ, ಏನನ್ನಾದರೂ ಕಳೆದುಕೊಳ್ಳಲು ಹೆದರುತ್ತೀರಿ, ನಿಮ್ಮ

ಸಮತೋಲನವನ್ನು ಕಳೆದುಕೊಳ್ಳಲು ಆ ಸ್ಥಳಕ್ಕೆ ಬೇರೂರಿಕೊಂಡು ನೀವು ಯಾವಾಗಲೂ ಅಲ್ಲಿಯೇ ಸಿಲುಕಿಕೊಳ್ಳುವಿರಿ, ಅದಕ್ಕಾಗಿಯೇ ನಾನು ಧೈರ್ಯದ ಬಗ್ಗೆ ಮಾತನಾಡುತ್ತೇನೆ – ಆದರೆ ನಿಜವಾಗಿಯೂ ಅದು ಆಕಾಂಕ್ಷೆಯಾಗಿದೆ, ಅವೆರಡೂ ಒಟ್ಟಿಗೆ ಇರುತ್ತವೆ. ನಿಜವಾದ ಆಕಾಂಕ್ಷೆಯು ಧೈರ್ಯದಿಂದ ತುಂಬಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/40–41**

**ಪವಾಡಗಳ ಅವಶ್ಯಕತೆ**

ಪವಾಡಗಳ ಈ ಅಗತ್ಯವನ್ನು ನಾವು (ಯಾವುದೋ ಒಂದಕ್ಕೆ – ಈಗಾಗಲೆ ಇರುವಂಥ ಸಂಗತಿಗೆ, ಮತ್ತು ಆ ಎಲ್ಲ ಆಕಾಂಕ್ಷೆಗಳಿಂದ ಅಭಿವ್ಯಕ್ತಗೊಳ್ಳುವಂಥ ಸಂಗತಿಗೆ) ಪ್ರಜ್ಞಾಪೂರ್ವಕ ಆಕಾಂಕ್ಷೆಯನ್ನಾಗಿ ಪರಿವರ್ತಿಸಬೇಕು: ಆ ಎಲ್ಲ ಆಕಾಂಕ್ಷೆಗಳು ಅಗತ್ಯವಾಗಿವೆ ಅಥವಾ ಅವುಗಳನ್ನು ನೈಜ ರೀತಿಯಲ್ಲಿ ನೋಡುವುದಾದರೆ, ಅವುಗಳು ಸಹವರ್ತಿಯಾಗಿವೆ – ಶಾಶ್ವತ ಪ್ರಕಟಣೆಗೆ (ಅಭಿವ್ಯಕ್ತಿಗೆ) ಒಂದು ಆಹ್ಲಾದಕರ ಸಹವರ್ತಿ.

ಮೂಲಭೂತವಾಗಿ, ಬಹಳ ಕಟ್ಟುನಿಟ್ಟಾದ ತರ್ಕವನ್ನು ಹೊಂದಿರುವ ಜನರು "ಏಕೆ ಪ್ರಾರ್ಥಿಸಬೇಕು? ಏಕೆ ಹಂಬಲಿಸಬೇಕು, ಏಕೆ ಕೇಳಬೇಕು? ಎಂದು ಹೇಳುತ್ತಾರೆ. ಭಗವಂತನು ತಾನು ಬಯಸಿದ್ದನ್ನು ಮಾಡುತ್ತಾನೆ ಮತ್ತು ಅವನು ಏನನ್ನು ಬಯಸುತ್ತಾನೋ, ಅದೆಲ್ಲವನ್ನೂ ಯಾವಾಗಲೂ ಮಾಡುತ್ತಾನೆ." ಇದು ಸಂಪೂರ್ಣವಾಗಿ ಸ್ಪಷ್ಟವಾಗಿದೆ, ಆದರೆ "ದೇವರೆ, ನಿನ್ನಿಷ್ಟಕ್ಕೆ ನೀನು ಪ್ರಕಟವಾಗು!" ಎನ್ನುವ ಉತ್ಸಾಹವು, ಅವನ ಅಭಿವ್ಯಕ್ತಿಗೆ ಹೆಚ್ಚು ತೀವ್ರವಾದ ಚೈತನ್ಯವನ್ನು ನೀಡುತ್ತದೆ.

ಇಲ್ಲದಿದ್ದರೆ, ಅವನು ಜಗತ್ತನ್ನು ಅದು ಈಗಿರುವ ಹಾಗೆ ಎಂದಿಗೂ ಮಾಡುತ್ತಿರಲಿಲ್ಲ – (ಜಗತ್ತು) ಈಗಿರುವಂತೆ ಮತ್ತೆ ಆಗಲು, ಆಕಾಂಕ್ಷೆಯ ಜಗತ್ತಿನ ತೀವ್ರತೆಯಲ್ಲಿ ಒಂದು ವಿಶೇಷ ಪ್ರಭಾವವಿದೆ, ವಿಶೇಷ ಸಂತೋಷವಿದೆ, ಒಂದು ವಿಶೇಷ ಕಂಪನವಿದೆ.

ಅದಕ್ಕಾಗಿಯೇ – ಭಾಗಶಃವಾದರೂ ಸರಿ – ವಿಕಾಸವಿದೆ.

**– ಶ್ರೀಮಾತೆ: ಶಿಷ್ಯನೊಡನೆ ಸಂಭಾಷಣೆ, ಮಾರ್ಚ್ 6, 1963**

**ಆಕಾಂಕ್ಷೆಯ ಪರಿಣಾಮ**

***ಈ ಪ್ರಶ್ನೆಗೆ ಉತ್ತರ ನನಗೆ ಚೆನ್ನಾಗಿ ಅರ್ಥವಾಗಲಿಲ್ಲ: "ಅವರ ಸ್ವಭಾವಕ್ಕೆ ಅನುಗುಣವಾಗಿ ವಿಭಿನ್ನ ಸಾಧಕರಲ್ಲಿ ಆಕಾಂಕ್ಷೆಯ ಶಕ್ತಿಯು ಬದಲಾಗುತ್ತದೆಯೇ?"***

ಹೌದು!

ನೋಡಿ, ಪ್ರಶ್ನೆಯನ್ನು ಕೆಟ್ಟದಾದ ರೀತಿಯಲ್ಲಿ ಕೇಳಲಾಗಿದೆ ಎಂದು ನಾನು ಭಾವಿಸುತ್ತೇನೆ. ಪ್ರಶ್ನೆಯನ್ನು ಕೇಳಿದವರು, "ಆಕಾಂಕ್ಷೆಯ ಪರಿಣಾಮ" ಎಂದು ಹೇಳಬೇಕಾಗಿತ್ತು, ಆದರೆ ಅದರ ಬದಲಿಗೆ "ಆಕಾಂಕ್ಷೆಯ ಪ್ರಭಾವ ಅಥವಾ ಶಕ್ತಿ" ಎಂದು ಹೇಳಿದರು ಎಂದು ನಾನು ನಂಬುತ್ತೇನೆ. ಅಂದರೆ, ಪ್ರತಿಯೊಬ್ಬರಲ್ಲಿರುವ (ಅದು ಯಾರೇ ಇರಲಿ) ಆಕಾಂಕ್ಷೆಯು, ಒಂದೇ ಶಕ್ತಿಯನ್ನು ಹೊಂದಿರುತ್ತದೆ. ಆದರೆ ಈ ಆಕಾಂಕ್ಷೆಯ ಪರಿಣಾಮವು ವಿಭಿನ್ನವಾಗಿರುತ್ತದೆ. ನೀವು ಆಕಾಂಕ್ಷೆಯನ್ನು ಹೊಂದಿದ್ದರೆ, ಅದು ತನ್ನಷ್ಟಕ್ಕೆ ತಾನು ಒಂದು ಶಕ್ತಿಯಾಗಿದೆ. ಈ ಆಶಯದಿಂದ ಮಾತ್ರ ಉತ್ತರ ಸಿಗಲು ಸಾಧ್ಯ, ಮತ್ತು ಆಕಾಂಕ್ಷೆಯ ಫಲಶ್ರುತಿಯಾದಂಥ ಈ ಪರಿಣಾಮ, ಈ ಉತ್ತರವು ಪ್ರತಿಯೊಬ್ಬರ ಮೇಲೆ ಅವಲಂಬಿತವಾಗಿರುತ್ತದೆ, ಏಕೆಂದರೆ ಅದು ಅವರ ಗ್ರಹಿಕೆಯನ್ನು ಅವಲಂಬಿಸಿರುತ್ತದೆ. ಈ ರೀತಿಯ ಅನೇಕ ಜನರು ನನಗೆಗೊತ್ತು: ಅವರು ಹೇಳುತ್ತಾರೆ, "ಓಹ್, ನಾನು ಯಾವಾಗಲೂ ಹಂಬಲಿಸುತ್ತೇನೆ, ಆದರೂ ನನಗೆ ಏನೂ ದೊರಕುವುದಿಲ್ಲ." "ಅವರು ಏನನ್ನೂ ಪಡೆದುಕೊಳ್ಳುವುದಿಲ್ಲ ಎನ್ನುವುದು ಅಸಾಧ್ಯ, ಉತ್ತರವು ಬರುವುದು ಖಚಿತ. ಉತ್ತರವು ಬರುತ್ತದೆ, ಆದರೆ ಅವರು ಅದನ್ನು ಗ್ರಹಿಸುವುದಿಲ್ಲ, ಆದ್ದರಿಂದ ಅವರು ಏನನ್ನೂ ಪಡೆದುಕೊಳ್ಳುವುದಿಲ್ಲ.

ಸಾಕಷ್ಟು ಆಕಾಂಕ್ಷೆಯನ್ನು ಹೊಂದಿರುವ ಜನರಿದ್ದಾರೆ, ನಿನಗೆ ಗೊತ್ತೆ! ಅವರು (ದೈವೀ) ಬಲವನ್ನು ಹಂಬಲಿಸುತ್ತಾರೆ. ಬಲವು ಅವರಲ್ಲಿಗೆ ಬರುತ್ತದೆ – ಅವರಾಳದಲ್ಲಿಯೂ ಸಹ ಅದು ಪ್ರವೇಶವಾಗುತ್ತದೆ – ಅವರು ಎಷ್ಟು ಪ್ರಜ್ಞಾಹೀನ–ರಾಗಿರುತ್ತಾರೆಂದರೆ, ಅದು ಅವರಿಗೆ ಗೊತ್ತೇ ಅಗುವುದಿಲ್ಲ! ಅದು ಆಗಾಗ್ಗೆ ಸಂಭವಿಸುತ್ತದೆ. ಅವರೊಳಗೆ ಪ್ರವೇಶಿಸುವ ಬಲವನ್ನು ಅನುಭವಿಸುವುದನ್ನೂ ಸಹ ತಡೆಯುವಂಥದ್ದು ಅವರ ಸುಪ್ತಾವಸ್ಥೆಯ ಸ್ಥಿತಿಯಾಗಿದೆ. ಅದು ಅವರಲ್ಲಿ ಪ್ರವೇಶಿಸುತ್ತದೆ ಮತ್ತು ತನ್ನ ಕೆಲಸವನ್ನು ಮಾಡುತ್ತದೆ. ಕ್ರಮೇಣ ರೂಪಾಂತರಗೊಂಡ

ಮತ್ತು ಅವರು ಎಷ್ಟು ಪ್ರಜ್ಞಾಹೀನರಾಗಿರುತ್ತಾರೆಂದರೆ, ಅದರ ಅರಿವೇಯೂ ಸಹ ಅವರಿಗೆ ಇಲ್ಲದ ಜನರು ನನಗೆ ಗೊತ್ತು. ಪ್ರಜ್ಞೆಯು ನಂತರ ಬರುತ್ತದೆ – ಬಹಳೇ ನಂತರದಲ್ಲಿ. ಮತ್ತೊಂದೆಡೆ, ಹೆಚ್ಚು ನಿಷ್ಕ್ರಿಯವಾಗಿರುವ ಜನರಿದ್ದಾರೆ. ಹೇಳಬೇಕೆಂದರೆ, ಹೆಚ್ಚು ಮುಕ್ತ, ಹೆಚ್ಚು ಗಮನವುಳ್ಳ, ಸ್ವಲ್ಪ ಪ್ರಮಾಣದ ಬಲ ಬಂದರೂ ಸಹ, ಅದರ ಬಗ್ಗೆ ಅವರು ತಕ್ಷಣವೇ ಜಾಗೃತರಾಗುತ್ತಾರೆ ಮತ್ತು ಅದನ್ನು (ಬಲವನ್ನು) ಪೂರ್ಣವಾಗಿ ಬಳಸಿಕೊಳ್ಳುತ್ತಾರೆ.

ನೀವು ಅತ್ಯಂತ ಸಕ್ರಿಯ ಆಕಾಂಕ್ಷೆಯನ್ನು ಹೊಂದಿರುವಾಗ, ನಿಮ್ಮ ಆಕಾಂಕ್ಷೆಯು ತನ್ನ ಕೆಲಸವನ್ನು ಮಾಡುವುದು. ನೀವು ಆಶಿಸುವ ಉತ್ತರವನ್ನು ಅದು ನಿಮಗೆ ದೊರಕಿಸಿಕೊಡುತ್ತದೆ. ಆದರೆ, ನಂತರ, ನೀವು ಬೇರೆ ಸಂಗತಿಯ ಬಗ್ಗೆ ಯೋಚಿಸಲು ಪ್ರಾರಂಭಿಸಿದರೆ, ಅಥವಾ ಗಮನವನ್ನು ಕೊಡದಿದ್ದರೆ ಅಥವಾ ಸ್ವೀಕರಿಸಲು ಸಿದ್ಧರಿರದಿದ್ದರೆ, ನಿಮ್ಮ ಹಂಬಲವು ಉತ್ತರವನ್ನು ಪಡೆದುಕೊಂಡಿದೆ ಎನ್ನುವುದನ್ನೂ ಸಹ ನೀವು ಗಮನಿಸುವುದಿಲ್ಲ. ಇದು ಆಗಾಗ್ಗೆ ಸಂಭವಿಸುತ್ತದೆ. ಆದ್ದರಿಂದ ಜನರು ನಿಮಗೆ ಹೇಳುತ್ತಾರೆ: "ನಾನು ಆಶಿಸುತ್ತೇನೆ ಮತ್ತು ನಾನು ಏನನ್ನೂ ಪಡೆದುಕೊಳ್ಳುವುದಿಲ್ಲ, ನನಗೆ ಉತ್ತರ ಸಿಗುವುದಿಲ್ಲ!" ಹೌದು, ನಿಮಗಾಗಿ ಉತ್ತರವಿದೆ, ಆದರೆ ನಿಮಗೆ ಅದರ ಬಗ್ಗೆ ಅರಿವಿಲ್ಲ, ಏಕೆಂದರೆ ನೀವು ಈ ರೀತಿಯಾಗಿ ಸಕ್ರಿಯರಾಗಿರುತ್ತೀರಿ, ಒಂದು ಗಿರಣಿಯು ಯಾವಾಗಲೂ ಸುತ್ತುತ್ತಿರುವಂತೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/115–116 – ಶ್ರೀಮಾತೆ**

**ಆಕಾಂಕ್ಷೆ ಮತ್ತು ಆರಾಧನೆ**

***ಪ್ರೀತಿಯ ಶ್ರೀಮಾತೆಯವರೆ, ದುರ್ಗಾ ಮತ್ತು ಕಾಳಿ ದೇವತೆಗಳಿಗೆ ನೀಡುವ ಪೂಜೆಯು ಯಾವುದೇ ಆಧ್ಯಾತ್ಮಿಕ ಮೌಲ್ಯವನ್ನು ಹೊಂದಿದೆಯೇ?***

ಅದು ಪೂಜೆಯನ್ನು ಯಾರು ನಿವೇದಿಸುತ್ತಾರೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ.

ಇದು ಆಧ್ಯಾತ್ಮಿಕ ಮೌಲ್ಯಕ್ಕೆ ಪ್ರಾಮುಖ್ಯತೆಯನ್ನು ಹೊಂದಿಲ್ಲದಂತ ಸಂಗತಿಯಾಗಿದೆ. ಯೋಗದ ಸಮಗ್ರತೆ ಮತ್ತು ಸಂಪೂರ್ಣ ಸತ್ಯಕ್ಕಾಗಿ ನಮ್ಮ ಆಕಾಂಕ್ಷೆಯನ್ನು ಒಂದು ರೂಪಕ್ಕೆ ಅಥವಾ ಇನ್ನೊಂದಕ್ಕೆ ಸೀಮಿತಗೊಳಿಸದಿರುವುದು ಮುಖ್ಯವಾಗಿದೆ. ಆದರೆ ಆಧ್ಯಾತ್ಮಿಕ ದೃಷ್ಟಿಕೋನದಿಂದ, ಪೂಜೆಯ ಉದ್ದೇಶ ಏನೇ ಇರಲಿ, ನಮ್ಮ

ಕ್ರಿಯೆಯು ಸಂಪೂರ್ಣವಾಗಿ ಪ್ರಾಮಾಣಿಕವಾಗಿದ್ದರೆ, ನಮ್ಮ ಸಮರ್ಪಣೆಯು ಸಮಗ್ರ ಮತ್ತು ಸಂಪೂರ್ಣವಾಗಿದ್ದರೆ, ಆಧ್ಯಾತ್ಮಿಕ ಫಲಿತಾಂಶವು ಒಂದೇ ಆಗಿರುವ ಸಂಭವ ಹೆಚ್ಚು; ಏಕೆಂದರೆ, ನೀವು ಹೊಂದಿರುವ ಯಾವುದೇ ಉದ್ದೇಶವನ್ನು, ಅದರ ಮೂಲಕ – ಕೆಲವೊಮ್ಮೆ ಅದರ ಹೊರತಾಗಿಯೂ, ನಿಮ್ಮ ಪಾವಿತ್ರ್ಯತೆಯ ಪ್ರಾಮಾಣಿಕತೆಯ ಮಾನ (ಅಳತೆ) ಮತ್ತು ಅನುಪಾತದಲ್ಲಿ ನೀವು ಯಾವಾಗಲೂ ಪರಮ ಸತ್ಯವನ್ನು ತಲುಪುತ್ತೀರಿ.

ದೈವದ ಯಾವ ಅಂಶವನ್ನ ನೀವು ಆರಾಧಿಸುತ್ತೀರಿ ಅಥವಾ ನೀವು ಯಾವ ಮಾರ್ಗದರ್ಶಿಯನ್ನ ಆಯ್ಕೆ ಮಾಡಿದ್ದೀರಿ ಎನ್ನುವುದನ್ನು ಲೆಕ್ಕಿಸದೆ ಇದ್ದು, ನಿಮ್ಮ ಸಮರ್ಪಣೆಯಲ್ಲಿ ಪರಿಪೂರ್ಣರಾಗಿದ್ದರೆ ಮತ್ತು ಪೂರ್ಣ ಪ್ರಾಮಾಣಿಕರಾಗಿದ್ದರೆ, ನೀವು ನಿಮ್ಮ ಆಧ್ಯಾತ್ಮಿಕ ಗುರಿಯನ್ನು ಸಾಧಿಸುವುದು ಖಚಿತ.

ಆದರೆ, ನೀವು ಸಮಗ್ರ ಯೋಗವನ್ನು ಅರಿತುಕೊಳ್ಳಲು ಬಯಸಿದಾಗ ಫಲಿತಾಂಶವು ಒಂದೇ ಆಗಿರುವುದಿಲ್ಲ. ನಿಮ್ಮನ್ನು ನೀವು ಯಾವುದೇ ರೀತಿಯಲ್ಲಿ ಬಂಧನಕ್ಕೆ ಒಳಪಡಿಸಿಕೊಳ್ಳಬಾರದು, ನಿಮ್ಮ ಶುದ್ಧೀಕರಣದ ಪಥದಲ್ಲಿಯೂ ಸಹ ... ಇವುಗಳೆರಡು ಮಾತ್ರ ಅತ್ಯಂತ ಭಿನ್ನ ಸಂಗತಿಗಳಾಗಿವೆ.

ಆಧ್ಯಾತ್ಮಿಕ ಸಾಕ್ಷಾತ್ಕಾರ – ಇದನ್ನು ಈ ಹಿಂದೆ ಅರ್ಥಮಾಡಿಕೊಂಡಂತೆ, ಅದನ್ನು ಈಗಲೂ ಸಹ ಸಾಮಾನ್ಯವಾಗಿ ಅರ್ಥಮಾಡಿಕೊಂಡತೆ – ಇದು, ಒಂದು ಅಥವಾ ಇನ್ನೊಂದು ರೀತಿಯಲ್ಲಿ ಪರಮ ಸತ್ಯದೊಂದಿಗೆ ಒಂದಾಗುವಿಕೆಯಾಗಿದೆ (ಅದು ನಿಮ್ಮಂತರಂಗದಲ್ಲಿ ಇರಬಹುದು ಅಥವಾ ಯಾವುದೇ ಬೇರೆ ರೂಪದ ಮುಖಾಂತರ); ಇದು, ನೀವು ಸಮರ್ಪಿಸಿಕೊಳ್ಳಲು ಯಾವುದನ್ನು ಆಯ್ಕೆ ಮಾಡಿಕೊಂಡಿರುವಿರೊ, ಅದರ ಬದಲು, ಪರಮ ಸತ್ಯದೊಂದಿಗೆ (ಬಹತೇಕ ನಿಮ್ಮ ವೈಯಕ್ತಿಕತೆಯ ಕಣ್ಮರೆಯೊಂದಿಗೆ) ನಿಮ್ಮ ಸಮ್ಮಿಳನದ ಮೇಲೆ ಅವಲಂಬಿತ–ವಾಗಿದೆ. ಇದಕ್ಕಾಗಿ ... ನಿಮ್ಮ ಆಕಾಂಕ್ಷೆಯ ಅತ್ಯಂತ ಪ್ರಾಮಾಣಿಕತೆಯು ನೀವು ಎಲ್ಲಾ ಮಿತಿಗಳನ್ನು ದಾಟುವಂತೆ ಮತ್ತು ಪರಮ ಸತ್ಯವನ್ನು ಕಂಡುಕೊಳ್ಳುವಂತೆ ಮಾಡುತ್ತದೆ, ಏಕೆಂದರೆ ನೀವು ಆತನನ್ನು ನಿಮ್ಮೊಳಗೆ ಕರೆದೊಯ್ಯುತ್ತೀರಿ.

ನೀವು ದೇವರನ್ನು ಹೊರಗೆ ಕಾಣಲು ಪ್ರಯತ್ನಿಸುತ್ತಿರೋ, ನೀವು ಅವನನ್ನು ನಿಮ್ಮಂತರಂಗದಲ್ಲಿ ಕಾಣಲು ಪ್ರಯತ್ನಿಸುತ್ತಿರೋ, ಅವನನ್ನು ಸಾಕಾರ ಅಥವಾ ನಿರಾಕಾರ ರೂಪದಲ್ಲಿ ಕಾಣಲು ಪ್ರಯತ್ನಿಸುತ್ತಿರೋ, ನಿಮ್ಮ ಆಕಾಂಕ್ಷೆಯು ಸಾಕಷ್ಟು

ಪ್ರಾಮಾಣಿಕವಾಗಿದ್ದರೆ, ಮತ್ತು ನಿಮ್ಮ ತೀರ್ಮಾನವು ಸಾಕಷ್ಟು ಪ್ರಾಮಾಣಿಕವಾಗಿದ್ದರೆ, ನೀವು ಗುರಿಯನ್ನು ತಲುಪುವುದು ಖಚಿತ.

ಆದರೆ, ಶ್ರೀ ಅರಬಿಂದೋ ಅವರು ಹೇಳುವಂಥ ಕ್ರಿಯೆಗೆ ಪೂರಕ ಕ್ರಿಯೆಯನ್ನು ನೀವು ಮಾಡಲು ಬಯಸಿದರೆ, ಅಂದರೆ, ಈ ಒಂದಾಗುವಿಕೆಯನ್ನು ನಿಮ್ಮಲ್ಲಿ ನೀವು ಅರಿತುಕೊಂಡ ನಂತರ ಹೊರಗಿನ ಪ್ರಜ್ಞೆ ಮತ್ತು ಜಗತ್ತಿಗೆ ಮರಳುವುದು ಮತ್ತು ಈ ಹೊರಗಿನ ಪ್ರಜ್ಞೆ ಮತ್ತು ಜಗತ್ತನ್ನು ಪರಿವರ್ತಿಸುವುದು. ಆಗ, ಈ ಸಂದರ್ಭದಲ್ಲಿ ನಿಮ್ಮನ್ನು ನೀವು ಯಾವುದೇ ರೀತಿಯಲ್ಲಿ ಸೀಮಿತಗೊಳಿಸಲು ಸಾಧ್ಯವಿಲ್ಲ, ಇಲ್ಲದಿದ್ದರೆ ನೀವು ನಿಮ್ಮ ಕೆಲಸವನ್ನು ಸಾಧಿಸಲು ಸಾಧ್ಯವಾಗುವುದಿಲ್ಲ.

ಮೂಲಭೂತವಾಗಿ, ದೈವೀಕತೆಯೊಂದಿಗೆ ಈ ಏಕತೆಯನ್ನು, ಎಲ್ಲ ಸ್ವರೂಪಗಳಲ್ಲಿ, ಎಲ್ಲ ಅಂಶಗಳಲ್ಲಿ, ಆತನನ್ನು ತಲುಪಲು ಬಳಸಿದಂಥ ಪ್ರತಿಯೊಂದು ಮಾರ್ಗದಲ್ಲಿ ಕಂಡುಕೊಳ್ಳಲು ನಿಮಗೆ ಸಾಧ್ಯವಾಗುತ್ತದೆ. ಮತ್ತು ನೀವು ಅದನ್ನು ಮೀರಿ ಹೊಸ ಮಾರ್ಗವನ್ನು ಕಂಡುಕೊಳ್ಳಬೇಕು. ಮತ್ತು ನೀವು ಅದರಾಚೆ ಹೋಗಬೇಕು ಮತ್ತು ಒಂದು ಹೊಸ ಮಾರ್ಗವನ್ನು ಕಂಡುಕೊಳ್ಳಬೇಕು.

ಆದ್ದರಿಂದ, ನಿಮ್ಮ ತಲೆಯಿಂದ ಹೊರಗೋಡಿಸಬೇಕಾದ ಮೊದಲ ಮತ್ತು ಅತ್ಯಂತ ಮಹತ್ವದ ಅಂಶ: ನೀವು ಸಮಗ್ರ ಯೋಗವನ್ನು ಇತರ ಆಧ್ಯಾತ್ಮಿಕ ಸಾಕ್ಷಾತ್ಕಾರಗಳೊಂದಿಗೆ (ಆಧ್ಯಾತ್ಮಿಕ ಸಾಕ್ಷಾತ್ಕಾರವು ಸೀಮಿತ ಕ್ಷೇತ್ರವನ್ನು ಆವರಿಸಿರುತ್ತದೆ) ಹೋಲಿಸಿ ಗೊಂದಲಕ್ಕೆ ಒಳಗಾಗಬಾರದು, ಏಕೆಂದರೆ ಅವುಗಳ ಕ್ರಿಯೆ ಆಳದಲ್ಲಿ ಮಾತ್ರ ಇರುತ್ತದೆ.

ನಿಮ್ಮ ಆಕಾಂಕ್ಷೆಯಿಂದ ರಂದ್ರವನ್ನು ಕೊರೆಯಬಹುದು, ಮತ್ತು ಯಾವುದರ ಮೂಲಕವಾದರೂ ಆಳದಲ್ಲಿ ಕಾರ್ಯವನ್ನು ಮಾಡಬಹುದು. ಎಲ್ಲವೂ ನಿಮ್ಮ ಆಕಾಂಕ್ಷೆಯ ತೀವ್ರತೆ ಮತ್ತು ಪ್ರಾಮಾಣಿಕತೆಯ ಮೇಲೆ ಅವಲಂಬಿತವಾಗಿರುತ್ತದೆ – ಪ್ರಾಮಾಣಿಕತೆಯ ಮೇಲೆ, ಅಂದರೆ, ನಿಮ್ಮ ಸಮರ್ಪಣೆಯು ಎಷ್ಟು ಪೂರ್ಣವಾಗಿದೆ, ಸಮಗ್ರವಾಗಿದೆ, ಸ್ಪಷ್ಟವಾಗಿದೆ, ಸಂಪೂರ್ಣವಾಗಿದೆ ಎಂದು ಅರ್ಥ. ಆದರೆ ಇದು ನೀವು ಆಯ್ಕೆ ಮಾಡಿಕೊಂಡ ಸ್ವರೂಪದ ಮೇಲೆ ಅವಲಂಬಿಸಿರುವುದಿಲ್ಲ: ಅಗತ್ಯವಾಗಿ, ಹಿಂದೆ ಏನಿದೆ ಎಂಬುದನ್ನು ಕಂಡುಹಿಡಿಯಲು ನೀವು ಆ ಸ್ಥಿತಿಯನ್ನು ಅನುಭವಿಸಬೇಕಾಗುತ್ತದೆ.

ಆದರೆ ನಿಮ್ಮ ಸಹಜ ಸ್ವಭಾವವನ್ನು ಮತ್ತು ನಿಮ್ಮ ಅಸ್ತಿತ್ವವನ್ನು ನೀವು ಪರಿವರ್ತಿಸಲು ಬಯಸಿದರೆ, ಮತ್ತು ನೀವು ಹೊಸ ಪ್ರಪಂಚದ ರಚನೆಯಲ್ಲಿ ಭಾಗವಹಿಸಲು ಬಯಸಿದರೆ, ಆಗ ಈ ಆಕಾಂಕ್ಷೆ, ಈ ತೀಕ್ಷ್ಣ ಮತ್ತು ನೇರ ಅಂಶವು ಸಾಕಾಗುವುದಿಲ್ಲ. ನಾವು ಎಲ್ಲವನ್ನೂ ಒಳಗೊಂಡಿರಬೇಕು ಮತ್ತು ನಾವು ನಮ್ಮ ಪ್ರಜ್ಞೆಯಲ್ಲಿ ಎಲ್ಲವನ್ನೂ ಒಳಗೊಂಡಿರಬೇಕು.

ಸ್ವಾಭಾವಿಕವಾಗಿ, ಅದು ಹೆಚ್ಚು ಕಷ್ಟದ ಕೆಲಸ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/243–45**

**ಶೋಧನಾ ತೀವ್ರತೆ**

**– ಅನು: ಶ್ರೀ ಕಿಶೋರಕುಮಾರ ಕಾಸಾರ, ಕಲಬುರ್ಗಿ**

ನನಗೆ ಇನ್ನೊಂದು ಪ್ರಶ್ನೆಯನ್ನು ಕೇಳಿದ್ದರು. ಅದು ಸ್ವಲ್ಪ ಹೆಚ್ಚು ಸೂಕ್ಷ್ಮವಾಗಿದೆ. ಆದರೆ, ಅದರ ವಿಷಯವು ಆಸಕ್ತಿಕರವಾಗಿದೆ. ಅದೇನೆಂದರೆ, ದಿವ್ಯತೆಯಲ್ಲಿ ಒಂದಾಗುವ ಹಂತದಲ್ಲಿ ಆ ದಿವ್ಯತೆಯನ್ನು ಕಾಣಬಯಸುವ ಸಾಧಕನಲ್ಲಿ ಅದಾವ ಅಂಶವು ತೀವ್ರತರವಾಗಿ ಕಾರ್ಯ ನಿರ್ವಹಿಸುತ್ತಿರುತ್ತದೆ? ಈ ಪ್ರಶ್ನೆಯನ್ನು ಕೇಳಿದ ವ್ಯಕ್ತಿಯು ಮುಂಬರಿದು, ಅವನು ಈ ಮಾರ್ಗದಲ್ಲಿ ಅಭೀಪ್ಸೆಯ ಎರಡು ಅಂಶಗಳನ್ನು ಕಂಡುಕೊಂಡಿರುವದಾಗಿ ತಿಳಿಸುತ್ತಾನೆ. ದಿವ್ಯತೆಯನ್ನು ಹೊಂದಬೇಕೆಂಬ ಅಭೀಪ್ಸೆಯ ತೀವ್ರತೆಯಲ್ಲಿ ತಲೆಯೆತ್ತುವ ಆ ಎರಡು ಅಂಶಗಳಲ್ಲೊಂದರಲ್ಲಿ ಕೋಮಲತೆಯ ಸಹಿಷ್ಣು ಭಾವನೆಯಿದ್ದರೆ, ಆ ಇನ್ನೊಂದರಲ್ಲಿ ತೀವ್ರರವಾದ ನೋವಿನಿಂದ ಕೂಡಿದ ಆತಂಕವಿದೆ. ಆದರೆ ಆ ಸಮಯದಲ್ಲಿ ಒಂದು ದೊಡ್ಡ ಸಂತಸದ ಭಾವನೆಯೂ ಜಾಗೃತವಾಗಿರುತ್ತದೆ.

ಈ ಅವಲೋಕನವು ಸರಿಯಾಗಿದೆ.

ಹಾಗೆಯೇ ಇನ್ನೊಂದು ಪ್ರಶ್ನೆಯಿದೆ:

***ಈ ತೀವ್ರತೆಯು ಯಾವಾಗ ದುಃಖಭರಿತವಾಗಿರುತ್ತದೆ? ಯಾವಾಗ ಸಂತೋಷಸಹಿತವಾಗಿರುತ್ತದೆ?***

ನಿಮ್ಮಲ್ಲಿ ಎಷ್ಟು ಜನಕ್ಕೆ ಈ ರೀತಿಯ ಅನುಭವವಾಗಿದೆಯೋ ನನಗೆ ತಿಳಿದಿಲ್ಲ. ಆದರೆ, ಇದು ನಿಜ. ಈ ಅನುಭವವು ಸ್ವಯಂಪ್ರೇರಿತವಾಗಿ ಜಾಗೃತವಾಗುತ್ತದೆ. ಮತ್ತು ಅದರ ಉತ್ತರವೂ ಬಹು ಸರಳವಾಗಿದೆ.

ಆ ಔನ್ನತ್ಯದ ಅತೀಂದ್ರಿಯ ಪ್ರಜ್ಞೆಯು ನಮ್ಮ ಅಭೀಪ್ಸೆಯೊಡನೆ ಒಂದಾದ ತಕ್ಷಣ ಈ ತೀವ್ರತೆಯು ಬೇರೆಯದ್ದೇ ರೂಪವನ್ನು ಪಡೆದುಕೊಳ್ಳುತ್ತದೆ. ಹಾಗೂ ಆನಂದದ ಅವ್ಯಕ್ತೋಧದಿಯಿಂದ ತುಂಬಿಕೊಳ್ಳುತ್ತದೆ. ಹಾಗೂ ತನ್ನೊಳಗೆ ಘೂರ್ಣಿಸುತ್ತಿರುವ ಆನಂದೋಧದಿಯು ಇತರರಲ್ಲೂ ಕ್ಷೋಭಿಸುತ್ತಿರುವ ಸತ್ಯವನ್ನು ಪ್ರಕಟಪಡಿಸುತ್ತದೆ. ಈ ಅಭೀಪ್ಸೆಯ ಬಾಹ್ಯ ರೂಪವು ಏನೇ ಆಗಿರಬಹುದು, ಅದು ತನ್ನ ಮಾರ್ಗದಲ್ಲಿ ಯಾವುದೇ ಅಡ್ಡಿ ಆತಂಕಗಳನ್ನು ಎದುರಿಸಿರಬಹುದು, ಆದರೂ ಕೊನೆಗೊಮ್ಮೆ ಅದು ಆನಂದದ ತೀರದೆಡೆಗೆ ನಿಮ್ಮನ್ನೊಯ್ದು ನಿಲ್ಲಿಸುತ್ತದೆ.

ಒಮ್ಮೆ ನೀವು ಆ ಆನಂದವನ್ನು ಹೊಂದಿದ್ದೇ ಆದಲ್ಲಿ ಆ ಅತೀಂದ್ರಿಯ ಪ್ರಜ್ಞೆಯು ನಿಮ್ಮೊಳಗೆ ಜಾಗೃತವಾಗಿದ್ದು, ನೀವು ಅದರೊಂದಿಗೆ ಸಂಪರ್ಕವನ್ನು ಸಾಧಿಸಿದ್ದೀರಿ ಎಂದರ್ಥ! ಈ ಸಂಪರ್ಕವು ಪೂರ್ಣ ರೂಪದಲ್ಲಿಯೇ ಆಗಿರಲಿ ಅಥವಾ ಅಪೂರ್ಣ ರೂಪದಲ್ಲಿಯೇ ಆಗಿರಲಿ ಒಟ್ಟಿನಲ್ಲಿ ಆ ದಿವ್ಯ ಚೇತನವು ನಿಮ್ಮ ಅಭೀಪ್ಸೆಯೊಳಗೆ ಸದಾ ಜಾಗೃತವಾಗಿದೆ ಎಂಬುದಂತೂ ಸತ್ಯ. ಅದರಿಂದಲೇ ಆನಂದವು ದೊರೆಯುತ್ತದೆ.

ಒಂದು ವೇಳೆ ಅತೀಂದ್ರಿಯ ಪ್ರಜ್ಞೆಯು ಜಾಗೃತವಾಗಿರದೇ ಇದ್ದರೆ, ಅಭೀಪ್ಸೆಯು ಚೇತನದ ಬೇರೆ ಬೇರೆ ಸ್ತರಗಳಿಂದ ಇಳಿದುಬರಬಹುದು. ಕೆಲವೊಮ್ಮೆ ಅದು ಮಾನಸದಿಂದಿಳಿದು ಬಂದರೆ, ಇನ್ನು ಕೆಲವೊಮ್ಮೆ ಪ್ರಾಣ ವಲಯದಿಂದ ಬರಬಹುದು, ಅಥವಾ ನಮ್ಮ ಭೌತಿಕ ಸ್ತರದಿಂದಲೇ ಅದರ ಅವಿರ್ಭಾವವಾಗಬಹುದು. ಇನ್ನು ಕೆಲವೊಮ್ಮೆ ಅದು ಈ ಮೂರೂ ಪಾತಳಿಗಳ ಸಂಯುಕ್ತವಾಗಿ ಬರಬಹುದು. ಹೀಗೆ ಅದು ಯಾವುದೇ ಸ್ತರದಿಂದ ಇಳಿದುಬರಬಹುದು. ಆದರೆ, ತೀವ್ರತೆಯಿರಬೇಕಾದರೆ ಅದು ಪ್ರಾಣ ಸ್ತರದಿಂದಲೇ ಬರಬೇಕಾಗಿರುತ್ತದೆ. ಏಕೆಂದರೆ, ತೀವ್ರತೆಯ ತಾಣವು ಪ್ರಾಣವಲಯವೇ ಆಗಿದೆ. ಈ ಪ್ರಾಣಮಯವು ಸಂವೇದನೆಗಳನ್ನು ಸೃಜಿಸುವ ವಲಯವಾಗಿದ್ದು, ಅದುವೇ ತೀವ್ರತೆಯನ್ನು ಸೃಷ್ಟಿಸುತ್ತದೆ.

ಬೇರೊಬ್ಬರ ಅಭೀಪ್ಸೆಯನ್ನು ಒತ್ತಾಯಪೂರ್ವಕವಾಗಿ ನಿಲ್ಲಿಸಲು ಸಾಧ್ಯವಿಲ್ಲ.

ನಿಮ್ಮನ್ನು ದುಃಖಕ್ಕೀಡು ಮಾಡುತ್ತಿರುವ ವೇದನೆಯ ಮೂಲವನ್ನು ನೀವು ಅರಿತಿರಬೇಕು. ಹಾಗೂ ಅದನ್ನು ಕಿತ್ತೆಸೆಯಲು ನಿಮ್ಮ ಅಭೀಪ್ಸೆಯಿಂದ ಪ್ರಯತ್ನಿಸಬೇಕು. ಆ ಪ್ರಯತ್ನದಲ್ಲಿ ದಿವ್ಯತೆಯ ಅಭಯ ಹಸ್ತದ ಸಹಕಾರವನ್ನು ಪಡೆದು ಮುಂಬರಿಯಬೇಕು. ಆ ಔನ್ನತ್ಯದ ಪ್ರಜ್ಞೆಯ ಮೇಲೆ ನಂಬಿಕೆಯನ್ನಿಡಬೇಕು. ಅದುವೇ ನಿಮ್ಮನ್ನು ನಿಮ್ಮ ದುಃಖ ಸಾಗರದಿಂದ ಬೇರ್ಪಡಿಸಿ ಆನಂದೋಧದಿಯೆಡೆಗೆ ಕರೆದೊಯ್ಯುತ್ತದೆ.

## ಪ್ರಯತ್ನ ಮತ್ತು ಅನುಗ್ರಹ

ಇದು ಈಗ ಚರ್ಚಿಸಬೇಕಾದ ವಿಷಯವಲ್ಲದಿದ್ದರೂ, ಇದು ನಮ್ಮನ್ನು ಬೇರೊಂದು ವಿಷಯಕ್ಕೆ ಕರೆದೊಯ್ಯುವ ಚರ್ಚೆಯಾದರೂ, ಅನುಗ್ರಹದ ಕುರಿತಾದ ಹೆಚ್ಚಿನ ಮಾಹಿತಿಗಾಗಿ ಇದನ್ನು ಇಲ್ಲಿ ಪ್ರಸ್ತಾಪಿಸಲೇಬೇಕಿದೆ.

ನಾನು ಈ ಹಿಂದೊಮ್ಮೆ ಇದನ್ನು ಕುರಿತು ಹೇಳಿರಬಹುದು, ಅಥವಾ ಬರೆದಿರಬಹುದು, ಆ ದಿವ್ಯತೆಯ ಅನುಗ್ರಹದ ಮೇಲೆ ನಿಮಗಿರುವ ನಂಬಿಕೆಯು ಅದೆಷ್ಟು ಗಟ್ಟಿಯಾಗಿದ್ದರೂ, ಜೀವನದ ಪ್ರತಿಯೊಂದು ಹಂತದಲ್ಲೂ, ಎಲ್ಲಾ ಪ್ರಮುಖ ಕ್ಷಣಗಳಲ್ಲೂ ಅದು ನಿಮ್ಮನ್ನು ಮುನ್ನಡೆಸುವ ಪ್ರಕ್ರಿಯೆಯನ್ನು, ಮರ್ತ್ಯದ ಹಿಂದೆ ನಿಂತು ಅದನ್ನು ಸರಿಯಾದ ಮಾರ್ಗದಲ್ಲಿ ನಡೆಸುವ ಆ ಅನುಗ್ರಹದ ಅಗಾಧತೆ ಮತ್ತು ನಿಖರತೆಯನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಾಗುವದಿಲ್ಲ. ಈ ಅನುಗ್ರಹವು ಎಷ್ಟರ ಮಟ್ಟಿಗೆ ಈ ಮರ್ತ್ಯವನ್ನು ಸಮನ್ವಯಿಸುತ್ತಿದೆ, ನಡೆಸುತ್ತಿದೆ, ಬೆಂಗಾವಲಾಗಿ ನಿಂತಿದೆ ಎಂಬುದನ್ನು ಗ್ರಹಿಸಲು ಸಾಧ್ಯವಾಗುವದಿಲ್ಲ. ಏಕೆಂದರೆ, ಈ ಅನುಗ್ರಹದ ಕಾರ್ಯ ಚಟುವಟಿಕೆಯು ನಮ್ಮ ಮರ್ತ್ಯ ಪ್ರಜ್ಞೆಗಿಂತಲೂ ಅದೆಷ್ಟೋ ಪಟ್ಟು ವೇಗವಾಗಿ ನಿರ್ವಹಿಸುತ್ತಿರುತ್ತದೆ. ಅದರ ಕಾರ್ಯಗಳ ಮೇಲೆ ಗಮನ ಹರಿಸುವ ನಮ್ಮ ಕಾಣ್ಕೆಯು ಇನ್ನೂ ವ್ಯಾಪ್ತಮಯವಾಗಿ ವಿಸ್ತರಿಸಿರದೇ ಇರುವುದೇ ಇದಕ್ಕೆ ಕಾರಣವಾಗಿದೆ.

ನೀವು ಆ ಅನುಗ್ರಹದ ಸಂಪರ್ಕಕ್ಕೆ ಬಂದತಕ್ಷಣ, ಅದು ಕಣ್ತೆರೆದು ಮುಚ್ಚುವುದರೊಳಗಾಗಿ ನಿಮ್ಮ ಜೀವನವನ್ನು ಸರಿದೂಗಿಸಿ ಮುಂಬರಿದಿರುತ್ತದೆ. ಆ ಒಂದು ಚಿಕ್ಕ ಕ್ಷಣದ ಅನುಭವವನ್ನು ಹಿಡಿದಿಡಲೂ ಸಹ ಸಾಧ್ಯವಾಗದಷ್ಟು ವೇಗವಾಗಿ ಅದು ನಿಮ್ಮ ಬಾಳನ್ನು ಹಸನಾಗಿಸಿರುತ್ತದೆ. ಹಾಗೂ ಆ ಅನುಗ್ರಹದ ಹಸ್ತಕ್ಷೇಪವು ನಿಮಗೆ ಶಾಶ್ವತ ಪರಿಹಾರವನ್ನೂ ಸಹ ನೀಡಿರುತ್ತದೆ.

ಈ ಮರ್ತ್ಯವು ಎಂದಿಗೂ ಆ ಅನುಗ್ರಹದ ಸಮಕ್ಕೆ ನಡೆಯಲು ಸಾಧ್ಯವಿಲ್ಲ ಎಂಬುದನ್ನು ನಾವು ಮರೆಯಬಾರದು. ಹಾಗೆಂದು ಅದನ್ನು ದುಃಖ ಪಡುವ ವಿಚಾರವಾಗಿಯೂ ನೋಡಬಾರದು. ಯಾವುದೇ ನೋವು, ಸಂಕಟ, ಭಯ, ವಿಷಾದದ ಭಾವನೆಗಳಿಗೆ ಒಳಗಾಗಬಾರದು. ಏಕೆಂದರೆ, ಒಮ್ಮೆ ನೀವು ಆ ಅನುಗ್ರಹದ ಸಂಪರ್ಕಕ್ಕೆ ಒಳಗಾಗಿದ್ದೇ ಆದಲ್ಲಿ ಅದು ನಿಮ್ಮನ್ನು ಸರ್ವ ಶಕ್ತಿಯ ನೆಲೆಯಾದ ಆನಂದಮಯದೆಡೆಗೆ ಮುನ್ನೂಕುತ್ತಿರುತ್ತದೆ. ಇದರಿಂದ ನಿಮ್ಮ ಇಡೀ ಜೀವನವು ಸಂತೋಷದ ಸಾಗರವಾಗಿ ಬದಲಾಗುತ್ತದೆ.

ಆ ದಿವ್ಯತೆಯೊಡನೆ ಸಮನ್ವಯಗೊಳ್ಳುವ ಹಂತದಲ್ಲಿ ಈ ಅನುಗ್ರಹವು ಅತ್ಯುತ್ತಮ ಪಾತ್ರವನ್ನು ವಹಿಸುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 8/248–50**

## ಆಸೆ ಮತ್ತು ಅಭೀಪ್ಸೆ

***ಆಸೆ ಮತ್ತು ಅಭೀಪ್ಸೆಯ ನಡುವಿನ ವ್ಯತ್ಯಾಸವೇನು? ಸ್ವಾರ್ಥ ಮತ್ತು ಸ್ವಯಂಪ್ರೇರಿತ ಸಾಕ್ಷಾತ್ಕಾರದ ನಡುವಿನ ವ್ಯತ್ಯಾಸವೇನು?***

ಆಸೆಯು ಪ್ರಾಣಮಯದಿಂದಿಳಿದ ಸಂವೇದನೆಯಾದರೆ, ಅಭೀಪ್ಸೆಯು ಮಾನಸದಿಂದಿಳಿದ ಅನುಭೂತಿಯಾಗಿದೆ.

ನಿಜವಾದ ಅಭೀಪ್ಸೆಯನ್ನು ಮತ್ತು ನಿಸ್ವಾರ್ಥ–ಪ್ರಾಮಾಣಿಕತೆಯ ಭಾವನೆಯನ್ನು ಹೊಂದಿರುವ ವ್ಯಕ್ತಿಯ ವಿಷಯದಲ್ಲಿ ಈ ಪ್ರಶ್ನೆಯ ಅಗತ್ಯವಿಲ್ಲ. ಏಕೆಂದರೆ, ಅಭೀಪ್ಸೆಯ ಕಂಪನವು ಸೃಷ್ಟಿಸುವ ಪ್ರಕಾಶ ಮತ್ತು ಶಾಂತಿಯ ಅನುಭೂತಿಯನ್ನು ಆಸೆಯ ಕಂಪನಗಳು ಸೃಷ್ಟಿಸಲು ಸಾಧ್ಯವಿಲ್ಲ. ಆಸೆಯ ಕಂಪನವು ಭಾವೋದ್ರಿಕ್ತವಾಗಿದ್ದು, ಕತ್ತಲೆ ಮತ್ತು ಹಿಂಸಾತ್ಮಕ ಅನುಭವಗಳನ್ನು ಮಾತ್ರ ಸೃಷ್ಟಿಸುತ್ತದೆ.

ಸ್ವಾರ್ಥ ಎಂದರೆ ಎಲ್ಲವೂ ತನಗೇ ಬೇಕೆಂಬ ಬಯಕೆಯ ಭಾವನೆಯಾಗಿದೆ. ತನ್ನನ್ನು ಹೊರತುಪಡಿಸಿ ಬೇರಾರಕುರಿತೂ ಸಹ ಕಾಳಜಿ ವಹಿಸದೇ ಇರುವುದು, ತನಗೆ ಅಗತ್ಯವಿರುವ ದ್ರವ್ಯಗಳನ್ನು ಕುರಿತು ಅತಿಯಾದ ಒಲವಿರುವುದು... ಇದೇ ಮುಂತಾದ ಭಾವನೆಯಾಗಿದೆ. ಫ್ರೆಂಚ್ ಭಾಷೆಯಲ್ಲಿ ಸಾಕ್ಷಾತ್ಕಾರ(réalisation du Soi)ವೆಂದರೆ, ಬೇರೊಬ್ಬರ ಆಂತರ್ಯದಲ್ಲಿ ಅಡಗಿರುವ ದಿವ್ಯತೆಯ ಅಸ್ತಿತ್ವವನ್ನು ಕಂಡುಹಿಡಿಯುವದಾಗಿದೆ. ಆದರೆ, ಇಂಗ್ಲಿಷಿನಲ್ಲಿ ಸಾಕ್ಷಾತ್ಕಾರವನ್ನು ಕೇವಲ 'ಯಶಸ್ವಿ' ಎಂಬ ಪದಕ್ಕಷ್ಟೇ ಸೀಮಿತಪಡಿಸಲಾಗಿದೆ. ಶ್ರೀ ಅರವಿಂದರ ಬರಹಗಳಲ್ಲಿ ಸಾಕ್ಷಾತ್ಕಾರವೆಂದರೆ, ಅದು ಆತ್ಮದ ಸಾಕ್ಷಾತ್ಕಾರವೇ ಆಗಿದೆ. ಪ್ರತಿಯೋರ್ವರೂ ತಮ್ಮ ಆಂತರ್ಯದಲ್ಲಿರುವ ದಿವ್ಯತೆಯ ಅಂಶವನ್ನು ಕಂಡುಕೊಳ್ಳುವ ಪ್ರಮೇಯವೇ ಸಾಕ್ಷಾತ್ಕಾರವಾಗಿದೆ.

ಆಶೀರ್ವಾದಗಳೊಂದಿಗೆ...

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 16/411–12**

## ಅಭೀಪ್ಸೆಯ ಅಗ್ನಿ

ಆಂತರ್ಯದಲ್ಲಿ ಜ್ವಲಿಸುತ್ತಿರುವ ಅಗ್ನಿಯು ತ್ಯಾಗವನ್ನು ಪ್ರತಿನಿಧಿಸುತ್ತದೆ. ಅದು ಅಭೀಪ್ಸೆಯ ಅಗ್ನಿಯಾಗಿ ತಪಸ್ಸಿನ ಅಗ್ನಿಯಾಗಿ ಪ್ರತಿನಿಧಿಸಲ್ಪಡುತ್ತದೆ.

ಅಭೀಪ್ಸೆಯು ನಿರಂತರವಾದ ಅಗ್ನಿಯನ್ನು ಬೆಳಗಿಸಬೇಕು ಎಂಬುದು ನಿಜ; ಆದರೆ, ಈ ಮಾನಸದ ಅಗ್ನಿಯು ಬೆಳಗುತ್ತ ಉರಿಯುತ್ತ ಮಾನಸದೊಡನೆ ತಾನೂ ಬೆಳೆಯುತ್ತ ಸಾಗುತ್ತದೆ. ನಮ್ಮೊಳಗೆ ಮಾನಸಿಕ ಶಾಂತಿಯು ನೆಲೆಗೊಳ್ಳುವುದು ಅತ್ಯವಶ್ಯಕವಾಗಿದೆ. ಹಾಗಾಗಿ ಆ ಮಾನಸದ ಶಾಂತಿ–ಆನಂದವು ಇಳಿದುಬಂದು ನಿಮ್ಮೊಳಗೆ ಬೆಳೆಯಬೇಕಾದರೆ ಶ್ರೀಮಾತೆಯ ಅನುಗ್ರಹದ ಅವಶ್ಯಕತೆಯಿದೆ. ಹಾಗೂ ಅದು ಬರುವವರೆಗೂ ತಾಳ್ಮೆ ಮತ್ತು ಆತ್ಮವಿಶ್ವಾಸದಿಂದ ಕಾಯುತ್ತಿರಬೇಕು. ನಾವು ಸದಾ ಶ್ರೀಮಾತೆಯ ಸ್ಮರಣೆಯಲ್ಲಿ ಮುಳುಗಿರಬೇಕು. ಅಭೀಪ್ಸೆಯ ಅಗ್ನಿಯನ್ನು ಹೊತ್ತಿಸಿರಬೇಕು. ಸಾಧನೆಗಾಗಿ ನಿಮ್ಮನ್ನು ನೀವು ಅನುಭವಜನ್ಯವಾದ ವಿಧಾನಗಳಿಂದ ಸಿದ್ಧಪಡಿಸಿಕೊಳ್ಳಬೇಕು. ಮತ್ತು ಆತ್ಮವಿಶ್ವಾಸದಿಂದ ಸ್ಥಿರತೆಯನ್ನು ಕಾಪಾಡಿಕೊಂಡು ನಿಮ್ಮ ಕಾರ್ಯದಲ್ಲಿ ನೀವು ಮುಂಬರಿಯಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 30/368–69**

## ಪ್ರಾರ್ಥನೆ ಅಭೀಪ್ಸೆ

***ಸ್ವ–ಪ್ರಯತ್ನಕ್ಕಿಂತ ಪ್ರಾರ್ಥನೆಯೇ ಹೆಚ್ಚು ಪರಿಣಾಮಕಾರಿಯಲ್ಲವೇ?***

ಪ್ರತಿಯೊಂದಕ್ಕೂ ತನ್ನದೇ ಆದ ಪ್ರಾಮುಖ್ಯತೆಯಿದೆ. ಆದರೆ ಅಭೀಪ್ಸೆ ಮತ್ತು ಪ್ರಾರ್ಥನೆಗಳು ಅವುಗಳಿಗಿರುವ ನಂಬಿಕೆಯ ಕಾರಣದಿಂದಾಗಿ ಹೆಚ್ಚು ಪರಿಣಾಮಕಾರಿಯಾಗಿವೆ.

*

***ಪ್ರಾರ್ಥನೆ ಮತ್ತು ಅಭೀಪ್ಸೆಗಳು ಆಲೋಚನೆಯಂತೆಯೇ ಕಾರ್ಯನಿರ್ವಹಿಸುತ್ತವೆಯೇ?***

ಹೌದು, ಕೆಲವೊಮ್ಮೆ ಪ್ರಾರ್ಥನೆ ಮತ್ತು ಅಭೀಪ್ಸೆಗಳು ಅವನ್ನು ನಿರ್ವಹಿಸುತ್ತಿರುವ ವ್ಯಕ್ತಿಯ ಭಾವನೆಗೆ ತಕ್ಕಂತೆ ಬದಲಾಗುತ್ತವೆ. ಕೆಲವೊಮ್ಮೆ ಅದು ಅಭೀಪ್ಸೆಗೆ ಒಳಪಟ್ಟ ವ್ಯಕ್ತಿಯ ಚಿಂತನೆಗಳಾಗಿ ಬದಲಾದರೆ, ಹೆಚ್ಚಿನ ಸಮಯದಲ್ಲಿ ಪ್ರಾರ್ಥನೆ ಮತ್ತು ಅಭೀಪ್ಸೆಯನ್ನು ಹೊಂದಿರುವ ವ್ಯಕ್ತಿಯನ್ನೇ ಅವಲಂಬಿಸಿರುತ್ತವೆ.

## ಪ್ರಾರ್ಥನೆ ಮತ್ತು ಅಭೀಪ್ಸೆಯ ನಡುವೆ ಇರುವ ವ್ಯತ್ಯಾಸವೇನು?

ಇದರ ಕುರಿತು ನಾನು ಈ ಹಿಂದೆಯೇ ಬರೆದಿದ್ದೆ. ಪ್ರಾರ್ಥನೆಗಳಲ್ಲಿ ಹಲವು ವಿಧಗಳಿವೆ.

ಸಂಪೂರ್ಣವಾಗಿ ಯಾಂತ್ರಿಕ ವಿಧಾನದಿಂದ ಕೂಡಿದ ಭೌತಿಕ ರೂಪದ ಪ್ರಾರ್ಥನೆಯೊಂದಿದೆ. ಇದರಲ್ಲಿ ಪದಗಳನ್ನು ಪುನರಾವರ್ತಿಸುತ್ತ ಪಠಿಸುವ ಕ್ರಮದೊಂದಿಗೆ ಪ್ರಾರ್ಥಿಸಲಾಗುತ್ತದೆ. ಆದರೆ, ಇದು ಹೆಚ್ಚು ಅರ್ಥಯುತವಾದ ಪ್ರಾರ್ಥನೆಯ ರೂಪವಲ್ಲ. ಏಕೆಂದರೆ, ಅದು ಕೇವಲ ಒಂದು ರೀತಿಯ ಫಲಿತಾಂಶವನ್ನು ಮಾತ್ರ ನೀಡುತ್ತದೆ. ಅದು ಪ್ರಾರ್ಥಿಸುವ ವ್ಯಕ್ತಿಗೆ ಬೇಸರಿಕೆಯನ್ನು ಹುಟ್ಟಿಸುತ್ತದೆ. ಏಕೆಂದರೆ, ಪ್ರಾರ್ಥನಾ ಪದಗಳನ್ನು ಹಲವಾರು ಬಾರಿ ಪುನರಾವರ್ತಿಸುತ್ತ ಕೊನೆಗೊಮ್ಮೆ ನೀವು ಪಠಣವನ್ನು ನಿಲ್ಲಿಸಿದ ಕೂಡಲೇ ಅದೂ ಸಹ ಶಾಂತವಾಗುತ್ತದೆ.

ಯಾವುದಾದರೂ ಒಂದು ನಿಖರವಾದ ದ್ರವ್ಯವನ್ನು ಪಡೆದುಕೊಳ್ಳಲಿಕ್ಕಾಗಿ ಸ್ವಯಂಪ್ರೇರಿತವಾಗಿ ಮಾಡುವ ಪ್ರಾರ್ಥನೆಯೊಂದಿದೆ: ಕೆಲವರು ತಮಗೆ ಬೇಕಿರುವ ದ್ರವ್ಯಕ್ಕಾಗಿ ತಾವೇ ಪ್ರಾರ್ಥಿಸುತ್ತಾರೆ, ಇನ್ನು ಕೆಲವರು ಬೇರೊಬ್ಬರಿಗೆ ಬೇಕಿರುವ ದ್ರವ್ಯಕ್ಕಾಗಿ ತಾವು ಪ್ರಾರ್ಥಿಸುತ್ತಾರೆ. ಮತ್ತೂ ಕೆಲವರು ಸರ್ವ ಜನಕ್ಕಾಗಿ ಪ್ರಾರ್ಥಿಸುತ್ತಾರೆ.

ಅಭೀಪ್ಸೆ ಮತ್ತು ಪ್ರಾರ್ಥನೆಗಳು ಚಲಿಸುತ್ತ ಬಂದು ಒಂದು ನಿರ್ದಿಷ್ಟ ಸ್ಥಾನದಲ್ಲಿ ಒಂದನ್ನೊಂದು ಮುಖಾಮುಖಿಯಾಗುತ್ತವೆ. ಏಕೆಂದರೆ, ಉಸಿರಾಡುತ್ತಿರುವ ಅನುಭವವೊಂದನ್ನು ದಕ್ಕಿಸಿಕೊಳ್ಳಲು ನಿರ್ವಹಿಸುವ ಪ್ರಾರ್ಥನೆಯೊಂದಿದೆ: ಇದು ಯಾವುದೋ ಒಂದು ಅನುಭವದ ಅಭಿವ್ಯಕ್ತಿಗಾಗಿ ಅಥವಾ ಆ ಅನುಭವವನ್ನು ನೀಡಿರುವದಕ್ಕಾಗಿ ಕೃತಜ್ಞತೆಯನ್ನು ನೀಡಲೋಸುಗ ಇಲ್ಲವೇ ಆ ಅನುಭವದ ಮುಂದುವರಿದ ಅನುಭೂತಿಯನ್ನು ಕೇಳಲೆಂದೋ, ಅದರ ವಿವರಣೆಯನ್ನು ತಿಳಿಯಲೆಂದೋ ಬಯಸಿ ಜನಿಸಿರುತ್ತದೆ; ಮತ್ತು ಅದು ಅಭೀಪ್ಸೆಗೆ ಅತಿ ಹತ್ತಿರದಲ್ಲಿರುವ ಪ್ರಾರ್ಥನೆಯ ರೂಪವಾಗಿದೆ. ಈ ಅಭೀಪ್ಸೆಯನ್ನು ಪದಗಳಲ್ಲಿ ಸೆರೆಹಿಡಿದು ಪಠಿಸಬೇಕಿಲ್ಲ. ಒಂದು ವೇಳೆ ಆ ಅಭೀಪ್ಸೆಯನ್ನು ಪದಗಳಲ್ಲಿ ಹೇಳಲು ಪ್ರಯತ್ನಿಸಿದ್ದೇ ಆದಲ್ಲಿ, ಅದು ಇನ್ನೊಂದಕ್ಕೆ ಆಮಂತ್ರಣವನ್ನು ನೀಡಿದಂತಾಗುತ್ತದೆ. ಉದಾಹರಣೆಗೆ ನೀವು ಒಂದು ನಿರ್ದಿಷ್ಟವಾದ ಆದ ಸ್ಥಿತಿಗಾಗಿ ಅಭೀಪ್ಸೆ ಪಟ್ಟಿರುತ್ತೀರಿ, ಆದರೆ, ಕೆಲವೊಮ್ಮೆ ಅದು ನಿಮ್ಮ ವ್ಯಕ್ತಿತ್ವಕ್ಕೆ ಹೊಂದಿಕೆಯಾಗದಂತಹ

ಬೇರೆಯಾವುದೋ ಒಂದು ಕೀಳು ಕಾಮನೆಯನ್ನು ನಿಮ್ಮೊಳಗೆ ಬಿತ್ತಲು ಪ್ರಯತ್ನಿಸುತ್ತದೆ. ಅದು ಕತ್ತಲೆಯ ಅಂಶದಿಂದ ಬಂದ ಅಜ್ಞಾನವೇ ಆಗಿರಬಹುದು, ಅಥವಾ ಕೆಟ್ಟ ಇಚ್ಛೆಯೂ ಆಗಿರಬಹುದು. ಅದನ್ನು ಪದಗಳಲ್ಲಿ ನಿರೂಪಿಸಲು ಸಾಧ್ಯವಿಲ್ಲ. ಅದು ಜ್ವಲಿಸುವ ಅಗ್ನಿಯಂತೆ ವರ್ಧಿಸುತ್ತದೆ. ಬೇರೆಯವರ ಅನುಭವಗಳನ್ನು ನೆನಪಿನಲ್ಲಿಟ್ಟುಕೊಳ್ಳಲು ಅದನ್ನು ಪದಗಳ ರೂಪದಲ್ಲಿ ಬರೆದಿಡಬಹುದು. ಆದರೆ ಅಭೀಪ್ಸೆ ಎಂಬುದು ಜ್ವಲಿಸುವ ಅಗ್ನಿಯಂತೆ, ಎತ್ತರಕ್ಕೆ ಏರುತ್ತದೆ. ಒಬ್ಬ ವ್ಯಕ್ತಿಯು ತಾನು ಏನಾಗಬೇಕೆಂದು ಬಯಸುತ್ತಾನೋ ಅದನ್ನು ಆಸೆ ಎಂದು ಕರೆಯುತ್ತೇವೆ ಆದರೆ ಅದಕ್ಕಾಗಿ ತನ್ನನ್ನು ತಾನು ಸಿದ್ಧಪಡಿಸಿಕೊಳ್ಳುವ ಪ್ರವೃತ್ತಿಯನ್ನು ಅಭೀಪ್ಸೆ ಎನ್ನಲಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/139–41**

**ಇಚ್ಛೆಯೆಂಬ ಪವಿತ್ರೀಕರಣದ ಜ್ವಾಲೆ**

ನಿಜವಾಗಿಯೂ ಈ ಇಚ್ಛೆಯು ಪವಿತ್ರೀಕರಿಸುವ ಜ್ವಾಲೆಯಾಗಿದ್ದು, ಅದು ತನ್ನ ಆಂತರ್ಯದೊಳಗೆ ಅರಿವನ್ನು ಹೊತ್ತು ಜ್ವಲಿಸುತ್ತಿರುತ್ತದೆ.

ಉದಾಹರಣೆಗೆ, ನೀವು ಮಾಡಿದ ಯಾವುದೋ ಒಂದು ಕಾರ್ಯದ ಕುರಿತು ವಿಷಾದವನ್ನು ಹೊಂದಿದ್ದರೆ, ಅದು ನಿಮ್ಮಲ್ಲಿ ದುಃಖದ ಭಾವನೆಯನ್ನು ಸೃಷ್ಟಿಸಿದರೆ, ಮತ್ತು ಆ ದುಃಖದಲ್ಲಿ ಇತರರೂ ಭಾಗಿಯಾಗಿದ್ದೇ ಆದಲ್ಲಿ, ಆ ಘಟನೆಯ ಕುರಿತು ಆ ಇತರರ ಪ್ರತಿಕ್ರಿಯೆಗಳು ಹೇಗಿರುತ್ತವೆ ಎಂಬುದು ನಿಮಗೆ ತಿಳಿದಿರುವದಿಲ್ಲ. ಆದರೆ, ಆ ಘಟನೆಯು ಉತ್ತಮ ಸ್ಥಿತಿಯನ್ನು ಪಡೆಯಬೇಕೆಂದು ಬಯಸುತ್ತಿರುತ್ತೀರಿ. ಆ ಘಟನೆಯಲ್ಲಿ ನಿಮ್ಮಿಂದಾದ ತಪ್ಪಿನರಿವಾದರೆ, ನಿಮ್ಮಲ್ಲಿ ಆ ತಪ್ಪಿನ ಮೂಲದ ಅರ್ಥವು ತೆರೆದುಕೊಳ್ಳುತ್ತದೆ. ಹಾಗೂ ಇನ್ನು ಮುಂದೆ ಅಂತಹ ತಪ್ಪು ನಡೆಯದಿರುವಂತೆ ಪ್ರಯತ್ನಿಸುತ್ತೀರಿ. ಇದರಿಂದ ನೀವು ಹೊಸದೊಂದು ಪ್ರಗತಿಯ ಪಥದಲ್ಲಿ ನಡೆಯಲು ಆರಂಭಿಸುತ್ತೀರಿ. ಆ ಮೂಲಕ ದಿವ್ಯತೆಯೆಡೆಗೆ ಹೊಸ ಮಾರ್ಗವೊಂದನ್ನು ರೂಪಿಸುತ್ತೀರಿ. ಅದುವೇ ನಿಮ್ಮನ್ನು ಹೆಚ್ಚು ಸ್ಪಷ್ಟವೂ, ಸತ್ಯವೂ, ತೀವ್ರತರವೂ ಆದ ಭವಿಷ್ಯದೆಡೆಗೆ ಕೊಂಡೊಯ್ಯಬಲ್ಲ ತೆರೆದ ಹೆಬ್ಬಾಗಿಲಾಗಿ ಪರಿಣಮಿಸುತ್ತದೆ. ಕೊನೆಗೆ ಇದೆಲ್ಲವೂ ಇಲ್ಲಿ (ಹೃದಯದೆಡೆಗೆ ಕೈ ಮಾಡಿತೋರಿಸುತ್ತಾ) ಒಂದು ಶಕ್ತಿಯ ರೂಪದಲ್ಲಿ ಸಂಗ್ರಹವಾಗುತ್ತದೆ. ಮತ್ತು

ಅದು ಮೇಲುಮೇಲಕ್ಕೆ ಆರೋಹಿಸುತ್ತಾ ಸಾಗುತ್ತದೆ. ಇದಕ್ಕೆ ಪದಗಳ ಅಭಿವ್ಯಕ್ತಿಯ ಅವಶ್ಯಕತೆಯಿರುವದಿಲ್ಲ.

ನಿಮ್ಮೊಳಗೆ ಸತ್ಯವಾದ ಅಭೀಪ್ಸೆಯು ಜಾಗೃತವಾಗಿದ್ದರೆ, ದಿವ್ಯತೆಯು ನಿಮ್ಮಿಂದ ಏನನ್ನು ಬಯಸುತ್ತದೆಯೋ ಅದಕ್ಕೆ ಅನುಗುಣವಾಗಿರುವ ಸತ್ಯವೂ–ಸಂಪೂರ್ಣವೂ ಆದ ಸಮನ್ವಯದ ಸ್ಥಿತಿಯನ್ನು ರೂಪಿಸಿದ್ದೇ ಆದಲ್ಲಿ ಅದು ನಿಮ್ಮೊಳಗೆ ಶತಾವಧಿ–ಸಹಸ್ರಾವಧಿಯವರೆಗಿನ ಅಭೀಪ್ಸೆಯನ್ನು ಹುಟ್ಟುಹಾಕುತ್ತದೆ.

ಸಾಮಾನ್ಯವಾಗಿ ಪ್ರಾರ್ಥನೆಯು ಬಹಿರಂಗದ ಅಸ್ತಿತ್ವವನ್ನು ಹೊಂದಿದೆ. ಯಾವುದೋ ಒಂದು ನಿಖರವಾದ ಸಂಗತಿಯ ಕುರಿತು, ಅದಕ್ಕಾಗಿಯೇ ರೂಪಿಸಿದ ಸೂತ್ರದ ಮೂಲಕವೇ ಪ್ರಾರ್ಥನೆಯನ್ನು ನೆರವೇರಿಸಲಾಗುತ್ತದೆ. ಕೆಲವರು ಅಭೀಪ್ಸೆಯನ್ನು ಪ್ರಾರ್ಥನೆಗೆ ಹೋಲಿಸಿ ಮಾತನಾಡಿರಬಹುದು. ಆದರೆ ಎಲ್ಲ ಮೂಲದಿಂದ ನೋಡಲಾಗಿ ಅಭೀಪ್ಸೆಯು ಪ್ರಾರ್ಥನೆಯನ್ನೂ ಮೀರಿದ ಅಸ್ಮಿತೆಯನ್ನು ಹೊಂದಿದೆ. ವ್ಯಕ್ತಿಯು ಅದನ್ನು ಮರೆತರೂ ಸಹ ಅದು ಅವನ ಅತಿ ಹತ್ತಿರದಲ್ಲಿರುತ್ತದೆ. ಹಾಗೂ ದಿವ್ಯತೆಯು ನಿಮಗಾಗಿ ರೂಪಿಸಿದ ಎಲ್ಲವನ್ನೂ ನಿಮಗೆ ದೊರೆಯುವಂತೆ ಪ್ರಯತ್ನಿಸುತ್ತದೆ. ನಿಮಗೆ ಬೇಕಿರುವ ಯಾವುದೋ ಒಂದು ಸಂಗತಿಗಾಗಿ ನೀವು ಆ ದಿವ್ಯತೆಯಲ್ಲಿ ಪ್ರಾರ್ಥನೆಗೈಯುತ್ತೀರಿ, ನಂತರ ನೀವು ಬಯಸಿದ ದ್ರವ್ಯವು ಯಾವುದೋ ಮೂಲದಿಂದ ದೊರೆತ ನಂತರ ನೀವು ಆ ದಿವ್ಯತೆಗೆ ವಂದನೆಯನ್ನು ಅರ್ಪಿಸುತ್ತೀರಿ. ಇದು ಒಂದು ರೀತಿಯ ಕೃತಜ್ಞತಾ ಕ್ರಿಯೆಯಾಗಿದೆ. ನೀವು ದಿವ್ಯತೆಯನ್ನು ಕುರಿತು ಬೇಡಿಕೊಳ್ಳುವುದು, ಅದಕ್ಕೆ ಪ್ರತಿಯಾಗಿ ದಿವ್ಯತೆಯು ನಿಮ್ಮ ಮೇಲೆ ಅನುಗ್ರಹವನ್ನು ಬೀರುವುದು, ಕೊನೆಗೆ ನೀವು ಆ ದಿವ್ಯತೆಗೆ ವಂದನೆಯನ್ನು ಸಲ್ಲಿಸುವುದು... ಇವೆಲ್ಲವೂ ಪ್ರಾರ್ಥನೆಯ ರೂಪಗಳೇ ಆಗಿವೆ. ಈ ಪ್ರಾರ್ಥನೆಯಲ್ಲಿ ಸ್ವಾರ್ಥ ಭಾವನೆಯಿಲ್ಲದೆ ಸಕಲ ಜನಾಂಗಕ್ಕಾಗಿ ಕೋರಿಕೊಳ್ಳುವ ಪ್ರಾರ್ಥನೆಯು ಅತ್ಯುನ್ನತ ಪ್ರಾರ್ಥನೆಯ ರೂಪವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/139–41**

### ಮಧ್ಯಸ್ಥಿಕೆಯ ಪ್ರಾರ್ಥನೆ

ಸ್ವಾರ್ಥ ಮನೋಭಾವನೆಯಿಂದ ಕೂಡಿರದ, ಸ್ವಯಂಪ್ರೇರಿತವಾದ ಪ್ರಾರ್ಥನೆಯ ರೂಪವೊಂದು ಅಸ್ತಿತ್ವದಲ್ಲಿದೆ. ಅದು ಮನುಕುಲ ಮತ್ತು ದಿವ್ಯತೆಯ ನಡುವಿನ

ಮಧ್ಯಸ್ಥಿಕೆಯಾಗಿ ನಿರ್ವಹಿಸುವ ಪ್ರಾರ್ಥನೆಯಾಗಿದೆ. ಇದು ಬಹು ಶಕ್ತಿಯುತವಾದ ಪ್ರಾರ್ಥನೆಯಾಗಿದ್ದು, ಪ್ರಾರ್ಥಿಸಿದ ತಕ್ಷಣವೇ ಅದರ ಫಲಗಳು ಕೈಗೂಡಿರುವ ಹಲವಾರು ನಿದರ್ಶನಗಳನ್ನು ನಾನು ಅರಿತಿದ್ದೇನೆ. ಇದು ಪ್ರಾರ್ಥಿಸುವವರ ವಿಶಾಲವಾದ ನಂಬಿಕೆ, ಉತ್ಸಾಹ, ಪ್ರಾಮಾಣಿಕತೆ ಮತ್ತು ಹೃದಯದ ವ್ಯಾಪ್ತತೆಯನ್ನು ತೋರಿಸುತ್ತದೆ. ಹಾಗೂ ಇದು ಯೋಚಿಸಿ, ಲೆಕ್ಕಾಚಾರವನ್ನು ಮಾಡಿ, ಚೌಕಾಶಿ ಮಾಡಿ ಪ್ರಾರ್ಥಿಸುವ ಕಲ್ಪನೆಯಿಂದ ದೂರವಾಗಿದೆ. ಏಕೆಂದರೆ, ಇದು ಒಂದು ರೀತಿಯಲ್ಲಿ ಒಂದನ್ನು ಕೊಟ್ಟು ಇನ್ನೊಂದನ್ನು ಪಡೆಯುವ ವಿನಿಮಯದ ರೂಪವಾಗಿ ಮಾರ್ಪಡುತ್ತದೆ. ಕೆಲವರು ತಾವು ಮಾಡಿದ ಸಹಾಯಕ್ಕಾಗಿ ಬೇರೊಂದನ್ನು ಪಡೆಯಲು ಬಯಸುತ್ತಿರುತ್ತಾರೆ. ಅವರು ಒಂದು ಕೈಯಿಂದ ದ್ರವ್ಯವೊಂದನ್ನು ಕೊಟ್ಟು ಬೇರೊಂದು ಕೈಯಿಂದ ಇನ್ನಾವುದೋ ದ್ರವ್ಯವನ್ನು ಪಡೆಯಲು ಅದನ್ನು ಮುಂಚಾಚಿರುತ್ತಾರೆ. ಹಲವಾರು ಪ್ರಾರ್ಥನೆಗಳು ಇದೇ ರೀತಿಯದ್ದಾಗಿವೆ. ಆದರೆ, ನಾನೀಗ ತಿಳಿಸುತ್ತಿರುವ ಪ್ರಾರ್ಥನೆಯು ಈ ಸಂದಿಗ್ಧಗಳಿಂದ ದೂರವಾದ ಕೃತಜ್ಞತಾ ಭಾವನೆಯಿಂದ ಕೂಡಿದ ಪ್ರಾರ್ಥನೆಯಾಗಿದೆ.

ನೀವು ಅದನ್ನು ಸಾಧಿಸಿದ್ದೀರಿ. ಆದರೆ, ನಾನು ಅದನ್ನು ಸಾಧಿಸಿರುವೆನೇ ಎಂಬುದು ತಿಳಿದಿಲ್ಲ.

ಸ್ಪಷ್ಟವಾಗಿ ಹೇಳಬೇಕೆಂದರೆ, ಪ್ರಾರ್ಥನೆಯನ್ನು ಪದಗಳ ರೂಪದಲ್ಲಿ ಸೆರೆಹಿಡಿಯಲಾಗಿದೆ. ಆದರೆ, ನಾವು ರೂಪಿಸಿದ ಪದಗಳಲ್ಲಿ ಹಿಡಿಯಲ್ಪಟ್ಟ ಪ್ರಾರ್ಥನೆಯು ಬೇರೆ ಬೇರೆ ಆಯಾಮಗಳಲ್ಲಿ ಆ ಸ್ಥಿತಿಗೆ ಅನುಗುಣವಾಗಿ ವಿಭಿನ್ನವಾದ ಮೌಲ್ಯವನ್ನು ಪಡೆದುಕೊಳ್ಳಬಹುದು. ಆದರೆ, ಆ ಪ್ರಾರ್ಥನೆಯು ಸ್ಪಷ್ಟವಾಗಿ ಸೂತ್ರಕ್ಕೆ ಒಳಪಟ್ಟಿರಬೇಕೆಂಬುದು ಪ್ರತಿಯೊಬ್ಬರ ಅಭೀಪ್ಸೆಯಾಗಿರುತ್ತದೆ. ಯಾರನ್ನಾದರೂ ಪ್ರಾರ್ಥಿಸದೇ ಪ್ರಾರ್ಥನೆಯನ್ನು ನಿರ್ವಸಹಿಸುವುದು ಕಷ್ಟ. ಉದಾಹರಣೆಗೆ, ದಿವ್ಯತೆಯ ಅಸ್ತಿತ್ವವನ್ನು ಒಪ್ಪದೆ ಬ್ರಹ್ಮಾಂಡದ ಕಲ್ಪನೆಯನ್ನು ಹೊಂದಿರುವವರು. (ಈ ರೀತಿಯ ಹಲವಾರು ಜನರಿದ್ದಾರೆ. ಅವರ ಈ ಕಲ್ಪನೆಯೇ ಅವರ ದುಃಖಕ್ಕೆ ಕಾರಣವಾಗಿತ್ತದೆ. ಎಲ್ಲವನ್ನೂ ತಿಳಿದಿರುವ, ಎಲ್ಲವನ್ನೂ ಮಾಡಬಲ್ಲ, ಅಥವಾ ತನಗಿಂತ ಹೆಚ್ಚಿನದನ್ನು ಸಾಧಿಸಿರುವವರು ಯಾರಾದರೂ ಇದ್ದಾರೆಯೇ? ಎಂಬ ಪ್ರಶ್ನೆಯು ಸದಾ ಅವರನ್ನು ಕಾಡುತ್ತಿರುತ್ತಲೇ ಇರುತ್ತದೆ. ಇದೇ ಕೊರಗಿನಲ್ಲಿ ಅವರು ಕೆಲವೊಮ್ಮೆ ದಿವ್ಯತೆಯ ಅಂಶವೇ ಇರದಂತಹ

ವಿಶ್ವವೊಂದನ್ನು ಸೃಜಿಸಲು ಬಯಸುತ್ತಾರೆ.) ಈ ರೀತಿಯ ಜನರಿಗೆ ಸತ್ಯವಾಗಿ, ಸ್ಪಷ್ಟವಾಗಿ ಪ್ರಾರ್ಥಿಸಲು ಸಾಧ್ಯವಿಲ್ಲ. ಅವರು ತಮ್ಮನ್ನು ತಾವೇ ಪ್ರಾರ್ಥಿಸಿಕೊಳ್ಳಲೂ ಸಾಧ್ಯವಿಲ್ಲ. ಅದು ಪ್ರಕೃತಿಗೆ ವಿರುದ್ಧ. ಹಾಗಾದರೆ ಅವರು ಯಾವುದನ್ನು ಕುರಿತು ಪ್ರಾರ್ಥಿಸುತ್ತಾರೆ? ದಿವ್ಯತೆಯನ್ನು ನಂಬದ, ದಿವ್ಯತೆಯ ಅಸ್ತಿತ್ವದಲ್ಲಿ ನಂಬುಗೆಯಿಲ್ಲದ ಜನರು ಏನನ್ನು ಆಶಿಸಬಹುದು? ಅವರು ಕೇವಲ ಪ್ರಗತಿಯನ್ನು ಬಯಸುತ್ತಾರೆ. ಈ ಜಗತ್ತು ನಿರಂತರವಾಗಿ ಪ್ರಗತಿಯಾಗುತ್ತಲೇ ಸಾಗುತ್ತಿರಬೇಕೆಂಬುದು ಅವರ ಬಯಕೆ. ಅದರಂತೆ ಅದು ದಿವ್ಯತೆಯ ಸಹಾಯದಿಂದ ನಡೆಯುತ್ತಲೂ ಇರುತ್ತದೆ. ಈ ಹಾದಿಯಲ್ಲಿ ಅವರೊಳಗೆ ಅಪಾರವಾದ ಅಭೀಪ್ಸೆಯಿರಬಹುದು. ಅದಕ್ಕಾಗಿ ಅವರಿಗೆ ದಿವ್ಯತೆಯ ಅವಶ್ಯಕತೆಯಿಲ್ಲದೇ ಇರಬಹುದು. ಆದರೆ ಆ ದಿವ್ಯತೆಯು ಮಾತ್ರ ತನ್ನ ಕಾರ್ಯವನ್ನು ನಿರ್ವಹಿಸುತ್ತಲೇ ಇರುತ್ತದೆ. ಅಭೀಪ್ಸೆ ಎಂದರೆ ನಂಬಿಕೆ ಎಂದರ್ಥ. ಆದರೆ, ಇವರ ಪ್ರಕಾರ ಅದು ದಿವ್ಯತೆಯ ಮೇಲಿನ ನಂಬಿಕೆಯಲ್ಲ. ದಿವ್ಯತೆಯ ಅಸ್ತಿತ್ವವಿಲ್ಲದೇ ಪ್ರಾರ್ಥನೆಗೆ ಯಾವ ಬೆಲೆಯೂ ಇಲ್ಲ. ಪ್ರಾರ್ಥಿಸಲು ಯಾವುದಾದರೂ ಒಂದು ದಿವ್ಯ ಚೇತನದ ಅಗತ್ಯವಿದೆ. ಚೈತನ್ಯವಿಲ್ಲದ ನಿರರ್ಥಕ ಅಂಶವನ್ನು ಕುರಿತು ಪ್ರಾರ್ಥಿಸಲೂ ಸಹ ಸಾಧ್ಯವಿಲ್ಲ. ನಮ್ಮ ಪ್ರಾರ್ಥನೆಯನ್ನು ಕೇಳಿಸಿಕೊಳ್ಳಲು ಯಾವುದಾದರೂ ಒಂದು ದೈವತವು ಬೇಕೇ ಬೇಕು. ಒಂದು ವೇಳೆ ಶೂನ್ಯದೆಡೆಗೆ ಮುಖಮಾಡಿ ಹಾಗೇ ಪ್ರಾರ್ಥಿಸಿದರೂ ಆ ಔನ್ನತ್ಯದಲ್ಲಿರುವ ದಿವ್ಯತೆಯು ನಮ್ಮ ಕರೆಯನ್ನು ಆಲಿಸಲು ಸದಾ ಸಿದ್ಧವಾಗಿಯೇ ಇರುತ್ತದೆ. ಆ ಚೈತನ್ಯವು ಅನಂತವೂ, ಶಕ್ತಿಯುತವೂ ಆಗಿದ್ದು ನಮ್ಮ ಹಣೆ ಬರಹವನ್ನು ಬದಲಿಸುವ ಸಾಮರ್ಥ್ಯವನ್ನು ಹೊಂದಿದೆ.

*

ಪ್ರಾರ್ಥನೆಯೆಂಬುದು ವ್ಯಕ್ತಿಗತವಾದ ವಿಷಯವಾಗಿದೆ. ಅದು ಆ ವ್ಯಕ್ತಿಯ ಉದ್ದೇಶದ ಮೇಲೆ ಅವಲಂಬಿತವಾಗಿರುತ್ತದೆ. ನೀವು ನಿಮ್ಮ ಕರೆಯನ್ನು ಆಲಿಸಲು ಶಕ್ಯವಾಗಿರುವ ದೈವತವೊಂದನ್ನು ಕುರಿತು ಪ್ರಾರ್ಥಿಸಿದರೆ ನಿಮಗೆ ಅದರಿಂದ ಸೂಕ್ತವಾದ ಫಲವು ದೊರೆಯುತ್ತದೆ. ಅದೇ ನೀವು ನಿಮ್ಮ ಕರೆಗೆ ಉತ್ತರಿಸದೇ ಇರುವ ಯಾವುದೋ ನಿರ್ಜೀವ ಅಂಶವನ್ನು ಕುರಿತು ಪ್ರಾರ್ಥಿಸಿದ್ದಲ್ಲಿ ನಿಮ್ಮ ಪ್ರಾರ್ಥನೆಯು ನಿರರ್ಥಕವೇ ಸರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 5/141–43** **– ಶ್ರೀಮಾತೆ**

# ಶ್ರೀ ಅರವಿಂದೋಪನಿಷತ್ತು

**– ಪುಟ್ಟು ಕುಲಕರ್ಣಿ**

ಶ್ರೀ ಅರವಿಂದರ ಕೃತಿಗಳೆಲ್ಲವೂ ಆಂಗ್ಲ ಭಾಷೆಯಲ್ಲಿಯೇ ಇವೆ ಎನ್ನುವದು ಹೇಗೆ ಚಿರಪರಿಚಿತವೋ, ಅದೇ ರೀತಿ ಅವರು ಸಂಸ್ಕೃತದಲ್ಲಿಯೂ ಕೆಲವು ಕೃತಿಗಳನ್ನು ರಚಿಸಿದ್ದಾರೆ. 'ಭವಾನಿ ಭಾರತೀ', 'ತಾಂತ್ರಿಕ ಸಿದ್ಧಿ ಪ್ರಕರಣಂ' ಮತ್ತು 'ಶ್ರೀ ಅರವಿಂದೋಪನಿಷತ್' ಲಭ್ಯ ಕೃತಿಗಳು. ಶ್ರೀ ಅರವಿಂದರು 1910–14 ರ ಅವಧಿಯಲ್ಲಿ ಪಾಂಡಿಚೇರಿಯಲ್ಲಿ ಇರುವಾಗ ಈ 'ಉಪನಿಷತ್ತು' ರಚಿತಗೊಂಡಿದೆ. ಇದು ಪ್ರಥಮ ಬಾರಿಗೆ ಪ್ರಕಾಶನಗೊಂಡದ್ದು ಡಿಸೆಂಬರ 1978 ರಲ್ಲಿ, ಇಲ್ಲಿ ಶ್ರೀ ಜಗನ್ನಾಥ ವೇದಾಲಂಕಾರರ ಆಂಗ್ಲ ಭಾಷಾನುವಾದ ಜೊತೆಗೆ ಪ್ರಕಾಶಿತ–ಗೊಂಡಿರುತ್ತದೆ.

ಶ್ರೀ ಅರವಿಂದರು ನೇರವಾಗಿ ಈ ಕೃತಿಗೆ ಯಾವುದೇ ಶೀರ್ಷಿಕೆಯನ್ನೂ ಕೊಟ್ಟಿರಲಿಲ್ಲ. ಆದರೆ ಈ ಕೃತಿಯ ಪುಸ್ತಕ ರೂಪದ ಪ್ರಕಟಣೆಯ ಸಮಯದಲ್ಲಿ, ಇದಕ್ಕೊಂದು ಸೂಕ್ತ ಶೀರ್ಷಿಕೆಯನ್ನು ಯೋಜಿಸಿ "ಶ್ರೀ ಅರವಿಂದೋಪನಿಷತ್ತು" ಎಂದು ಇದರ 'ಅನ್ವಯ' ಮತ್ತು 'ಭಾವಾರ್ಥ'ವನ್ನು ರೂಪಿಸಿ, ಈ ಕೃತಿಯಲ್ಲಿ ಸಂಯೋಜಿಸಿದ ಸಂಪಾದಕರು ನಿರ್ಣಯಿಸಿದ್ದಾರೆ.

ಈ ಉಪನಿಷತ್ತು ಶ್ರೀ ಅರವಿಂದರ ಅಭಿವ್ಯಕ್ತಿಗಳ ಸಾರಸರ್ವಸ್ವವಾಗಿದೆ. ಶ್ರೀ ಅರವಿಂದರ ಪ್ರಕಾರ 'ಈ ಜಗತ್ತು ಮಾಯೆ(ಮಿಥ್ಯಾ) ಅಲ್ಲ. ಈ ಜಗತ್ತು ಕೇವಲ ಕಲ್ಪನಾ(ಭ್ರಮೆಯೂ) ಅಲ್ಲ. ಇದು ಬ್ರಹ್ಮ ಸ್ವರೂಪದಂತೆಯೇ ಸತ್ಯವಾಗಿದೆ.

ತದನಂತರದಲ್ಲಿ ಈ ಉಪನಿಷತ್ತನ್ನು ಆಧುನಿಕ ತಂತ್ರ ಜ್ಞಾನದ ಡಿಜಟಲೀಕರಣದ ಸಮಯದಲ್ಲಿ ಅಂದರೆ 2016 ರಲ್ಲಿ ಶ್ರೀ ಆಂಗ್ಲ ಭಾಷೆಯಿಂದ ಇಟಾಲಿಯನ್ ಭಾಷೆಗೆ ತರ್ಜುಮೆಗೊಂಡದ್ದನ್ನು ಶ್ರೀ ಆನಂದಮಯ ಅವರು, ಮತ್ತು ಸಂಸ್ಕೃತ ಭಾಷೆಯ ಕರಡಚ್ಚು ತಿದ್ದುಪಡಿಯನ್ನು ಮಾಡಿದ ಸರ್ಗಿಯೋ ಫೆಡ್ರಿಗೋ, ಹಾಗು ಮಣಿಪದ್ಮ ವೇಣುಪುರಿಯವರು ಸಂಸ್ಕೃತ ಭಾಷೆಯ ಪ್ರತಿಯ ಕರಡಚ್ಚು ತಿದ್ದುಪಡಿಯನ್ನು ವಹಿಸಿಕೊಂಡಿದ್ದರು.

ಇದೊಂದು ಅತ್ಯಂತ ಚಿಕ್ಕ ಉಪನಿಷತ್ ಆಗಿದೆ. ಇಲ್ಲಿ ಇರುವದು ಕೇವಲ 27 ಸಾಲುಗಳು ಮಾತ್ರ. ಈ ಇಪ್ಪತ್ತೇಳು ಸಾಲುಗಳು ಸಂಕೇತಿಸುತ್ತಿರುವದು ಏನನ್ನು ಎನ್ನುವದನ್ನು ಅಧ್ಯಯನ ಮೂಲಕವೇ ಅರಿತುಕೊಳ್ಳಬೇಕಿದೆ. ಅವರು ಪೂರ್ಣ ಯೋಗದ ವಿಷಯದಲ್ಲಿ ಅಭಿವ್ಯಕ್ತಿಸಿರುವ 'ಸಪ್ತ ಚತುಷ್ಟಯ', ಸಾವಿತ್ರಿಯಲ್ಲಿ ಅಭಿವ್ಯಕ್ತಿಸಿರುವ 'ಹನ್ನೆರಡು ಕ್ಯಾಂಟೋ', ಯೋಗ ಸಮನ್ವಯದ' ಚತುರ್–ಯೋಗದ'ದ ಮೂಲಕ 'ಪೂರ್ಣ' ಯೋಗದ ಸಾಕಾರದ ಕುರಿತು ತುಂಬ ಅಧ್ಯಯನದ ಅವಶ್ಯಕತೆ ಇದೆ. ಶ್ರೀ ಅರವಿಂದರ ಅಭಿಪ್ರಾಯದಲ್ಲಿಯೇ, ವೇದಾಂತದ ಬಗೆಗೆ ನಮ್ಮಲ್ಲಿ ಆಳವಾಗಿ ಬೇರೂರಿರುವ ಪರಿಕಲ್ಪನೆ ಎಂದರೆ, ಈ ವೇದಾಂತವೆಲ್ಲವೂ ಎಲ್ಲಿಯೋ ಒಂದು ಕಡೆ ಊರ್ಧ್ವದಲ್ಲಿ ಅಸ್ತಿತ್ವದಲ್ಲಿದೆ, ಅದನ್ನು ನಾವು ಶೋಧಿಸಿ ಕಂಡುಕೊಳ್ಳಬೇಕಿದೆ. ಇದು ನಮ್ಮ ಅನುಭವಕ್ಕಾದರೂ ಲಭ್ಯವಾಗಬಹುದು ಅಥವಾ ಸ್ವಯಂ–ಸಾಕ್ಷಾತ್ಕಾರದಿಂದಲಾದರೂ ಗೋಚರಗೊಳ್ಳಬಹುದು.

ಈ ಹಿನ್ನೆಲೆಯಲ್ಲಿ 'ಶ್ರೀ ಅರವಿಂದರ ಉಪನಿಷತ್' ಪ್ರವೇಶಿಸುವ ಪ್ರಯತ್ನ ಇಲ್ಲಿದೆ. ಈ ಉಪನಿಷತ್ ಪ್ರಕಾರ, ಜಗತ್ತು ಮಾಯೆಯಲ್ಲ; ಮಿಥ್ಯೆಯಲ್ಲ; ಸ್ವಪ್ನವಲ್ಲ; ಭ್ರಮೆಯೂ ಅಲ್ಲ. 'ಬ್ರಹ್ಮ ಸತ್ಯ'ವಾಗಿದೆ, ಹೀಗಾಗಿ 'ಜಗತ್ತು' ಬ್ರಹ್ಮ ಸೃಷ್ಟಿಯೇ ಆಗಿರುವದರಿಂದ ಅದು 'ಮಿಥ್ಯವಾಗಿರಲು' ಸಾಧ್ಯವಿಲ್ಲ. ಭವ ಬದುಕಿನ ಜಂಜಡದಲ್ಲಿ ಸಿಲುಕಿಕೊಂಡ ಮಾನವನ ಚಿತ್ತವು ಅದನ್ನು ಗ್ರಹಿಸಲಾರದೇ ಉಳಿದಿದೆ. ಮಾನವನಿಗೆ ದೈವೀ ನೆಲೆಯ ಅನುಭವಗಳನ್ನು ಒದಗಿಸುವ ಮೂಲಕ ವಿಶ್ವ ಸತ್ಯದ ಅನುಭಾವವನ್ನು ಪಡೆಯುವ ಸಲುವಾಗಿಯೇ ಇರುವ ಈ ಜಗತ್ತು ಸತ್ಯವೇ ಆಗಿದೆ. ನಿರಾಕಾರವಾಗಿರುವ ಋತವು ಕೃಪೆಯಿಂದ ತನ್ನನ್ನು ಮತ್ತು ತನ್ನ ಸ್ವರೂಪವನ್ನು 'ಸಾರೂಪ್ಯ'ಗೊಳಿಸಿಕೊಂಡಾಗ ಆದ 'ಬ್ರಹ್ಮ ಸೃಷ್ಟಿಯೇ" ಈ ಜಗತ್ತು ಎನ್ನುವದನ್ನು ಶ್ರೀ ಅರವಿಂದರು ತಮ್ಮ ಉಪನಿಷತ್ತಿನಲ್ಲಿ ಕಂಡಿರಿಸಿದ್ದಾರೆ. ನಾವು ಯಾವುದನ್ನು 'ಜೀವ', 'ಅಸ್ತಿತ್ವವನ್ನು ಪಡೆದ ಆತ್ಮ' ಎಂದು ಅನುಭಾವಿಸುತ್ತಿದ್ದೇವೆಯೋ ಅದೆಲ್ಲವೂ 'ತೋಷಭರಿತ ದಿವ್ಯತ್ವವೇ" ವೇಷಾಂತರದಲ್ಲಿರುವ 'ಸತ್ಯ'ವಾಗಿದೆ. ಕಾಂತಿಪೂರ್ಣತೆಯಿಂದ ಮಿನುಗುತ್ತಿರುವ ಸ್ವಯಂಬ್ರಹ್ಮ ತೇಜವೇ ಜಗತ್–ಸ್ವರೂಪವಾಗಿದೆ.

ಯಾವಾಗ ಬ್ರಹ್ಮನು ಸ್ವಯಂತೇಜವಾಗಿ, ಸರ್ವಶಕ್ತನಾಗಿ, ಸರ್ವಾತ್ಮನಾಗಿ ರೂಹುಪಡೆದಿರುವನೋ, ಅವನೇ ಅಜ್ಞಾನದಲ್ಲಿ ಸಿಲುಕಿ, ಅಂಧಕಾರದಲ್ಲಿ ಬಳಲುವ

ಸ್ಥಿತಿಯನ್ನೂ ಅನುಭವಿಸುತ್ತಾನೆ. ಈ ರೀತಿ ಬಳಲುವ ಸ್ಥಿತಿ ನಿರ್ಮಾಣವಾಗುವದು 'ಜಗತ್ತಿ'ನಲ್ಲಿ. ಇದು ಶಾಶ್ವತವಾದುದಲ್ಲ, ಇದರಿಂದ ಮುಕ್ತನಾಗಿ ಮತ್ತೆ ಸ್ವಯಂಕಾಂತಿಯನ್ನು 'ಜಗತ್ತು' ಪಡೆದುಕೊಳ್ಳುವದು. ಎಲ್ಲಿವರೆಗೂ ನಾವು 'ಸಾಂತ' ಎಂದು ಭಾವಿಸುತ್ತಿರುತ್ತೇವೆಯೋ ಅಲ್ಲಿಯ ವರೆಗೂ ನಮಗೆ 'ಅನಂತ'ದ ಅರಿವಾಗುವದಿಲ್ಲ. ಈ ಸ್ಥಿತಿಯಿಂದಾಗಿಯೇ ನಾವು ದುಃಖವನ್ನು ಅನುಭವಿಸುತ್ತೇವೆ; ಅಶಕ್ತರಾಗುತ್ತೇವೆ; ಅಜ್ಞಾನದ ಸುಳಿಗೆ ಸಿಲುಕುತ್ತೇವೆ. ಈ ಅಜ್ಞಾನವೆನ್ನುವದೂ ಅಹಂಕಾರದಿಂದಲೇ ನಿರ್ಮಾಣಗೊಂಡಿದ್ದು ಎನ್ನುವದನ್ನು ಅರಿತುಕೊಳ್ಳಲು ಸಿದ್ಧವಿರುವದಿಲ್ಲ. 'ಸಾಂತ'ದ ಅಸ್ತಿತ್ವದ ಈ ತಾತ್ಕಾಲಿಕ ವಾಸ್ತವದ ಸತ್ಯದಿಂದ ಮುಕ್ತರಾಗಿ, ಅನಂತಾನಂತವಾಗಿರುವ 'ಬ್ರಹ್ಮ ಋತ'ವನ್ನು ದರ್ಶಿಸುವದು ಸರ್ವರಿಗೂ ಸಾಧ್ಯವಿದೆ ಎನ್ನುವ ಉದಾತ್ತವಾದ ಆಂತರ್ಯವನ್ನು ಈ 'ಶ್ರೀ ಅರವಿಂದೋಪನಿಷತ್' ಹೊಂದಿದೆ.

ಶ್ರೀ ಅರವಿಂದ ದರ್ಶನದ ಈ ಉಪನಿಷತ್ತಿನ ಸಾರಸರ್ವಸ್ವವೇ –

**ಬ್ರಹ್ಮ ಸತ್ಯಂ ಜಗತ್ ಸತ್ಯಂ ಸರ್ವ ಬ್ರಹ್ಮಮಯಂ ಜಗತ್**
**ಏಕಮೇವಾದ್ವಿತೀಯಂ ತಜ್ಜೀವೋ ಬ್ರಹ್ಮೈವ ನಾಪರಃ ॥**

ಮೂಲ ಪಾಠ –

**ಓಂ। ಏಕಮೇವಾದ್ವಿತೀಯಂ ಬ್ರಹ್ಮ ಸದಸದ್ರೂಪಂ ಸದಸದತೀತಂ ನಾನ್ಯತ್ ನಾನ್ಯತ್‌ಕಿಞ್ಚಿದಸ್ತಿ**
**ತ್ರಿಕಾಲಧೃತಂ ತ್ರಿಕಾಲಾತೀತಂ ವಾ ಸರ್ವಂತು ಖಲು ಬ್ರಹ್ಮೈಕಂ ಯತ್ಕಿಞ್ಚ ಜಗತ್ಯಾಮಣು ವಾ**
**ಮಹದೋದ್ದಾರಂ ವಾಣುದಾರಂ ವಾ ಬ್ರಹ್ಮೈವ ತದ್ ಬ್ರಹ್ಮೈವ ಜಗದಪಿ ಬ್ರಹ್ಮ ಸತ್ಯಂ ನ ಮಿಥ್ಯಾ।**

(ಸಶೇಷ)

## ಶ್ರೀ ಅರವಿಂದರ
## 'ಊರ್ವಶಿ'

**– ಅನು: ಶ್ರೀ ಕಿಶೋರಕುಮಾರ ಕಾಸಾರ (ಸಮಷ್ಟಿ), ಕಲಬುರ್ಗಿ**

### ಅಧ್ಯಾಯ 1

ಮರ್ತ್ಯವಿದು ಮತ್ತೆ ಮಾನುಷನ ಮರಳುವಿಕೆಗೆಂದಲ್ಲಿ ಮಾನಿಸುತ
ಮೌನದಿಂದಿರಲು
ದೈತ್ಯರೊಡನೆಯ ಧರ್ಮಯುದ್ಧದಿ ದಮನಗೈದವರನ್ನು ಧರಾಂಗನೆಯೆಡೆ
ಧೀರನಡೆಯಿಟ್ಟ
ಪುರೂರವಸ್ಸನು, ಪ್ರಕಾಶಮಾನವಿಹ ಪುಂಜವೊಂದು ನಿಧಾನದಿ
ನೇರವಿಳಿಯುವೊಲು
ಮರ್ತ್ಯಮನೋಮಯದ ಮಧ್ಯದಲಿ ಮಿನುಗುವ ಮೂಡು – ನಕ್ಷತ್ರದೊಲಾಗಿ
ನಡೆದು
ಭವ್ಯದಾ ಬಾನಂಗಳದಿಂ ಭವಿಸಿ ಭಾರವಿಹ ಭೌತಿಕದಿ ಬುವಿಯಂಗಳಕೆ
ಬಂದಿಳಿದನು.
ಇಳೆಗಿಳಿದ ಇಳಾತನಯನನು ಇಳಾನಿಲವದು ಇದಿರುಗೊಂಡಲ್ಲಿ ಇಳಿಸಿತ್ತು.
ಮರಳಿ ಮರ್ತ್ಯಕ್ಕಿಳಿದ ಮಾನುಷನನು ಮಂದಾನಿಲವದು ಮೂರುಬಾಗಿನವಿಟ್ಟು
ಮನ್ನಿಸಿತ್ತು.
ದಿವ್ಯತೆಯಾ ಧಾಮದಲಿ ಚರಿಸಿದ ಪಾದಗಳವು ಅಗ್ನಿಯಾಡಳಿತದ ಆವರಣದಿ
ಅಡಿಯಿಟ್ಟಿರಲು,
ಅನಂತಕಾಲದಿಂ ಅಲವತ್ತುಕೊಂಡ ಅವನೀತಲವದು
ಅಮರಪ್ರಾಂತ್ಯದಿಂದವರೋಹಿಸಿದ
ಆಗಮನಾರ್ಥಿಗೆ ನಿತ್ಯಹರಿದ್ವರ್ಣದ ಹಸಿರಸೀರೆಯುನುಟ್ಟ ಅಮ್ಮನೊಲಾಗಿ
ಆವರಿಸಿಕೊಂಡಿತ್ತು.
ಆಕಾಶಗಂಬಳಿಯ ಮೇಲೆಸೆದ ಅನಂತಕವಡೆಗಳವು ಅಳಿದು, ಕಾಳವಿಹ
ಕತ್ತಲರಾತ್ರಿಯದು ಕಳೆದು,
ಮೂಲೋಕಕೆ ಮಹಾಬೆಳಕನೀಯಲೆಂದು ಮುಂದಡಿಯಿಡುವ
ಮಹಾದೇವಿಯವಳು

ಪ್ರತ್ಯೂಷೆ, ಪರಂಜ್ಯೋತೆ, ಪರಂಧಾಮಸುತೆಯೆಂದಾಗಿ ಪ್ರತಿಷ್ಠಿತಳಿಹ
ಪ್ರಭಾವತಿಯವಳು

ಸೂರ್ಯಾಂಶೆ, ಸೂರ್ಯಕಾಂತೆ, ಸೂರ್ಯಾವರ್ತೆಯೆಂದಾಗಿ ಸುಪ್ರತಿಷ್ಠಳಿಹ
ಉಷಾದೇವಿಯವಳು
ಲೋಬಾನವ ಹಿಡಿದು ಲೋಕಲೋಕಂಗಳನು ಬೆಳಗುತ್ತ ಬುವಿಯೆಡೆಗೆ ಬಂದಿರಲು
ಸೃಜನನಿದ್ರೆಯೊಳಿಹ ಸಿರಿಲೋಕವಿದು ಸಾವರಿಸಿಕೊಂಡೆದ್ದು ಸಾಮರಸ್ಯದಿ
ಸುತ್ತುಹಾಕಿತ್ತು.
ಅರುಣಸಾರಥ್ಯವಿಹ ಸಪ್ತಾಶ್ವನಿಯುಕ್ತ ಏಕಚಕ್ರರಥದಿ ಯಾತ್ರೆ ಹೊರಡುವ
ಸವಿತೃಸೂರ್ಯನ
ಕೆಂಡದುಂಡೆಯದು ಕತ್ತಲೆಯೆಂಬ ಗುಡಿಚಾಪೆಯ ಸುತ್ತುತ ಮೇಲೆರಿತ್ತು,
ಮೂಡಣದಲ್ಲಿದಿಸಿತ್ತು.
ಪೂರ್ವದಿಶೆಯದು ಅರುಣಾರುಣ ರೇಷ್ಮೆಯುಡುಪಿನ ಸುಂದರಿಯೊಲಾಗಿ
ಕಂಡಿರಲು,
ಪರಂಧಾಮದಿಂದಿಳಿದವನ ಪುಣ್ಯಯಾತ್ರೆಯದು ಹಿಮಾದ್ರಿಗಿರಿಯ
ಉತ್ತುಂಗಶೃಂಗದಲಿ ಪೂರ್ಣಗೊಂಡಿತ್ತು.
ನೀಲನಿರಾಳವಿಹ ಪರ್ವತಾಗ್ರದ ಉಗ್ರನೆಲೆಯಲ್ಲೇ ನೆಲೆನಿಲ್ಲದೆ ನೃಪನವ ನೇರ
ಘಟ್ಟವನಿಳಿದು
ಇಬ್ಬನಿಯ ಮಳೆಯಿಳಿವ ಮಟ್ಟಸ ಶಿಖರದ ಸಮತಲವ ತಲುಪಿ ತಂಗಿದನು.
ಅವನ ಉತ್ತರಕೆ ಎತ್ತರೆತ್ತರಕೆ ಬೆಳೆದುನಿಂತಿಹ ದೈತ್ಯಹಿಮರಾಶಿಯದು
ಆಕಾಶಗಹ್ವರದೆಡೆಗೇರಿ
ಮುಗಿಲುಮಂಡಲಗಳನೇ ಹೊರಗೆಳೆವಂತೆ ನಿರ್ವಯಲದ ನಿರಾಳದೆಡೆ ಚಾಚಿಹವು.
ಸೌಮ್ಯನಿತಾಂತವಿಹಾ ನಿಲಯದಲಿ ನಿಂತ ಭೂಪಾಲನವ ಭೂತ–ಬಂಗಲೆಯ
ಕದವನೊಮ್ಮೆ ತಟ್ಟಿ ತೆರೆದನು.
ಮರ್ತ್ಯದಿಂ ಮನೋಮಯದೊರೆಗಿನ ಸಕಲಸೃಷ್ಟಿಯಿದು ದೈತ್ಯಾದಿತ್ಯರ
ಯುದ್ಧರಂಗವಾಗಿರಲು,
ರಜನಿಗರ್ಭವನೇ ರಾಜಧಾನಿಯಾಗಿಸಿಕೊಂಡು ಕತ್ತಲೆಯಲೇ ಬೆತ್ತಲೆ ತಿರುಗುವ
ನಿಶೆಯೊಡೆಯರೊಂದೆಡೆಯಿಂದಲೂ

ಪರಂಜ್ಯೋತಿಯ ಪ್ರಾಕಾರದೊಳಗೆ ಅನಿಮೇಶರಾಗಿ ಅಂಡಲೆಯುವ
ಉಷರ್ಬುಧರಿನ್ನೊಂದೆಡೆಯಿಂದಲೂ
ಅತ್ತಲಿಂದಿತ್ತಿತ್ತಲಾಗಿ ಇತ್ತಲಿಂದತ್ತತ್ತಲಾಗಿ ಒತ್ತೊತ್ತುತ ಬಂದು ಬುವಿಯನು
ಮೆತ್ತಗಾಗಿಸಿರಲು
ಕೃಷ್ಣ–ಶುಕ್ಲವಾಂತು ಕುಲಗಳೆರಡು ಕಾಲ್ಗೆದರಿ ಕುಸ್ತಿಯಂಗಳಕಿಳಿದು
ಮಲ್ಲಗಾವಹಕೆ ಮುನ್ನೊಡಿತ್ತು.
ಅಪ್ರಕೇತದಿಂದ ಅಸುರಗಣವದು ಮೇಲೇರಿ, ಅಪರಾರ್ಧದಂಚಿನಲಿಹ
ಸುರಗಣವದು ಕೆಳಗಿಣುಕಿ
ಮಧ್ಯಂತರದ ಮೋಡಿಯೊಲಾಗಿ ಮಡಗಿರುವ ಮಧ್ಯಲೋಕವನು
ಯುದ್ಧರಂಗವನ್ನಾಗಿಸಿಹರು.
ಬೆಳಕನೆಲ್ಲ ಬರಿದಾಗಿಸಿ ಬೂದಿಯೊಳಗದನು ಬೆರೆಸಲೆಂದು ಭೂತಗಣವದು
ಕುಣಿದಿರಲು,
ಕತ್ತಲೆಯ ಕಾರಸ್ಥಾನದಲಿಹ ಕಟ್ಟಡವಿಗಳನು ಕೆಡವಿ ಕಾಲಡಿ ಕುಣಿಸಲೆಂದಲ್ಲಿ
ನಿಲಿಂಪರು ನಿಶ್ಚಯಿಸಿರಲು,
ದಿವ್ಯತೆಯ ಧರ್ಮವನು, ದೈತ್ಯತೆಯ ಧೈರ್ಯವನು ಧರಿಸಿನಿಂದ ಧರಾಂಗನಾ
ಧಾರಕರಿವರು
ಸುರಾಸುರ ಮಿಶ್ರಪಿಂಡವಾಗುತೊಗೆತಂದ ಮರ್ತ್ಯಮಾನವರಿವರು ಮಣ್ಣೊಳು
ಮಣ್ಣಾಗುತಿಹರು.
ಅನಿತರೊಳು ಅನಾದಿಲೋಕದೆಡೆಯಿಂದ ಬಂದ ಆದಿತ್ಯವಾಣಿಯೊಲು ನಡೆದ
ಇಲಾಪುತ್ರನವ
ದೇವಾಸುರ ಸಂಗ್ರಾಮದಿ ಸಂಘರ್ಷಗೈದಲ್ಲಿ ದಾನವರನೆಲ್ಲ ದಂಡಿಸಿ
ದಿಕ್ಕುಪಾಲಾಗಿಸಿಹನು.
ಇಂದ್ರನಿಗಿಹನಿವ ಪ್ರತೀಂದ್ರನೆಂದೆನಿಸಿರಲು ಪಣಿಗಳೆಲ್ಲ ಪರ್ವತಗರ್ಭದೊಳಗಿಳಿದು
ಮರೆಯಾದರು.
ದಿತಿಯ ಧೂರ್ತಪುತ್ರರುಗಳೆಲ್ಲ ದಿಗಂತದೆಡೆಗೋಡಿ ದೂರವಾದರು. ಮತ್ತೆ
ಮೂಡದಾದರು.
ಅಲ್ಲಿಯವರೆಗೂ ಸುಮ್ಮನಿಹವನ ಸ್ಮೃತಿಪಟಲವದು ತೆರೆದಿತ್ತು. ತೀಕ್ಷ್ಮದರ್ಶನಗಳವಗೆ
ತೋರಿತ್ತು.

ಆಹವಮಲ್ಲನವ ರಣಾಂಗಣದಿ ಮಾರ್ಮಲೆತ ಮಹಾಪುಟಗಳೆಲ್ಲ ಮತ್ತೆ
ಮುನ್ನೂಕಿರಲು
ಕಂಗಳಲಿ ಭಟರ ಭವ್ಯಾಕಾರಗಳ ಸರಣಿಚಿತ್ರವದು ಬಿತ್ತರಿಸಿತ್ತು,
ಕಿವಿಯೊಳಗೆ ತುತ್ತೂರಿಯ ನಾದಘೋಷವನು ಮೊಳಗಿಸಿತ್ತು.
ಹೊನ್ನಕಾಯರುಗಳನು ಹೊತ್ತ ಹರ್ಯಶ್ವದ ಹೇಷಾರವವ ಹೊರಡಿಸಿತ್ತು.
ಮನೋವೇಗದಿ ಚರಿಸುವ ಸ್ವರ್ಣರಥಚಕ್ರಗಳ ಚಕ್ರವಿಕ್ರಮದ ಚಲನೆಯನಲ್ಲಿ
ಚಿತ್ರೈಸಿತ್ತು.
ದೈತ್ಯರ ತಂತ್ರಾಸ್ತ್ರಗಳವು ತಾರಕಕ್ಕೇರಿರಲು, ಮಾನಸರ ಮಂತ್ರಾಸ್ತಗಳವು
ಮಾರಕವಾಗಿರಲು,
ವಿಶ್ವನೀಲಿಮದ ಅನಂತಾವಕಾಶವದು ಬೆಳಕು–ಕತ್ತಲೆಯ ಬಣ್ಣದಾಟಲದಲಿ
ಬೆವೆತು ಹೋಗಿತ್ತು.
ರಣರಂಗದಲಿ ರಣಹಲಗೆಗಳ ಬಡಿದಿರಲು, ರಣೋತ್ಸಾಹದಿ ರಣಗರ್ಜನೆಯು
ರಂಗಿಸಿರಲು,
ಹಾಹಾ ಹೂಹೂ ಹಿಮ್ಮೇಳದಲಿ ಉರುಳಿಬಿದ್ದ ಸುರರ ಶಿರಗಳು, ದೈತ್ಯರ
ದೇಹಗಳು
ಧರ್ಮಯುದ್ಧವಿದು ದಂಗೆದಾಂಗುಡಿಯೆಂಬುದನು ತೋರಿಹವು.
ಸಾಧನೆಯಿದಲ್ಲವೆಂಬುದನು ಸಾರಿಹವು.
ಹಿಮಾರುಣವಿಹ ವಜ್ರಶೃಂಗದಿ ಒಬ್ಬೊಂಟಿಗನಾಗಿ ನಿಂತ ನೃಪನಾಯಕನ
ಪ್ರಜ್ಞೆಯದು ಪುನರುಚ್ಚರಿಸಿತ್ತು.
ತಾನಿಂತ ಶ್ವೇತವಲಯವನೊಮ್ಮೆ ಕಾಣುತ ಧ್ಯಾನದಾಳದಲಿ ಮುಳುಮುಳುಂಗಿರಲು
ಸ್ವಾತಿಮಳೆಹನಿಯೊಂದಿಳಿದು ಮಸ್ತಿಷ್ಕಮಧುಕೋಶದ ಸಹಸ್ರದಲಕಮಲವನು
ತುಂಬ ತುಂಬಿಸಿತ್ತು.
ಪಾದವಿರಲು ಪಾರ್ಥಿವದಿ ಅಪಾದಮಸ್ತಕನಾಗಿ ನಿಂದವನ ಆತ್ಮವದು
ಅಲೋಕಾಕಾಶದೆಡೆಗೇರಿತ್ತು.
ಪರ್ವತಾವಳಿಗಳಲಿ ಪವಿತ್ರತಮವಿಹ ಮೌನಾನಂದದಲಿ ಮಾರ್ಮಲೆದಿತ್ತು. ಮತ್ತೆ
ಮುನ್ನೋಡಿತ್ತು
ಮಾತಾಯಿಯ ಮಡಿಲೇರಿದ ಮುದ್ದುಗುವರನಿಗೆ ಮಲೆಗಳೆಲ್ಲ ಮಾತೆಯ
ಮೊಲೆಗಳಾಗಿರಲು,

ಹೊಳೆಯಲಿ ತೆಳ್ಳತೆಳ್ಳಗಾಗಿ ತಳ್ಳಂಕವಿಡುತ ಬಂದ ಬೆಳ್ಳಿಬುರುಗೆಲ್ಲ
ಮಧುಕ್ಷೀರಮಯದ ಮುದವನಿತ್ತಿಹವು.
ಮೌನಕನ್ನಿಕೆಯಾ ಮಹಾವಿಸ್ತಾರದೊಳಗಲ್ಲಿ ಮಾತೆಲ್ಲ ಮುಗಿದಿರಲು,
ಮಹಾಕಾರಣದ್ವೈತ್ಯದಂಚಿನಲಿಹ
ಚಿತ್‌ನಭೋಮಂಡಲದೊಳಗಿಂದೊಗೆತಂದ ಚಿರಂತನವಿಹ ಚಿಂತನೆಯೊಂದನಲ್ಲಿ
ಚಿತ್ರಿಸಿರಲು,
ಮೂಡಣದಲ್ಲುದಿಸುವ ಮಹಾಬೆಳಗಿನ ದರ್ಶನವನು ದಕ್ಕಿಸಿಕೊಳಲೆಂದಲ್ಲಿ
ದಿಟ್ಟಿಸಿದನು.
ಅಲ್ಲಿ ಪರ್ವತದಂಚಿನಲಿ, ಮೋಡಗಳ ಮನೆಯಿಳಿದು, ದಿಗಂತದ
ದಿಡ್ಡಿಬಾಗಿಲಿನಿಂದೇರಿ,
ವಾಗ್ದೇವಿಯೊಳಗಿಂದ ವಿದ್ಯಾ ವಾಗೀಶ್ವರಿಯಾಗುತ ಒಗಮಿಗುವ ವಾಕ್ಕು
ಕವಿಯ ಕಲ್ಪನೆಯೊಳು ಕಸೂತಿಯಾಗುತ ಕಲೆತು ಕಾವ್ಯವಾಗುವೊಲು,
ಭಾಸ್ಕರಮಂಡಲದಿಂದಿಳಿದ ಭಾಸ್ವರ ವಿಹಂಗವದು ಜ್ಯೋತಿರೂಪವ ತಳೆದು
ನಾಲಗೆಯ ಮೇಲೆ ನಕ್ಷತ್ರಬಿಂದುಮಾಲೆಯ ಮೂಡಿಸಿ ಮರೆಯಾಗಿರಲು,
ತೊದಲ್ನುಡಿವ ತನಯನೋರ್ವ ತಪ್ಪುತಡಿಗಳನೆಲ್ಲ ತರಿದೊಗೆದು,
ವಾಗ್‌ವಿಭವ–ವಾಗ್‌ವಿಲಾಸವನರಿತ ವಾಗ್ಮಿಯೊಲು ನೆರೆದ ನೂರಾಳು ನೆಂಟರನು
ಹೆಡೆನಾಗರದೊಲು ತಲೆದೂಗುತ ಮೈಮರೆವಂತೆ ಮಾತನಾಡುವೊಲು,
ಬೂದಿನರೆಗೂದಲಿನ ಭೂತವಾಗುತೊರಗಿದ ಮರ್ತ್ಯವನು ಮುಚ್ಚಿದ
ಮಾಯೆಯ ಮುಸುಕದು
ಕಳೆದು, ಕಡಲಾಣಿ ಮುತ್ತುಗಳ ಮಿಂಚುಗೊಂಚಲದು ಮೈಗರೆವಂತೆ
ಮಿನುಗಿತ್ತದು ಮೂಡಣ.
ದೇವಕಣವದು ಕಣ್ದೆರೆವ ಕಾಲದಲಿ, ಕವಿದ ಕತ್ತಲೆಲ್ಲ ಕರಗಿ ಭೌತಿಕವದು
ಬಣ್ಣವಡೆವ ಹೊತ್ತಿನಲಿ,
ಪ್ರಕಾಶದ ಪೂರ್ಣಗರ್ಭದೊಳಗಿಂದ ಸೆಳೆಮಿಂಚಾಡುತ ಬಂದೊಂದು
ಬೆಳಕುಮಾಲೆಯದು
ಮೂಡಣದಲಿ ಮೂಡಿಸಿದ ಮರ್ತ್ಯದ ಮೊದಲ ಮಹಾಬೆಳಗನಲ್ಲಿ ನೆನಪಿಸಿತ್ತು.
ಅದಿಮಪ್ರಕೃತಿಯ ಆದಿಮಾಧುರ್ಯದ ರಸಮಯಸಮಯವನಲ್ಲಿ ಸುಳಿದಾಡಿಸಿತ್ತು.
ಸ್ವರ್ಗತರಂಗಿಣಿಯೊಳು ಮಜ್ಜನಗೈದು ಸಜ್ಜನದ ಒಜ್ಜೆ ಹೊರುತ
ಹೊನ್ನಲೋಕದಿಂದಿಳಿದ

ಜೀವನ ಜಾತ್ರೆಯದು ಜಗದ ಜಂಜಡವನೆಲ್ಲ ಜಾಡಿಸುತೋಡಿಸಿತ್ತು.
ಜಾಗೃತಿಯನರಳಿಸಿತ್ತು.
ಮೆಲ್ಲಮೆಲ್ಲನೆ ಮುಂದಡಿಯಿಡುವ ಮದುವಣಗಿತ್ತಿಯೊಲು ಮೊಗದೋರದೆ
ಮೂಡಣದಿ
ಮೂಡಲೆಂದು ಮುನ್ನೂಕಿದ ಮಹಾದ್ಭುತವನಲ್ಲಿ ಮಿಟುಕಿಸದ ಕಂಗಳಿಂದವನು
ಕಂಡಿರಲು,
ಆ ಖೇಖಮಧ್ಯದೊಡಲಿಂದ, ವಿಶ್ವನೀಲಿಮದಡಿಯಿಂದ ನಿಗೂಢತೆಯೇ
ಮೈವೆತ್ತು ಬಂದಂತೆ
ಕಾರಣದೇಹದ ಪರಿಪೂರ್ಣ ಪುತ್ಥಳಿಯಾಗುತೊಗೆತಂದಳವಳು ಗೋಮಂತೆ,
ಶ್ರೀಮಂತೆ.
ಸೃಷ್ಟಿಯಾರಭ್ಯ ಸಕಲಜಂತುಗಳ ಜೀವನ್ಮಾತೆಯಾದ ಉಷೆ! ಶ್ರೀಮನದ
ಸ್ವರ್ಣೀಮಶಾಂತೆ.
ಮರ್ತ್ಯಪುತ್ರರಿಗೆಂದು ಮೊಲೆಹಾಲನಿತ್ತ ಅಮೃತಕುಂಭಗಳ ಸುಂದರಿ.
ವಿವಸ್ವತಕಾಂತೆ.
ಜಗದ ಜೀವಜಾತಗಳಿಗೆಲ್ಲ ಮಾತಾಯಿಯಾದರೂ ಚಿರಂತನವಾಗುಳಿವ
ಚಿನ್ಮಯದ ಕನ್ಯೆಯವಳು.
ಮೌನದಲೇ ತ್ರಿಕಾಲ–ತ್ರಿಲೋಕಗಳನೆಲ್ಲ ಸಂಚರಿಸುವ ಸನಾತನ
ಮುತ್ತೈದೆಯಾದರೂ, ನಿತ್ಯನೂತನಳು.
ಸುವರ್ಣಗೌರಿಯಾಗಿ ಸವಿತೃಮಂಡಲದ ಸೂಡಿಯನು ಪಿಡಿದು
ಯುಗಯುಗಮಾಲೆಗಳನೇ ದಾಟಿಸುವಳು.
ಸೂರ್ಯಸೋದರಿಯಾಗಿ, ಸೂನೃತದ ಭಾಸ್ವತಿನೇತ್ರಿಯಾಗಿ ಸಪ್ತರಶ್ಮಿಗಳನೇ
ಸೃಜಿಸುವಳು.
ಸುಮತಿ–ಗೋಮತಿಯಾಗಿ, ಋತಜ್ಯೋತಿ–ಋತಾವರಿಯಾಗಿ ಸಪ್ತಚೇತನಗಳನೆಲ್ಲ
ಸಮನ್ವಯಿಸುವಳು.
ಲಲಾಟದಿ ಬಾಲಭಾಸ್ಕರ ತಿಲಕವನಿಟ್ಟು, ಮೊಗದೊಳಗೆ ಮಲ್ಲಿಗೆಯ
ಮಂದಹಾಸವನೇ ತೊಟ್ಟು,
ಪರಮಪೂರುಷನನೇ ಪತಿಯಾಗಿ ಪಡೆಯಲೆಂದು ಹೊಂದಳಿಗೆಯ ಹಿಡಿದು
ಬರುವ ನವವಧುವಿನಂತೆ ಬಂದಳವಳು,

ಬಂಗಾರದ ಮುಚ್ಚಳವನೇ ತೆರೆದು ತೋರಿದಳವಳು, ಹಿರಣ್ಮಯದ
ಹೊನ್ನಕಾಂತಿಯನೇ ಹರಿಸಿದಳವಳು.
ಅವಳ ವಿಶ್ವಾತ್ಮಸಂಸ್ಥಿತ ವಿಶ್ವಹೃದಯವದು ಪಲ್ಲವಿಸಿದ ಪುಷ್ಪಗಳ
ಪರಂಧಾಮವಾಗಿತ್ತು.
ತಲೆಮೇಲೆ ತೂಗುತಿಹ ಸೂರ್ಯರಶ್ಮಿಗಳವು ಹೊಂಗೂದಲಾಗುತ್ತ
ಭುಜಶಿರಸ್ಸಿನ ಬದಿಗೆ ನೀಳ್ದಿರಲು,
ಮುಂಜಾನೆಯ ಮರುತರು ಮಾತಾಯಿಗೆಂದು ತೂಗಿಸಿದ ತಂಬೆಲರವಳ
ಸ್ವರ್ಣಕೇಶಗಳ ಸುಳಿದಾಡಿಸಿತ್ತು.
ಅವಳ ಹಿಮ್ಮೇಳದಿ ಹಾಡಿ ನಲಿದಾಡುತ್ತಿರ್ಪರವರು ನಿಲಿಂಪರ ನಾಕದೆಡೆಯಿಂದ
ಬಂದ ಭವಕನ್ಯೆಯರು.
ಮಹಾ ಪ್ರ–ಸೃಷ್ಠಿಯ ಪ್ರಾರಂಭದಲಿ ಭೂತಸರ್ಗದ ಶಕ್ತಿಯಿರುವ
ತನ್ಮಾತ್ರಗಳಲೊಂದಾಗುತೊಗೆತಂದ
ಅಪಸ್ಸಿನಾಂತರ್ಯದೊಳಗಿಂದ ಉದ್ಬುದ್ಧರಾಗುತ ಉದಿಸಿಬಂದರವರು
ಅಪ್ಸರಕನ್ಯೆಯರು.
ಸ್ಥೂಲ–ಸೂಕ್ಷ್ಮಗಳ ವಿಕಸನದ ಕುರಿತೋದುವ ಪ್ರಾಕ್ತನವಿಹ
ಪುರಾಣಕಥೆಯೊಂದು ಪ್ರಸಿದ್ಧವಿಹುದು:
ಯುಗಚತುಷ್ಟಯದ ಕಲ್ಪಾಂತ್ಯದಲ್ಲೊಮ್ಮೆ ಸೃಷ್ಠಿಯ ಸರ್ವಾಧಿಕಾರದ
ಸಮಸ್ಯೆಯೊಂದು ಸೆಟೆದುನಿಂತಿತ್ತು.
ಅನಂತಕೂಟದಡಿಯ ಅಮೃತೋದ್ಭವದ ಪಾಲುದಾರಿಕೆಯ ಪ್ರಶ್ನೆಯೊಂದು
ಪುನರ್ಭವಿಸಿತ್ತು.
ಕಾಲೋಧದಿಯೇ ಕೇಂದ್ರವಾಗಿರಲು ಮಂದಾರಪರ್ವತವನೇ
ಮೂಲಮಧ್ಯಮಕಾರಿಕೆಯನಾಗಿಸಿ
ವಾಸುಕಿಯಾಂತು ರಜ್ಜುವಿರಲು ದೇವಾಸುರಸಂಘವದು ಕಡೆದಿರಲು
ಕಡುಗೋಲೆಂಬ ಕುಂಡಲಿನಿಯನು,
ಕಾಲಸಾಗರದ ಕೋಲಾಹಲದೊಳಗಿಂದ ಹಾಲಾಹಲವೇ ಹರಿದುಬಂದಿತ್ತು.
ಮತ್ತೆ ಮುಂಬರಿದಿತ್ತು.
ಕೇಂದ್ರದೊಳದಿಂದ ಕೋಟಿನಕ್ಷತ್ರಗಳು ಕಣ್ಬಿಡುವಂತೆ ಆರ್ಣವದಾಳದೊಳದಿಂದ
ಅಣಿಮುತ್ತುಗಳ ಆಗಮನವಾಗಿತ್ತು.

ಅಪರಿಚಿತವಿಹಾ ಅನಂತದ್ರವ್ಯಗಳ ಅಟ್ಟಣಿಗೆಯೊಳಗಿಂದ 'ಅಪ್–ಸರ' ಕನ್ಯೆಯರ
ಅರುಣೋದಯವಾಗಿತ್ತು.
ಅಮರವಿಹ ಅನಂತೋಧದಿಯೊಳಗಿಂದ ಅವಿರ್ಭವಿಸಿ, ತಾರುಣ್ಯದ
ತೂಗುದೊಟ್ಟಿಲೊಳಗಿಂದ ತಲೆಯೆತ್ತಿ,
ಚಿರ–ಯೌವನದ ಚಿಂಗಾರಿಗಳಾದವರ ಆತ್ಮವದು ಅನವರತದಿ ಘೂರ್ಣಿಸುವ
ಪ್ರೇಮದ ಪಾರಾವಾರವಾಗಿತ್ತು.
ಸಮುದ್ರೋದಕದ ಫೇನದೊಲು ಪವಿತ್ರವಿಹ ಪ್ರಿಯವಾಣಿಯ ಪುನರುಣಿಸುವಾ
ಪ್ರೇಮಪುತ್ಥಳಿಗಳ
ಪಾದಯುಗ್ಮಲದಡಿಯಲಿ ತರಂಗಿಸುವ ತರಂಗಿಣಿಯರ ತೆರೆಗಳುಯ್ಯಾಲೆಯದು
ತಳ್ಳಂಕವಿಡಿದಿತ್ತು.
ಕಾರ್ಮಣನೆಲೆಗೆ ಕನಕಕಾಂತಿಯನಿತ್ತು, ಭೌತಿಕದ ಬುವಿಯನು
ಬಂಗಾರಮಯವಾಗಿಸುವ
ಅವರೊಂದು ಮೃದುಮಂದಹಾಸವದು ಮಡಿದು ಮಣ್ಣೊಳು ಮಲಗಲೆಂದು
ಮುನ್ನೋಡುವ
ಯುದ್ಧಗಾಯಾಳು ಯೋಧರ ಶ್ರಮವನೆಲ್ಲ ಸುಳ್ಳಾಗಿಸಿತ್ತು, ದೈತ್ಯರನು
ದಿಕ್ಕುಪಾಲಾಗಿಸಿದ ದೇವತೆಗಳ ದಣಿವಾರಿಸಿತ್ತು.
ಭೂಚರರಾಗಿ ಬಂಧುವಿನೊಳಗೆ ಬಣ್ಣಬಣ್ಣದ ಭಾವನೆಗಳ ಬಿತ್ತುತಲಿದ್ದ
ಭಾಮಿನಿಯರೆಡೆ ಬಿಡುಗಣ್ಣನಾಗಿ
ನೋಡಿರಲವರು ಖೇಚರರಾಗಿ ಖೇಖದೆಡೆಗೇರಿದರು. ಗೋಚರರಾಗಿ
ಗೋಲೋಕದೆಡೆ ಗಮಿಸಿದರು.
ಬಿಳಿಬಣ್ಣದ ಭೂತದೊಡಲಂತೆ ಬಿದ್ದುಕೊಂಡಿಹ ಹಿಮಾರಣ್ಯದ ಹಿತ್ತಲಿನಲಿ
ಬೆತ್ತಲಾಗುತ
ಭ್ರಮಿಸುತಿಹ ಬೂದಿನರೆಗೂದಲಿನ ಭವ್ಯಸೌಧಗಳೆಂಬ ಬಾನಂಗಳದ ಬಳಿಸಾರಿದರು.
ಗನ್ಧೋದಕವನೆಲ್ಲ ಗೋಳದೊಳು ಗೌಪ್ಯವಾಗಿರಿಸಿಕೊಂಡ ಗಂಧರ್ವರ
ನೆಲೆವೀಡಾದ ನೀರಸೌಧಗಳವು
ಚಿತ್ರರಥ–ವಿಶ್ವಾವಸುಗಳ ವಿಶ್ವನವರಂಗಮಂಟಪವಾಗಿತ್ತು. ಮರ್ತ್ಯಮಾನವರಿಗದು
ಮೇಘಮಂಡಲವಾಗಿತ್ತು.
ಥಳಥಳಿಸುವ ನೀಲಾಕಾಶದ ನೆಲೆಗಟ್ಟಿನಲಿ ನಿಂತು ನೋಡಿರಲದು,
ಮೋಡದೋಡೆಂಬ ಮಹಾರಣ್ಯವಾಗಿತ್ತು.

ಉತ್ತುಂಗಶೃಂಗದ ಉಪ್ಪರಿಗೆಯಲಿ ಉರುಹಾಕುತಿಹ ಉಣ್ಣೆಮೋಡಗಳೆಡೆಯಲ್ಲಿ
ಬೆಳ್ಳಬೆಳ್ಳನೆಯ ಬೆಳ್ಳಿಶಿಖರದ ಬಾನಂಗಳದಲಿ ಭವಿಸುತಿಹ
ಬೆಣ್ಣೆಮೋಡಗಳಡಿಯಲ್ಲಿ
ಭವಾದ್ರಿಕನ್ಯೆಯರಾಂತು ಬೆಳದಿಂಗಳ ಬಾಲೆಯರ ನಾಟ್ಯ–ನರ್ತನವದು ನಡೆದಿತ್ತು.
ಗಗನಗೋಚರಿಯರಾಂತು ಗೋಮಿನಿಯರ ಗಂಧರ್ವ ಗಾನದ
ಗೋಷ್ಠಿಯನೇರ್ಪಡಿಸಿತ್ತು.
ಕಾರ್ಮೋಡದ ಕತ್ತಲಿನಲಿ ಕಳೆದುಹೋದಂತಿರುವ ಕರಿಗೂದಲಿನ ಕಾಮಿನಿಯರ
ಕೇಶಬಂಧವನು
ಕುಚೋದ್ಯಕೆಂದು ಕಟ್‌ಬಿಚ್ಚಿದ ವಾಯುಮಂಡಲದ ವಕ್ತಾರರವರು ಭೋರೆಂದು
ಬೀಸುವ
ಸೂಸುಗಾಳಿಯಲಿ ಸುಂದರಿಯರ ಸುವರ್ಣಕೇಶವನಲ್ಲಿ ಸುಳಿದಾಡಿಸಿ
ಸುಮ್ಮನಾಗಿರಲು,
ದಿನಮಣಿ ದಿವ್ಯಾನನದ ದಾಮಿನಿಯರು 'ಪ್ರಾಣ'ಕಾಂತರ ಪ್ರೇಮಚುಂಬನದಿ
ನಾಚಿ 'ನೀರಾ'ಗಿಹರು.
ಬರಿಯ ಬಿಳಿಗಿರಿ–ಬೆಳ್ಳಿಮೋಡಗಳೆಂಬ ಬಾಂಧವರಿಂದ ನೀರಸವಾಗಿರುವ
ನೀಲಾಕಾಶದೊಡಲಲ್ಲಿ
ದೇವಕನ್ಯೆಯರವರು ದಾಪುಗಾಲಿಟ್ಟಿರಲು ಪರಮಾತ್ಮನ ಪಾದಸ್ಪರ್ಶದಿ
ಪುನೀತವಿಹ ಪರಂಧಾಮದೊಲು
ಶುಭ್ರಶ್ವೇತದ ಸಹಸ್ರಾಂಗಣವದು ಸ್ವರ್ಣಸಾಗರದಲಿ ಸುಳಿದಾಡಿತ್ತು,
ವರ್ಣದಾಗರದಲಿ ಒಂದಾಗಿತ್ತು.
ಬಾನಬಿತ್ತರದಲಿ, ಬಾನಿನೆತ್ತರದಲಿ ಬಣ್ಣದೋಕುಳಿಯಾಡಿರಲದು
ಭವ್ಯಬಾಂದಳವಾಗಿತ್ತು, ದಿವ್ಯದಂಗಳವಾಗಿತ್ತು.
ಕುಡಿಗಣ್ಣ ಕಾಂತೆಯರ ಕಂಗಳವು ಮುಗಿಯದ ಮುತ್ತು–ಮಾಣಿಕ್ಯಗಳ
ಮಹಾಸಾಗರವಾಗಿತ್ತು.
ಶಶಿಪೌರ್ಣಮಿಯ ಹಾಲುಬೆಳದಿಂಗಳ ರಾತ್ರಿಯಲಿ ಹುಚ್ಚೆದ್ದು ಕುಣಿವ
ಪ್ರೇಮದಾರ್ಣವವಾಗಿತ್ತು.
ನೀಹಾರಿಕೆಯ ನೀರಾಳದೊಡಲಿಂದಿಳಿದು ನೀಹಾರವೆಂಬ ನೀರಬಿಂದುವಿನ
ನೂರಾವರ್ತದಲಿ ನರ್ತಿಸುತಿಹ ನೀರೆಯರಾದ

ಮೇನಕಾ, ಮಿಶ್ರಕೇಶಿ, ಮಲ್ಲಿಕಾ, ರಂಭಾ, ನೀಲಭಾ, ಶೀಲಾ, ನಳಿನಿ, ಲಲಿತಾ, ಲಾವಣ್ಯ,
ತಿಲೋತ್ತಮೆಯರೆಂಬ ತೀರ್ಥನಾಮಗಳಿಹ ತರುಣಿಯರಾ ತುಂಬಿನೊಳಗಿಂದ
ತೋರಿಬಂದಿಹಳೋರ್ವ ತಾರೆ.

ಅವಳದೊಂದು ಪ್ರೇಮನೋಟಕೆ ಪುರೂರವಸ್ಸನ ಪರಾಕ್ರಮವೆಲ್ಲವಡಗಿತ್ತು.
ಪ್ರೇಮಭಯವೊಂದು ಪುಟಿದೆದ್ದಿತ್ತು.
ಕಡಲ್ಗಾರರ ಕೂಟವದು ದೂರ ಕ್ಷಿತಿಜದ ಕೆಳಗೆ ಮಧುರ ಸ್ವಪ್ನಗಳಾಗಿ ನಿದ್ರಿಸಿಹ
ನವಖಂಡಗಳನು,
ಲಕ್ಷದ್ವೀಪಾದಿ ಧಾತ್ರಿಗಳನು ಶೋಧಿಸಿ ಸಹಸ್ರಾರು ಸಾರ್ಥಮಂಡಲಗಳೊಡನೆ
ನಿಸ್ವಾರ್ಥಬಂಧವ ಬೆಸೆದು
ನೂರುನಡುಗಡ್ಡೆಗಳ ನಡುವೆ ನಂಟನು ನೇಯುತ, ನೀವು ನಮ್ಮವರೆಂಬ,
ನಾವು ನಿಮ್ಮವರೆಂಬ
ನಿಯತಿಯ ನೆಡಲೆಂದು ನೂರುಗೋಲಿನ ನೌಕೆಯ ನೀರಿಗಿಳಿಸಿ ನಡೆದಿರಲು,
ನಿಲ್ಲದಾ ನೌಕಾಯಾನವದು
ಘನನೀಲ, ರುಧಿರ, ಶ್ಯಾಮ, ಬಿಳಿಬಸಿರ, ಗಿಳಿಹಸಿರ ವರ್ಣಗಳಿಂದ ಒಂದಾಗದೇ
ವಂದನೀಯವಾಗಿ ಒರಗಿದ
ಸಪ್ತಸಾಗರಗಳ ಸೂರೆಗೈದಲ್ಲಿ ಸಾಹಸಯಾತ್ರೆಯೊಳು ಸುತ್ತುತಿಹ
ಸಮುದ್ರಯೋಧರುಗಳು
ಉಪವಾಸ–ವನವಾಸಗಳೆನ್ನದೆ, ಜನವಾಸವಿರದಾರ್ಣವದಿ ಜಲವಾಸವ ಜಯಿಸಿ
ಜನಸಮ್ಮರ್ಧದ ಜಾತ್ರೆಗಾಗೆಂದು
ಎದುರುನೋಡಿರಲು, ಏಳುಹೆಡೆನಾಗರದಾಕ್ರಮಣದೊಲು, ಏಳುಮಕ್ಕಳ
ಚೌಡಿಯಾಕ್ರೋಶದೊಲು
ಚಂಡಮಾರುತದ ಚತುರಂಗಬಲವೇ ಬಂದಪ್ಪಳಿಸಿರಲು ಆಳೆತ್ತರದ ನೀರೆದ್ದು
ನೌಕೆಯ ತಡೆಹಾಯ್ದು
ಕೆಡವುತ್ತ ಉಧದಿಯದು ಉನ್ಮತ್ತವಿಹ ಉಪದ್ವಾಪಿಯೊಲು ಉಕ್ಕೇರುತ
ಉಪ್ಪರಿಗೆಯನೇರುವೊಲು
ಪ್ರಕ್ಷುಬ್ಧವಿಹ ಪ್ರೇಮದ ಪಾರಾವಾರನಾದ ಪುರೂರವಸ್ಸನು ಪ್ರಿಯಳ
ಪ್ರಿಯವದನದೆಡೆ ಪುರೋಗಮಿಸಿದನು.

ಕನಕಭಂಡಾರದೊಳಗಿಂದ ಕಣ್‌ಕೋರೈಸುವ ಕಾಂತಿಯನೇ ಕರೆವ
ಕೆಂಡಸೂರ್ಯನೊಲು ಸ್ವರ್ಣಮಯಿಯಾದ
ಸುಂದರಿಯೆಡೆಗಿನ ಸೆಳೆತವದು ದಿವ್ಯರಹಸ್ಯದಲೊಂದಾದ ಗೋಲೋಕದ
ಗೂಢದೊಲು ನಿಗೂಢವಾಗಿತ್ತು.
ಸ್ವರ್ಭಾನು ಚಂದ್ರನನು ನುಂಗಲೆಳಸಿರಲು ರಜನಿಯಪ್ಪಳಿಸಿ ಕತ್ತಲೆಯ ಕವಿಸಿರಲು
ಆ ನಿಶೆಯ ನೂರೊಡಲಂತಿಹವಳ ನೀಲಾನೀಳಕೇಶವದು ನರಪತಿಯ ನಿದ್ರೆಗೆಡಿಸಿತ್ತು.
ಆದರೂ ಆರ್ಧ–ಪರಾರ್ಧದ ಸೀಮೆಯೊಳು ಸುತ್ತಿತಿಹ ಸ್ವರ್ಲೋಕವದು
ಸೀಮಂತಿನಿಯ
ಕೈಬಳೆಯ ಕುಲುಕಿನಲಿ ಕುಣಿದಾಡಿತ್ತು, ಕಾಲ್ಗಡಗದ ಕಿಂಕಿಣಿನಾದದಿ ಕೇಕೇಯ
ಹಾಕಿತ್ತು.
ಸಿರಿಲೋಕದಾ ಸ್ವಪ್ನ–ಸುಗಂಧಿನಿಯ ಕೇಶಬಂಧದ ಅಂದದೊಳಗೆ
ಶ್ವಾಸಭಂದವನಿಟ್ಟಿತ್ತು.
ಮರ್ತ್ಯವಿದು ಸ್ವರ್ಗೋದ್ಯಾನದಿ ಸುಲಕ್ಷಣವಿಹ ನಂದನಪಾರಿಜಾತದ ಪಲ್ಲವಿಸದ
ಪಕಳೆಗೆಂದಲ್ಲಿ ಪ್ರತೀಕ್ಷಿಸಿರಲು,
ಮನೋಲೋಕದ ಮಂದಹಾಸವೇ ಮಧ್ಯಲೋಕಕಿಳಿದು ಮಹಾನಂದ
ನಾಟಕವನಾಡಿತ್ತು. ಅಂದು,
ಬುವಿಯೊಳದು ಬಿತ್ತುತಿಹ ಮಾನಸದ ಮುತ್ತು–ಮಾಣಿಕ್ಯಗಳೆಲ್ಲ ಮೊಳೆತು
ಮಹಾವೃಕ್ಷವಾಗುವುದ
ಕಾಣುತ ನಿಂದ ನರಪತಿಯು ನಿಟ್ಟುಸಿರನಿಟ್ಟು ನೋಡಿರಲು, ನಿತಾಂತವಿಹ
ನೀಲಿಮದೊಡಲಿಂದ
ಬಂದೊಂದು ಉದ್ಗಾರವು, ಪುರೂರವನ ಪ್ರಾಣಭಿತ್ತಿಯೊಳಿಳಿದು ಪುನರುಚ್ಚರಿಸಿತ್ತು.
ಒಡನುಡಿದಿರಲದು ಧೀಯಾಗಿ ಗೀಯಾಗಿ ದಿವ್ಯಶ್ರುತಿಯಾಗಿತ್ತು. ಸ್ಫುರಿಸಿರಲದು
ಅಂತ್ಯವಿರದ ಅಂತಃರ್ನುಡಿಯಾಗಿತ್ತು:
"ನಿಯಂತೃವಿನ ನಿಯಮಗಳನರಿತ ನಿಲಿಂಪರೇ, ಸೃಷ್ಟಿಯಾರಭ್ಯ ಶಕ್ತಿಯ
ಸೂನುಗಳಾದ ಸುಮನಸರೇ,
ಆನಂದವೆಂಬ ವಜ್ರದ ಗಣಿಯ ಕಿಡಿಯಾಗುತೊಗೆತಂದ ಪ್ರಜ್ಞೆಯ ಕಣವದು
ಹಿರಣ್ಮಯದಿ ಧಿವ್ಯಭಾವವ ಧರಿಸಿ, ಜ್ಯೋತಿರ್ಗರ್ಭದಿ ಕಾರಣದಾವರಣವ
ತಳೆದು, ವಿಶ್ವದಾಲಯದ ಸೃಷ್ಟಿಪೀಠದಲಿ ಆತ್ಮವಾಗಿತ್ತೋ,

ಆ ಅಂತರಾತ್ಮವನು ಅದಾವ ಅದೃಶ್ಯವಿಹ ಅಗ್ನಿಹಸ್ತವದು ಅಂಗೈಯೊಳು ಇರಿಸಿ,
ವಿವಿಧ ವರ್ಣಗಳ ಬೆರೆಸಿ
ಬಣ್ಣಬಣ್ಣದ ಬೊಂಬೆಯನಾಗಿಸಿಹುದು? ಮಣ್ಣಿನೊಳಗದನು ಮಾನವನೆಂದು
ಮೂಡಿಸಿಹುದು?
ಅಂದೊಮ್ಮೆ ಅಹಮಿಕೆಯ ಆಹವಮಲ್ಲನಾಗಿ ಅಲವತ್ತುಕೊಂಡಿರುವ ಕಾಲದೊಳಗೆ
ಕವಿದಿರುವ
ಜ್ಞಾತೃಭಾವದ ಜ್ಞೇಯದೊಳಗೆ ಧೇನಿಸಿದ್ದೆ : ಉತ್ತರೋತ್ತರದಿ ಎತ್ತರರೆತ್ತರಕೆ
ಬೆಳೆದು ನಿಂತಿಹ
ಭವ್ಯಬೆಟ್ಟಗಳೆಲ್ಲ ಬೇರೊಂದು ಭಾಗದೆಡೆ ಭವಿಸಿದರೂ, ಪಾರ್ಥಿವದಿಂದ
ಪರಾರ್ಥದೆಡೆ
ಪವಡಿಸಿದ ಪಂಕಪರ್ವತಗಳಿಗೆಲ್ಲ ಪಾದವು ಪುಟ್ಟಿ ಪೂರ್ವನೆಲೆಯಿಂದವು
ಪಲಾಯನಗೈದರೂ,
ಚಿತ್‌ನಭೋಮಂಡಲದ ಚಿದಾಕಾಶದಿ ಚಕಮಕಿಸುವ ಚಿರಂತನದ ಚುಕ್ಕಿಗಳವು
ಚಂಚಲ ಚಲನೆಯಲಿ
ಗಿರಕಿಸುತ್ತುತ ಗುಂಭದಾಳದೊಳಗಿಳಿದು ಗೋಮಂಡಲದ
ಗುಡಿರೇಖೆಯೊಳಗಿಂದ ಗಡಿಪಾರಾದರೂ,
ಪುರಾಣಪುಣ್ಯಪುರುಷನಾಗುತೊಗೆತಂದ ಪುರೂರವ ನೃಪನಾಂತು ನಾನು
ದೈವದ ದಾರಿಯನು ದಾಟಿ ದೂರವಾಗುವದಿಲ್ಲವೆಂದು ದುಡುಕಿದ್ದೆ!
ಆದರೆ, ಇಂದೇಕೋ ನಿಯತಿಯದು, ನನಗಾಗೆಂದು ನೆಟ್ಟ ನೇಮವದು
ತಲೆಕೆಳಗಾಗಿ ತಿರ್ರೆಂದು ತಿರುಗುವ ತರಗೆಲೆಯಂತೆ ತಳಕಾಣದೆ ತಡವರಿಸುತಿಹುದು.
ಪೂರ್ವಗ್ರಹ ಪೀಡಿತವಾದಂತೆ ಪೂರ್ವಗ್ರಹಗಳಲೇ ಪರಿಭ್ರಮಿಸುತಿದ್ದ
ನನ್ನಾತ್ಮಲೋಕವದು
ಆಯತನವ ತೊರೆದು ಅನ್ಯಾಯಾಮದ ಆವರಣದೊಳಗೇ ಅಂಡಲೆಯುತಿಹುದು.
ದಶ–ದಿಶೆಯ ದೇಶದರಿವಿಲ್ಲದ, ಕಳೆದ–ಕಾಣದ ಕಾಲಪರಿವಿಲ್ಲದ ಕೇಂದ್ರದೊಳಗೆ
ಕಳೆದೋಗುತಿಹುತು.
ಅಶ್ವಶರ್ಯತ್ತಿನ ಅಂಕಣದೊಳಗೆ ಅಂಕುಡೊಂಕಾಗುತೆಳೆದ ತೋರುಗೆರೆಯೊಳಗೆ
ತಿರುಗುವ ತುರಗದಂತಲ್ಲದೇ
ಸಮರಾಂಗಣದಿ ನೂರುನಿಯಮಗಳನೆಲ್ಲ ನಜ್ಜುಗುಜ್ಜಾಗಿಸಿ ನಾಗಾಲೋಟದ
ವೇಗದಲೋಡುವ ವಾಜಿಯಂತೆ

ತಿಳಿಯದ ಹಾದಿಯೊಳಗೆ ತಪ್ಪುಹೆಜ್ಜೆಯನಿಟ್ಟು ತಳ್ಳಂಕವಿಡುತಿಹುದು.
ಅಂದೊಮ್ಮೆ, ರಾಜ್ಯಾರೋಹಣದಿ
ಪಂಚಜನರಾಜ್ಯದ ಪ್ರಜಾಸಮೂಹವೆಲ್ಲ ನೆರೆದು ನವನೃಪಾಲನನು ನೋಡಿ
ನೆನೆಸಿತ್ತು. ಹಾಡಿ ಹರಸಿತ್ತು:
'ಪುರೂರವನಿವ ಪಾರ್ಥಿವರಲ್ಲೇ ಪುಣ್ಯಪುನೀತನಿಹನು;
ಮರ್ತ್ಯವನ್ನಮರ್ತ್ಯದೆಡೆಗೆತ್ತುವ ಮಹಿಮಾನ್ವಿತನಿಹನು;
ಸುನೀಲ ವಿಸ್ತರವಿಹ ನಿಲಿಂಪರ ನೀಲಾಕಾಶದ ನೆಲೆಯೆಡೆಗೆ ನಮ್ಮೆಲ್ಲರನ್ನೆತ್ತಿ
ನಿಲ್ಲಿಸುವನು; ನಾಕದಿ ನಡೆಸುವನು.'
ಎಂದೆನುತ ಅಂದವಿಹ ಮಂದಮಾರುತದ ಮಹಾಶೀರ್ವಾದವನಿತ್ತು
ಮಾನವನಿವನನು ಮನ್ನಿಸಿತ್ತು.
ಆದರೆ, ಅವರಂಕೆಯ ಅವಗಾಹನೆಗಳನೆಲ್ಲ ಆರಡಿಗೆ ತಳ್ಳಿ
ಆಳಪ್ರಪಾತದೆಡೆಗಿಳಿಯುತಿಹೆನು.
ಅದಕಿಂತು ಕಾರಣಳಿಹ, ಜೀವನದೇವತೆಗಳ ಸ್ವರ್ಗದಿಂದಿಳಿದ ಓ ಸ್ವರ್ಣಿಮ
ಬಾಲೆಯೇ! ನೀನಾರು?
ಭವಾಂತರದ ಸರಣಿಮಾಲೆಯ ಸ್ಮೃತಿಸಾಮ್ರಾಜ್ಯದೊಳಗಲ್ಲಿ ಕಳೆದುಹೋದ
ಕಿನ್ನರಾಶ್ವೆಯೇ?
ಗತಿಸಿಹೋದ ಜನ್ಮಾಂತರದ ಜಾಲದೊಳಗೊಮ್ಮೆ ಜೊತೆಯಾರ್ತಿಯಾಗಿದ್ದ
ಜಲಕನ್ನಿಕೆಯೇ?
ರಹಸ್ಯವೆಂಬ ರಾಜಭಾಂಡಾರದೊಳಗಿಂದ ರಾರಾಜಿಸುತ ಬಂದ
ರಾಜ್ಞೀಗೋಮೇಧಿಕಳೇ?
ವಾರಿಧಿವಿಸ್ತಾರದಿ ಘೂರ್ಣಿಸುವ ತರಂಗೋತ್ತರಗಳಾಳದ ಅಮೃತಶಿಲಾಸೌಧದ
ವಾರುಣಮಂದಿರದೊಳಗಿಂದ ಶ್ವೇತಾಂಬುದರಥವೇರಿ ಗಂಧರ್ವರ
ಆಡುಂಬೋಲವಾದ
ಶ್ವೇತಛತ್ರದ ಸಹಸ್ರಾಂಗಣವೆಂಬ ಮೇಘಪರ್ವತಾವಳಿಗಳ ಮಧ್ಯದಿ ಮಡಗಿರುವ
ಮೋಡಗಳ ಮನೆಯೆಡೆಗೆ ಬಂದಿಳಿದ ಬಿಳಿಚಾಮರಧಾರಿ ಚೆಲುವೆಯೇ?

(ಸಶೇಷ)

# ‘ಸಾವಿತ್ರೀ’ – ಲೋಕ–ಲೋಕಗಳ ಆನ್ವೇಷಣೆ

**– ಪುಟ್ಟು ಕುಲಕರ್ಣಿ**

ಸಾವಿತ್ರಿ (ಬುಕ್ 2) ಗ್ರಂಥದಲ್ಲಿ ಶ್ರೀ ಅರವಿಂದರು ಅಭಿವ್ಯಕ್ತಿಸುತ್ತಿರುವ ಆಂತರ್ಯವನ್ನು ನಾವು ಸ್ಪಂದಗೊಳ್ಳಬೇಕೆಂದರೆ, ಜಗನ್ಮಾತೆಯ ಮೂಲ ಸ್ವರೂಪದ ಬಗೆಗೆ, ಪ್ರಾಚೀನ ಕಾಲದಿಂದಲೂ ಆರಾಧನಾ ಸ್ವರೂಪದಲ್ಲಿ ಅನುಷ್ಠಾನಗೊಳ್ಳುತ್ತಿರುವ ಶ್ರೀಮಾತೆಯ ಕುರಿತು ಮತ್ತೆ ನಮ್ಮ ಸ್ಮೃತಿಯನ್ನು ಜಾಗ್ರತಗೊಳಿಸಿಕೊಳ್ಳಬೇಕಾಗಿದೆ. ಅದರಲ್ಲೂ ‘ಬ್ರಹ್ಮ ಗ್ರಂಥಿ ಭೇದ’, ವಿಷ್ಣು ಗ್ರಂಥಿ ಭೇದ’ ಮತ್ತು ‘ರುದ್ರ ಗ್ರಂಥಿ ಭೇದ’ಗಳ ಕುರಿತು ಮಾತೆಯ ತ್ರಿಗುಣ ಸ್ವರೂಪದ ಮೂಲ ತತ್ತ್ವವನ್ನು ಅರಿತುಕೊಳ್ಳಬೇಕಾಗುತ್ತದೆ.

ಅವತರಣಗೊಂಡು ಸಾಕಾರ (ಸ್ವ)ರೂಪವನ್ನು ತಳೆದ ಚೇತನವು ‘ದುರ್ಗಾ–ದುರ್ಗಾಪರಾ–ಸೌರಾ–ಸರ್ವಕಾರಿಣೀ–ಖ್ಯಾತಿ–ಕೃಷ್ಣಾ ಮತ್ತು ಧೂಮಾ ಸ್ವರೂಪದಲ್ಲಿ ಇರುತ್ತದೆ. ಅತಿ ಸೌಮ್ಯಳೂ, ಅತಿ ರುದ್ರಳೂ, ಉಭಯಾತೀತಳೂ, ಮನಾತೀತಳೂ ಆಗಿದ್ದು ಜಗತ್–ಪ್ರತಿಷ್ಠ ರೂಪಿಣಿ ಎಂದು ಮತ್ತು ನಿರ್ಮಾತೃಳು ಆಗಿರುವದರಿಂದ ಅವಳೇ ‘ಸೃಷ್ಟಿಕರ್ತ್ರೀ’ ಆಗಿರುವದನ್ನು ಶ್ರೀ ಅರವಿಂದರು ‘ಕ್ರಿಯೇಟ್ರೆಕ್ಸ್’ ಎಂದು ಆಂಗ್ಲ ಭಾಷೆಯಲ್ಲಿ ಟಂಕಿಸಿದ್ದಾರೆ.

ಇದರ ಮೂಲವನ್ನು ‘ಯಾ ದೇವೀ ಸರ್ವ ಭೂತೇಷು ವಿಷ್ಣು ಮಾಯೇತಿ ಶಬ್ದದಾ’ ಎನ್ನುವ ಶ್ಲೋಕದಲ್ಲಿ, ಅವಳ ಎಲ್ಲ ಸ್ವರೂಪಗಳ ಅಸ್ತಿತ್ವವನ್ನು (– ಚೇತನಾ–ಬುದ್ಧಿ–ನಿದ್ರಾ–ಕ್ಷುಧಾ–ಛಾಯಾ–ಶಕ್ತಿ–ತೃಷ್ಣಾ–ಕ್ಷಾಂತಿ(ಕ್ಷಮಾ)–ಜಾತಿ–ಲಜ್ಜಾ–ಶಾಂತಿ–ಲಕ್ಷ್ಮೀ–ವೃತ್ತಿ–ಸ್ಮೃತಿ–ದಯಾ–ತುಷ್ಟಿ–ಮಾತೃ–ಭ್ರಾಂತಿ) ರೂಪೇಣ ಸಂಸ್ಥಿತಾ ಎಂದೇ ಆರಾಧನೆ ಇದೆ. ಇಲ್ಲಿ ಕೊನೆಯದಾಗಿ ಹೇಳಲಾಗಿರುವ ಭ್ರಾಂತೀ ಎನ್ನುವದನ್ನು ಭ್ರಮೆ ಎಂದು ಅದು ಎರಡು ಪ್ರಕಾರಗಳಲ್ಲಿ (ಸಂವಾದೀ ಮತ್ತು ವಿಸಂವಾದೀ) ಇರುತ್ತದೆ ಎಂದು ವೇದಾಂತದ ಉಲ್ಲೇಖವಿದೆ. ಯಾವುದೇ ಬಾಧಕವಿಲ್ಲದ ಸ್ಥಿತಿಯಲ್ಲಿ ಅನುಭಾವಕ್ಕೆ–ಅನುಭವಕ್ಕೆ ಲಭ್ಯವಾಗುವದು ಸಂವಾದೀ ಆಗುತ್ತದೆ. ಉದಾಹರಣೆಗೆ, ಮಣಿಯನ್ನು ಅರಸುತ್ತಾ ಸಾಧನೆಗೈದು ಮಣಿಯನ್ನೇ ಪಡೆದುಕೊಳ್ಳುವದು ‘ಸಂವಾದೀ’ ಹಂತವಾಗಿದೆ. ಅಂದರೆ ಮಣಿ(ರತ್ನ) ಲಭ್ಯಗೊಳ್ಳುವ ಸ್ಥಾನದ ಕುರಿತು ನಿಖರವಾದ ಜ್ಞಾನವನ್ನು ಹೊಂದಿ, ಅದನ್ನು ಪಡೆದುಕೊಳ್ಳುವದು. ‘ಗಜಕುಂಭೇಷು ವಂಶೇಷು ಪಣೇಷು ಜಲದೇಷಚ। ಶುಕ್ತಿಕಾಯಾಂ ಇಕ್ಷುದಂಡೇ ಷೋಢಾ ಮೌಕ್ತಿಕ ಸಂಭವಃ॥’ ಎಂದು ಹೇಳುವಂತೆ, ಆ ಮೂಲಕ ಪಡೆದುಕೊಳ್ಳುವದು ‘ಸಂವಾದಿ’ ಹಂತ.

ಇನ್ನು ವಿಸಂವಾದಿ ಎಂದರೆ, ಪುಷ್ಪದಲ್ಲಿ ಪದ್ಮರಾಗಮಣಿಯನ್ನು ಅರಸುತ್ತಾ ಸಾಗುವದು. ಆಗ ಎಷ್ಟೇ ಅರಸಿದರೂ ಅಲ್ಲಿ ಲಭ್ಯವಾಗುವದು ಪುಷ್ಪವೇ ವಿನಾ ಮಣಿ ಅಲ್ಲವೇ ಅಲ್ಲ. ಹೀಗಾಗಿ ಜಗನ್ಮಾತೆಯ ಸ್ವರೂಪದ ಇಂದ್ರಿಯ ಮತ್ತು ಭೂತ ಸಮೂಹದ ಸಗುಣತ್ವವನ್ನು 'ಅಧಿಷ್ಠಾತ್ರೀ' ಹಂತದಲ್ಲಿ ಆರಾಧಿಸಲಾಗುತ್ತಿದೆ. ಇದು ನಮ್ಮ ವಾಸ್ತವದ ಜಗತ್ತಿನ ದರ್ಶನವನ್ನು ಸತ್ಯದ ರೂಪದಲ್ಲಿ ದೃಷ್ಟಗೊಳಿಸುತ್ತದೆ. ಅಂದರೆ ಇಲ್ಲಿ ಇಂದ್ರಿಯಾನುಭವದಿಂದ ಲಭ್ಯಗೊಳ್ಳುವ ಜ್ಞಾನವನ್ನು ಆರಾಧಿಸುತ್ತೇವೆ.

ಇದೆಲ್ಲವೂ 'ಅವತರಣಗೊಂಡು' ಅವತಾರಗೊಂಡ ವಿಷಯವಾದರೆ, ವಿಕಾಸದ ನಿಯತಿಯ ಪ್ರಕಾರ ಮತ್ತೆ 'ಆರೋಹಣ' ಕ್ರಿಯೆ ಪ್ರಕೃತಿ ಸಹಜವಾಗಿರುತ್ತದೆ. ಹೀಗಾಗಿಯೇ 'ಯಾದೇವಿ ಸರ್ವ ಭೂತೇಷು ..' ಎನ್ನುವ ವಿವರಣೆಯಲ್ಲಿ 34 ನೇ ಶ್ಲೋಕವಾಗಿ; "ಚಿತ್–ರೂಪೇಣ" ಎನ್ನುವದನ್ನು, 'ಯಾ ಕೃತ್ಸ್ನಮೇತದ್ ವ್ಯಾಪಸ್ಥಿತಾ ಜಗತ್' ಎಂದು 'ಚಿತ್–ಸ್ವರೂದಲ್ಲಿ ಬ್ರಹ್ಮಾಂಡ ವ್ಯಾಪ್ತಿಯಾಗಿದ್ದಾಳೆ' ಎಂದು ಹೇಳಲಾಗಿದೆ.

ಇದನ್ನು ಸಾಧಿಸಲು, ನಿರ್ಗುಣ ಚೈತನ್ಯದ ಲಕ್ಷ್ಯವಿರಬೇಕು. ಹೀಗಾಗಿಯೇ ಇದಕ್ಕೆ 'ಚಿತಿ' ಎಂದು ಧ್ವನಿಪೂರ್ಣ ವರ್ಣವಿದೆ. ಇದೇ 'ಚಿತಿ'ಯನ್ನು ಸಾಂಖ್ಯರು 'ಪುರುಷ'ನೆಂದು, ವೇದಾಂತಿಗಳು 'ಬ್ರಹ್ಮ'ವೆಂದು ಉಪನಿಷತ್ತುಗಳು 'ಆತ್ಮ'ವೆಂದು ಮತ್ತು ಮಾತೆಯನ್ನು 'ಜಗನ್ಮಾತೆ' ಎಂದು ಆರಾಧಿಸುತ್ತಿವೆ. ಶ್ರೀ ಅರವಿಂದರು 'ಚೈತ್ಯ–ಪುರುಷ' ಎಂದು ಅಭಿವ್ಯಕ್ತಿಸುತ್ತಾರೆ.

ಇದನ್ನೇ ಶ್ರೀ ಅರವಿಂದರು, ತಮ್ಮ 'ಸಾವಿತ್ರಿ' ಮತ್ತು 'ದಿವ್ಯ ಜೀವನ'ದಲ್ಲಿ ವರ್ಣಿಸುತ್ತಾರೆ. 'ಕೃತ್ಸ್ನಮೇತದ್ ವ್ಯಾಪಸ್ಥಿತಾ' ಎನ್ನುವದನ್ನು ಹೇಗೆ ಅರ್ಥೈಸಿ–ಕೊಳ್ಳಬೇಕು ಎನ್ನುವದನ್ನೂ ಶ್ರೀ ಅರವಿಂದರು ತೋರಿಸುತ್ತಾರೆ. 'ಚಿತಿ' ಎಂದರೆ ಶಕ್ತಿಪೂರ್ಣವಾದದ್ದು ಎಂದೇ ಶ್ರೀ ಅರವಿಂದರ ಅಭಿಮತ. ಪತಂಜಲಿಯೂ ಸಹಿತ 'ಚಿತಿಶಕ್ತಿ' ಎಂದೇ ಕರೆದಿದ್ದಾನೆ. ವೇದಾಂತ ಶಾಸ್ತ್ರವೂ ಸಹಿತ ಚಿದ್ವಸ್ತುವನ್ನು ಶಕ್ತಿ ರೂಪತ್ವದಲ್ಲಿಯೇ ಹೇಳಿದೆ. ಜಗತ್ತು ಮಿಥ್ಯ ಆದರೆ, ಸೃಷ್ಟಿ ಕೇವಲ ಕಲ್ಪನೆ ಮಾತ್ರ ಆದರೆ, ಇವಕ್ಕೂ ಸಹಿತ ಆಶ್ರಯವಾದದ್ದು 'ಬ್ರಹ್ಮವೇ' ಆಗಿದೆ.

ಈ ವಿಷಯಗಳನ್ನೇ ಶ್ರೀ ಅರವಿಂದರು ತಮ್ಮ 'ಸಾವಿತ್ರಿ'ಯಲ್ಲಿ ಮಂತ್ರ ಸ್ವರೂಪದಲ್ಲಿಯೂ, 'ದಿವ್ಯ ಜೀವನ'ದಲ್ಲಿ ಅದರ ಅನುಷ್ಠಾನ ವಿಧಾನದಲ್ಲಿಯೂ, ಮತ್ತು ಪ್ರಮುಖವಾಗಿ ಇವುಗಳನ್ನು ಸಮನ್ವಯಗೊಳಿಸುವ ವಿಧಾನವನ್ನು 'ಯೋಗ ಸಮನ್ವಯ'ದಲ್ಲೂ ಅಭಿವ್ಯಕ್ತಿಸಿದ್ದಾರೆ.

## ಋಗ್ವೇದೀಯ ದೇವಿ ಸೂಕ್ತ ಮತ್ತು ಸಾವಿತ್ರಿ

ಈ ಚಿತ್ಸ್ವರೂಪವು ವಿಕಾಸದ ಹಂತದಲ್ಲಿ ಹೇಗೆ ಪರಿಪಕ್ವ–ಪರಿಪೂರ್ಣತೆಯನ್ನು ಪಡೆದುಕೊಳ್ಳುತ್ತಿದೆ ಎನ್ನುವದನ್ನು ಋಗ್ವೇದದ ಆಧಾರದಲ್ಲಿ ಶ್ರೀ ಅರವಿಂದರು ವಿವರಿಸುತ್ತಾರೆ.

ಇದನ್ನು ಮತ್ತೂ ವಿವರವಾಗಿ ಋಗ್ವೇದದ 'ದೇವಿ ಸೂಕ್ತ'ದ ಆಂತರ್ಯದಲ್ಲಿ ಗೂಢವಾಗಿರುವ ಆದಿಪರಾಶಕ್ತಿಯ ಸ್ವರೂಪವನ್ನು ಸೂತ್ರ ರೂಪದಲ್ಲಿ ಅಭಿವ್ಯಕ್ತಿಸುತ್ತಿದೆ. ಈ 'ಆದಿ ಪರಾಶಕ್ತಿ'ಯನ್ನೇ 'ದುರ್ಗಾ, ಲಕ್ಷ್ಮೀ, ಕಾಳಿ ಮತ್ತು ಸರಸ್ವತಿ' ಸ್ವರೂಪದಲ್ಲಿ ಶ್ರೀ ಅರವಿಂದರು ತಮ್ಮ ಗ್ರಂಥಗಳಲ್ಲಿ ವಿಕಾಸದ ಹಂತದ ಸ್ವರೂಪಗಳನ್ನು ದ್ರಷ್ಟಾರರಾಗಿ ಪಥ ನಿರ್ಮಿಸಿದ್ದಾರೆ. ಇದೇ ವಿಷಯವನ್ನೇ ಮಹರ್ಷಿ ಅಗಸ್ತ್ಯನ 'ಲಲಿತಾ ಸಹಸ್ರ ನಾಮ'ದಲ್ಲೂ ಕಾಣಬಹುದು. ಅಲ್ಲಿಯೂ ಸಹಿತ 'ಮಹಾಮಾಯಾ–ಮಹಾಲಕ್ಷ್ಮೀ–ಮಹಾಕಾಳಿ–ಸರಸ್ವತೀ' ಎಂದೇ ವಿವರಣೆಗಳಿವೆ.

ಈ ಸೂತ್ರವನ್ನು ಅರ್ಥೈಸಿಕೊಳ್ಳುವದರ ಸಲುವಾಗಿ, ಲಲಿತಾ ಸಹಸ್ರ ನಾಮದಲ್ಲಿರುವ 'ಬ್ರಹ್ಮ ಗ್ರಂಥಿ, ವಿಷ್ಣು ಗ್ರಂಥಿ ಮತ್ತು ರುದ್ರ ಗ್ರಂಥಿ'ಗಳ ಸಂರಚನೆಯನ್ನು ಅಧ್ಯಯನ ಮಾಡಬೇಕಿದೆ. ಈ ಮೂರೂ ಗ್ರಂಥಿಗಳನ್ನೇ 'ನಾಟ್ಸ (Knots)' ಎಂದು ಕರೆಯುತ್ತಾರೆ. ಪುರಾಣಗಳಲ್ಲಿ – ಆಯಾ ಕಾಲದ ಸಾಮಾಜಿಕ ವಾತಾವರಣದ ಪ್ರಭಾವದಿಂದ ಉದ್ಭವಗೊಳ್ಳುವ ಶಬ್ದಗಳಲ್ಲಿ ಅಭಿವ್ಯಕ್ತಿಸಿರುವಂತೆ, ಅವುಗಳನ್ನು ಗೆಲ್ಲುವದು 'ಶುಂಭ–ನಿಶುಂಭ', ಎನ್ನುವ ಸಾಂಕೇತಿಕ ನಾಮಗಳಿಂದ ಅಭಿವ್ಯಕ್ತಿಸಲಾಗಿದೆ. ಈ 'ಶುಂಭ–ನಿಶುಂಭ'ವೆನ್ನುವದು ಅಹಂಕಾರ ಮತ್ತು ಮಮಕಾರದ ನಾಮಗಳು. ಅಹಂಕಾರವನ್ನು ಗೆದ್ದಿದ್ದೇನೆ ಎನ್ನುವದು ಮಮಕಾರ–ವಾಗುತ್ತದೆ; ಮಮಕಾರ ರಹಿತನಾಗಿದ್ದೇನೆ ಎನ್ನುವದು ಅಹಂಕಾರವಾಗುತ್ತದೆ. ಇದನ್ನೇ ಶ್ರೀ ಅರವಿಂದರು 'ಸೈಕಿಕ್ ನಾಟ್ಸ' (Psychic Knots) ಎಂದು ಕರೆಯುತ್ತಾರೆ. ಮಾನವನ ದೇಹದ(ಬಂಧನದಲ್ಲಿ)ಲ್ಲಿ ನಿಯತಿಯ ಪ್ರಕಾರ ಅವತರಣಗೊಂಡು 'ಆತ್ಮ'ವಾಗಿ ಲೌಕಿಕದ ಸಂಪರ್ಕಕ್ಕೆ ಬಂದ ಈ ಚೇತನವು, ಸಹಜವಾಗಿ ಈ ಗ್ರಂಥಿಗಳಲ್ಲಿ ಸಿಲುಕಿಕೊಳ್ಳುತ್ತದೆ. ಈ ಗ್ರಂಥಿ(ನಾಟ್ಸ)ಗಳನ್ನು ಭೇದಿಸುವದೇ ಸಾಧಕನ ಧ್ಯೇಯ, ಗಮ್ಯವಾಗಬೇಕು.

ಈ ಮೂರು (ಬ್ರಹ್ಮ ಗ್ರಂಥಿ–ವಿಷ್ಣು ಗ್ರಂಥಿ ಮತ್ತು ರುದ್ರ ಗ್ರಂಥಿ) ಗ್ರಂಥಿಗಳ ಭೇದನವೇ ಮಾನವನಿಗೆ ಆರೋಹಣಕ್ಕೆ ಸುಲಲಿತ ಪಥವನ್ನು ಒದಗಿಸುವ

ಹಂತಗಳಾಗಿವೆ. ಸಾವಿತ್ರಿ ಗ್ರಂಥದ ಎರಡನೇ ಬುಕ್ – ಲೋಕ–ಲೋಕಗಳ ಸಂಚಾರ– ಈ ಗ್ರಂಥಿ ಭೇದನದ ರಹಸ್ಯದ ಅವಕುಂಠನವನ್ನು ತೆರೆದಿರಿಸಿದೆ.

ಇದಕ್ಕೆ ತಾಯಿ ಬೇರಿನ ಸ್ವರೂಪದಲ್ಲಿ ಇರುವ ಈ 'ಋಗ್ವೇದೀಯ ದೇವಿ ಸೂಕ್ತ'ವು, ವಿಶ್ವಾಸಪೂರ್ವಕವಾಗಿಯೇ ಆರಾಧಿಸಲ್ಪಡುತ್ತಿರುವಂತೆ, ಋಷಿಕಾಳಿಂದ ದೃಷ್ಟಗೊಂಡಿದೆ. ಋಗ್ವೇದದಲ್ಲಿ ನಮೂದಿತವಾಗಿರುವಂತೆ, 30 ಕ್ಕೂ ಹೆಚ್ಚು ಋಷಿಕಾ (ಸ್ತ್ರೀ ಋಷಿಗಳು) ಹೆಸರುಗಳು ಲಭ್ಯವಿವೆ. ವಿವಾಹದ ಹಂತದವರೆಗೂ ಅಧ್ಯಯನ, ಧ್ಯಾನ, ದರ್ಶನಗಳಲ್ಲಿ ತೊಡಗಿದ್ದ – ಸ್ತ್ರೀ ಸಂಕುಲವನ್ನು 'ಸದ್ಯೋದ್ವಾಸ' ಎಂದೇ ವರ್ಗೀಕರಿಸಲಾಗುತ್ತಿತ್ತು. ಇವರನ್ನು ಬ್ರಹ್ಮವಾದಿನಿಯರು ಎಂದೂ ಕರೆಯಲಾಗುತ್ತಿತ್ತು.

ಅದರಲ್ಲೂ ಋಗ್ವೇದದ 7ನೇ ಮಂಡಲದ 125 ನೇ ಶ್ಲೋಕ(ಮಂತ್ರ)ವು 'ದೇವೀ ಸೂಕ್ತ'ವನ್ನು ಒಳಗೊಂಡಿದ್ದು ಇದು ಋಷಿಕಾಳಿಂದಲೇ ರೂಪಿತಗೊಂಡಿದೆ. ವಾಕ್ ಅಂಭ್ರಿಣೀ ಎನ್ನುವವಳು ಪ್ರಸಿದ್ಧ ಋಷಿ 'ಅಂಭ್ರಿಣ'ನ ಪುತ್ರಿಯಾಗಿದ್ದಾಳೆ. ಹೀಗಾಗಿ 'ಋಗ್ವೇದೀಯ ದೇವಿ ಸೂಕ್ತ'ಕ್ಕೆ 'ವಾಕ್ ಸೂಕ್ತ' ಎಂತಲೂ ಕರೆಯಲಾಗುತ್ತಿದೆ. ದಾಖಲಾತಿಯ ಪ್ರಕಾರ ಈ 'ವಾಕ್ ಅಂಭ್ರಿಣಿ'ಯೇ ಪ್ರಾಚೀನ ಕವಯಿತ್ರಿ.

ಈ ಸೂಕ್ತವು ಪರಿಪೂರ್ಣ ಶಕ್ತಿ ಅಥವಾ ಪರಮ ಚೇತನದ ವಿಷಯವನ್ನೇ ಕುರಿತೇ ಹೇಳುತ್ತಿದೆ. ಇಲ್ಲಿ 'ಆದಿಪರಾಶಕ್ತಿ'ಯೇ ಪರಮೋಚ್ಚ ದೇವತೆಯಾಗಿದ್ದಾಳೆ. ಹೀಗಾಗಿ ಈ ದೇವತೆಯೇ ಶಕ್ತಿಯನ್ನು, ಜ್ಞಾನವನ್ನು ಮತ್ತು ಚೇತನವನ್ನು ಸಮಸ್ತ ಜಗತ್ತಿಗೂ ಒದಗಿಸುತ್ತಾಳೆ.

ಇದು ಪ್ರಪ್ರಥಮ ಶ್ಲೋಕಗಳಲ್ಲಿ 'ಸ್ವಯಂ' ತನ್ನನ್ನೇ ತಾನು ಸಾದರಪಡಿಸಿ–ಕೊಳ್ಳುವಂತೆ ಇದೆ. ಈ ರೀತಿಯ "ಆದಿಶಕ್ತಿಯ ಚೇತನವು ಅವತರಣಗೊಂಡು, ರೂಪಾಂತರಣಗೊಂಡು, ಲೋಕ ಲೋಕಗಳಾಗಿ, ಜಗತ್ತಾಗಿ ರೂಪ ಪಡೆದುಕೊಂಡು ವಿಕಾಸವಾಗುವ ಹಂತದಲ್ಲಿ, ಅದು ಅವತರಣದ ಪ್ರಕ್ರಿಯೆಯನ್ನು ಪೂರ್ತಿಗೊಳಿಸಿ, ಇದೀಗ ಮತ್ತೆ ಆರೋಹಣದತ್ತ ಸಾಗುತ್ತಿದೆ. ಇದನ್ನೇ ಶ್ರೀ ಅರವಿಂದರು ತಮ್ಮ 'ಸಾವಿತ್ರಿ'ಯ ಬುಕ್ 2 ರಲ್ಲಿ 'ಲೋಕ ಲೋಕಗಳ ಸಂಚಾರ'ವೆಂದು ವಿವರ ವಿವರವಾಗಿ ದೃಷ್ಟಾಂತಗಳನ್ನು ಒದಗಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಈ 'ಋಗ್ವೇದೀಯ ದೇವಿ ಸೂಕ್ತ'ದ ಸೂಕ್ಷ್ಮ ಅಧ್ಯಯನದ ಹೆಜ್ಜೆಯನ್ನು ಪ್ರಾರಂಭಿಸಬೇಕಾಗಿದೆ;

ಓಂ
ಅಹಂ ರುದ್ರಭಿರ್ವಸುಭಿಶ್ಚರಾಮ್ಯಹಮಾ ದಿತ್ಯೈರುತ ವಿಶ್ವದೇ ವೈಃ ।
ಅಹಂ ಮಿತ್ರಾವರುಣೋಭಾ ಬಿಭರ್ಮ್ಯಹಮಿಂದ್ರಾಗ್ನೀ ಅಹಮಶ್ವಿನೋಭಾ ॥1॥

ಇಲ್ಲಿ ರುದ್ರ–ವಸು–ಆದಿತ್ಯ–ವಿಶ್ವದೇವತೆಗಳೊಡನೆ, ಜೊತೆಜೊತೆಗೆ ಮಿತ್ರ–ವರುಣ –ಇಂದ್ರ ಮತ್ತು ವರುಣ ದೇವತೆಗಳ ಸಹವರ್ತಿಯಾಗಿ ವಿಕಸನದ ಪಥದಲ್ಲಿದ್ದೇನೆ, ಎನ್ನುವದು ಈ ಮಂತ್ರದ ಭಾವಾರ್ಥ.

ಏಕಾದಶ ರುದ್ರರು, ದ್ವಾದಶಾದಿತ್ಯರು (ಪ್ರಥಮದಲ್ಲಿ ಏಕಾದಶ ಆದಿತ್ಯರು), ಅಷ್ಟಾವಸುಗಳು– ಜೊತೆಗೆ ವಿಶ್ವ ದೇವತೆಗಳ ಕುರಿತು ನಾವೀಗ ಅರಿತುಕೊಳ್ಳಬೇಕಿದೆ. ಈ ರುದ್ರರೆಲ್ಲರು ಶಿವನ ಅವತಾರಗಳು; ಆದಿತ್ಯರು ಕಶ್ಯಪ ಮುನಿ ಮತ್ತು ಅದಿತಿಯ ಪುತ್ರರು. ಅಷ್ಟಾವಸುಗಳು ಬ್ರಹ್ಮಾಂಡೀಯವಾಗಿ ಸ್ಥಿತಗೊಂಡಿರುವ ಪರಮ ತತ್ತ್ವ ಸಮೂಹ. ಇನ್ನು ವಿಶ್ವ ದೇವತೆಗಳು ಎಂದರೆ ವೇದದಲ್ಲಿ ಉಲ್ಲೇಖಿತವಾಗಿರುವ 10 ದೇವತೆಗಳು. ಇವರೆಲ್ಲರಿಗೂ 'ಮಾತೆಯಾಗಿ' ಜಗನ್ಮಾತೆಯಾಗಿ ಆದಿಪರಾಶಕ್ತಿಯು ನಿತ್ಯತ್ವವಾಗಿದ್ದಾಳೆ.

ಇದನ್ನು ಆಧಾರವಾಗಿಟ್ಟುಕಂಡು 'ಸಾವಿತ್ರಿ'ಯ ಎರಡನೇ ಭಾಗದ ಅಧ್ಯಯನವನ್ನು ಪ್ರಾರಂಭಿಸುವ ಯತ್ನವಿದು.

ಜಗದಗಲ ದೃಷ್ಟಿ ಮುಗಿಲಗಲವಾಗೆ ಸಂಯೋಗ ಸ್ಪಂದಗೊಂಡು
ಬ್ರಹ್ಮಾಂಡ–ಬ್ರಹ್ಮ ಅವಕಾಶ ವ್ಯಾಪ್ತ ಉಪಲಬ್ಧಗೊಳಿಸಿಕೊಂಡು
ಇಲ್ಲದಿರೆ ಸರ್ವ ಚಿಂತನವು–ಚೈತ್ಯ –ಸರ್ವವನು ಅರಿತುಕೊಂಡು
ಮತ್ತಿದೋ ಈಗ ಚಿಂತನವು ಮತ್ತೆ ದೃಷ್ಟಿಗಿದು ಅರಿಯದೆಂದು
ಸರ್ವಲೋಕಗಳ ಸರ್ವಾರ್ಥವೆಲ್ಲ ಬಲು–ಗುಹ್ಯ ಮತ್ತೆ ಪರಮ,

**('ಸಾವಿತ್ರಿ'; ದಳ 2 ರೇಣು 1 ಪುಟ 96)**

### ಋಗ್ವೇದೀಯ ದೇವಿ ಸೂಕ್ತ ಮತ್ತು ಸಾವಿತ್ರಿ

ಬಲು ಗೂಢ–ಗುಹ್ಯ–ಜೀವನದ ನೆಲೆಯ ಆ ಆದಿಮೂಲದೆಡೆಗೆ
ಪರಮ–ಪರಿಶುದ್ಧ ಇಂದ್ರಿಯಾತೀತ ತಾ ಭೂಮಕ್ಷೇತ್ರದೊಳಗೆ
ಈ ಅಲ್ಪಬಾಹ್ಯಸತ್ತೆಗಿದು ಕಲ್ಪ–ವ್ಯಾಪ್ತಿಯಾ ರಕ್ಷೆಯಾಗಿ
ಮೃಣ್ಮಯದ ಘನದ ಗೋಡೆಯಿಂದೀಗ ಇದು ತಾ ವಿಭಕ್ತವಾಗಿ

ಪೂರ್ವದರ್ಶನದ ಸೃಷ್ಟಿ–ದೃಷ್ಟಿಯಲಿ ಸುಸ್ಪಷ್ಟಗೊಂಡಿತಿಲ್ಲಿ
ಸ್ಫಟಿಕಶುದ್ಧತೆಯ –ಪವನ–ಪಾವನದ ಮಾಯಕದ ರಂಗದಲ್ಲಿ
ಮಾಂಸ–ಮಜ್ಜೆಗಳ ಜೀವ–ಪ್ರಕೃತಿಯಲಿ ಎಂದಿಗೂ ಸ್ಪಂದಗೊಳದ
ಅದರೊಳಗೆ ಅವನು ಆಗಮಿಸಿ ಈಗ, ಅರಿಯಲೆನೆ ನಿತ್ಯ–ಬಂಧ

ದೀಪ್ತಿ ತಾನೊಂದು ಬೆಳಗುಗೊಳಿಸಿತ್ತು ಅಮೂರ್ತದಾ ರೂಹುಗಳನು
ವಿಸ್ಮಯಾದ್ಭುತದ ಅಧಿಕ್ರಮಣಶ್ರೇಣಿ ಉತ್ಕೃಷ್ಟ ಹಂತದೊಳಗೆ
ಸೂಕ್ಷ್ಮಾತಿಸೂಕ್ಷ್ಮ ಸೂಕ್ಷ್ಮಾಂಡ–ಜಡದ ದಿವ್ಯತೆಯ ಕಾಲಕರ್ಮ
ಉದಿತ ಈ ಭವ್ಯ ಭೂಮ ಸಾಮ್ರಾಜ್ಯ ವೈರಾಜ್ಯವಿದರ ಧರ್ಮ

ಪ್ರಾಣದುಂಬಿರುವ ವರ್ಣಮಾಲೆಗಳ ಆಕಾಶವೊಂದಕೀಗ
ಇದಕೆ ಪ್ರತಿಯಾಗಿ ಉಲ್ಲೇಖಿಗೊಂಡು ತಾನುದಿತಗೊಂಡಿತೀಗ
ಉಜ್ವಲದ–ದೀಪ್ತಿ ವೈಭವದ–ಬೋಧಿ ಆಚ್ಛಾದ ಛಂದದಿಂದ
ಪುಟಿಪುಟಿದು ಬೆಳೆದು ತಾ ಪ್ರಕಟಗೊಂಡು ಜೊತೆಗಿದೋ ಬಂಧದಿಂದ

ಮಂತ್ರ–ಮಾಯಕದ ರಹಸ್ಯೋದ್ಘಾಟ ಶ್ರುತಿಬದ್ಧಗೊಂಡು ರೂಪ
ದೀರ್ಘಗೊಳ್ಳುತಿದೆ ಅದರ ಸಮ್ಮುಖವು ಪ್ರತಿಬೋಧದಲ್ಲಿ ದೀಪ
ಮನಾಕರ್ಷಕದ –ರೂಪಗಳ ಲೋಕ ತಾನೊಂದು ಪ್ರೇಮವಾಗಿ
ನಮಗದುವು ಈಗ ಅತಿಸನಿಹದೊಳಗೆ ತಾ ನಿತ್ಯ ವಾಸಿಯಾಗಿ,

ಇಲ್ಲಿದೋ ಇದುವು ಅನಾವರಣದಲಿ ಸುಸ್ಪಷ್ಟವಾಗಿ ನಿಲಲು
ಋಷಿಯ–ದೃಷ್ಟಿಯದು ನಿರಾಕಾರವನು ಅನುಭೂತಿಗೊಳಿಸಿಕೊಳಲು

ಆಕಾರ ಸರ್ವ–ಸರ್ವಸ್ವವೆಲ್ಲ ಸೌಂದರ್ಯ ಸ್ವಯಂ–ಪೂರ್ಣ
ಜೊತೆಗಿದೋ ಸರ್ವ ವಸ್ತು–ವಿಷಯಗಳು ಸತ್ಯದಲಿ ಮಿನುಗಿ ವರ್ಣ,

ಪಾರದೀಪಕದ ಆ ದೀಪ್ತಿಕಾಂತಿ ವಾಯುಮಂಡಳವು ಈಗ
ಯೋಗಮಾಯೆಯಲಿ ಬೆಳಗುಗೊಂಡಲ್ಲಿ ಸುಸ್ಪಷ್ಟವಾಯೀತಾಗ
ಈ ಚಕ್ಷುವೀಗ ತೆರೆತೆರೆದು ದ್ವಾರ ವ್ಯೋಮಾನುಭೂತಿ ದೀಪ
ಶ್ರಾವ್ಯವದು ತಾನು ನಾದಾನುನಾದ, ಕಮನೀಯ ಸ್ಪರ್ಶ ರೂಪ

ಜೊತೆ ಸ್ಪಂದಗೊಂಡ ಹೃದಯವಿದು ಈಗ ಘನನಿಬಿಡ ಶಕ್ತಿ–ಶ್ವಾಸ
ದೀರ್ಘಾತಿದೀರ್ಘ ಉಚ್ಛ್ವಾಸದೊಳಗೆ ತುಂತುಂಬಿಕೊಂಡು ಹಾಸ

ಬುವಿಯ–ಸಹಜಗುಣದಾ ಸ್ಫುರಿತತೇಜದಾ ಉತ್ಪತ್ತಿ ತಾಣಗಳಿವು
ಇಲ್ಲೀಗ ಧ್ಯಾನ–ತಲ್ಲೀನ ಕೇಂದ್ರ ಸ್ಥಿತದಲ್ಲಿ ಬಂಧವಿದುವು

ಅವಳೀಗ ಅವಳ ಕಾರ್ಯಗಳನೆಲ್ಲ ತಾ ಎರಕಗೊಳಿಸಲೆನಲು
ಪರಿಪಕ್ವ ನಿಖರ ಪರಿಕಲ್ಪನೀಯ ಯೋಜನೆಗೆ ಅನುವುಗೊಳಲು
ಪೂರ್ಣ ಪರಿಶ್ರಮದಿ ಅವಳ ಬಲಗಳಲಿ ಬಲು ದೀರ್ಘ ದೀರ್ಘವಾಗಿ
ಸಂಸ್ಥಾಪಗೊಂಡ ವಿಧಿಯದುವು ಬಂಧ–ಸೂತ್ರದಿ ವಿರಾಮವಾಗಿ

**(ಸಾವಿತ್ರಿ; ದಳ 2 ರೇಣು 2 ಪುಟ 103)**

---

**ಟಿಪ್ಪಣಿ:**

ಜಾಗ್ರತಗೊಂಡ ಸರ್ವಸ್ವವೂ ಶಕ್ತಿಮಯವಾಗಿರುತ್ತದೆ. ಹೀಗಾಗಿ ಶಕ್ತಿಯು ಜಾಗ್ರತಿಯನ್ನು ರೂಪಿಸುತ್ತದೆ. ಚಿತ್ ಶಕ್ತಿಯಾಗಿರುವ ಹಂತದಲ್ಲಿ ಇದು ಕಾರ್ಯಪ್ರವೃತ್ತಗೊಳ್ಳುತ್ತದೆ. ಶಕ್ತಿಯು ತನ್ನಲ್ಲಿ ತಾನೇ Kenetic-Forceನ್ನು ರೂಪಾಂತರದ ಹಂತದಲ್ಲಿ ರೂಪಿಸಿಕೊಳ್ಳುತ್ತದೆ. ಇದನ್ನೇ ತಪಸ್ಸನ್ನಾಗಿಸಿ ಸರ್ವ ಕ್ರಿಯೆಗಳ ಆಧಾರವನ್ನಾಗಿಸಿಕೊಳ್ಳುತ್ತದೆ. ಅದಕ್ಕಾಗಿ, ಎಲ್ಲ ಶಕ್ತಿಯೂ ಚಿತ್ತಿನ ರೂಪವೇ ಆಗಿದ್ದು, ಆತ್ಮದಿಂದ, ಪ್ರಕಾಶದ ಮೂಲಕವೇ ಪ್ರಕಟಗೊಳ್ಳುತ್ತದೆ. ಇದು ಅದರ ಮೂಲ ಉದ್ದೇಶವೂ ಆಗಿದೆ.ಆದರೆ ಪ್ರಕಾಶದಲ್ಲಿಯೂ ಸಹಿತ ಹಲವಾರು ವಿಧಗಳಿವೆ. ಇದು ಚಿತ್ತಿನ ಹಲವು ವಿಧದ ರೂಪಾಂತರದಿಂದ ನಿರ್ಮಾಣಗೊಳ್ಳುತ್ತವೆ. ಶಾಶ್ವತದ ಪ್ರಕಾಶಮಾನವಾದ ಜ್ಯೋತಿ ಪುಂಜದಿಂದ ಹೊರಹೊಮ್ಮುವ ಏಳು ಕಿರಣಗಳು ಏಕೀಭವಿಸಿಕೊಂಡು, ಸೂರ್ಯನ ತೆರದಲ್ಲಿ ಸಾಕಾರ ಪಡೆದುಕೊಂಡು ಮಾನವನಿಗೆ ಕಾಣುತ್ತದೆ; (ಆದಿತ್ಯವತ್ ತಮಸಃ ಪರಸ್ತಾತ್). ಅವಿನಾಶಿಯಾದ ಹಂತದಲ್ಲಿ ಪ್ರಕಟಗೊಳ್ಳುತ್ತದೆ. ಇದರ ಮೂಲಕವೇ ಏಳೂ ಏಳೂ ಕಿರಣಗಳು ಲೋಕದ ಸೃಷ್ಟಿಗೆ–ಅನುಷ್ಠಾನಕ್ಕೆ–ಅಭಿವ್ಯಕ್ತಿಗೆ–ರೂಪಾಂತರಕ್ಕೆ ಕಾರಣವಾಗುತ್ತವೆ. ಸತ್–ಚಿತ್–ಆನಂದ–ವಿಜ್ಞಾನ–ಮನಸ್ಸು–ಪ್ರಾಣ–ಅನ್ನ ಇವು ಸಪ್ತ ಆಯಾಮ ಹೊಂದಿದ, ಸಪ್ತ ರೂಪಗಳಲ್ಲಿ ಪ್ರಕಟಗೊಳ್ಳುವ ಚಿತ್ತಿನ ಸ್ವರೂಪಗಳೇ ಆಗಿವೆ. ಇದನ್ನೇ ಜ್ಯೋತಿರ್ಮಯ ಬ್ರಹ್ಮನ ಸಗುಣ ತತ್ತ್ವ ಎನ್ನುತ್ತಾರೆ.

ಇನ್ನು – ಪ್ರಕಾಶ, ಅಗ್ನಿ, ವಿದ್ಯುತ್, ಜ್ಯೋತಿ, ತೇಜಸ್ಸು, ದೋಷ ಮತ್ತು ಛಾಯಾ ಇವು ಏಳು ಜ್ಯೋತಿರ್ಮಯ ಬ್ರಹ್ಮನ ನಿರ್ಗುಣ ತತ್ತ್ವದ ರೂಪಗಳಾಗಿವೆ (ಗುಣಗಳಾಗಿವೆ).

(ಆಧಾರ: 'ಸಾಧನ ಸಮರ' ಗ್ರಂಥದ 'ಬ್ರಹ್ಮ ಗ್ರಂಥಿ ಭೇದ, ವಿಷ್ಣು ಗ್ರಂಥಿ ಭೇದ ಮತ್ತು ರುದ್ರ ಗ್ರಂಥಿ ಭೇದ' ಪಠ್ಯಗಳು. 1200 ಪುಟಗಳ ವಿವರಣೆಗಳಿವೆ.)

ಬ್ರಹ್ಮ ಗ್ರಂಥಿ ಭೇದ, ವಿಷ್ಣು ಗ್ರಂಥಿ ಭೇದ ಮತ್ತು ರುದ್ರ ಗ್ರಂಥಿ ಭೇದಗಳಲ್ಲಿ, 'ಸಾವಿತ್ರಿ'ಯ ಬುಕ್ ನಂ 2 ರಲ್ಲಿ ಬಹುತೇಕವಾಗಿ 'ರುದ್ರ ಗ್ರಂಥಿ ಭೇದ'ದ ಅಭಿವ್ಯಕ್ತಿ ಇದೆ. ಬ್ರಹ್ಮ ಗ್ರಂಥೀ ಭಾಗದಲ್ಲಿ ಸೃಷ್ಟಿಗೆ ಆಧಾರಭೂತವಾಗಿರುವ ವಿವರಣೆಗಳು ಮತ್ತು ಸೃಷ್ಟಿಗೊಂಡಿರುವ ಸಾಕಾರಗಳ ಸ್ವರೂಪ, ಅವಸ್ಥೆ, ವಿಕಾಸದ ಹಂತಗಳ ಆಯಾಮವನ್ನು 'ವಿಷ್ಣು ಗ್ರಂಥಿ'ಯು ವಿವರಿಸುತ್ತದೆ. ಇನ್ನು ರುದ್ರ ಗ್ರಂಥಿಯು 'ಆರೋಹಣದ ಹಂತದಲ್ಲಿ' ಇರುವ ಮತ್ತು ರೂಪಾಂತರಣಗೊಳ್ಳುತ್ತ ಸಾಗುವ ಭವದ ಬದುಕಿನ ಮಾನವನ ಪ್ರಜ್ಞೆಯು ವಿಕಾಸದ ಹಂತದಲ್ಲಿ – ಮನಸ್ಸು, ಬುದ್ಧಿ ಅಹಂಕಾರ, ವಿಜ್ಞಾನ, ಚಿತ್ ಹಂತದತ್ತ ಸಾಗುತ್ತಿರುವ, ಅಂದರೆ ಅವತರಣಗೊಳ್ಳುವ ಅವಧಿಯಲ್ಲಿ ಯಾವ ಯಾವ ಹಂತದಲ್ಲಿ ಅದು ಸ್ವರೂಪದ ಅಂಶಗಳನ್ನು ಪಡೆದುಕೊಳ್ಳುತ್ತಾ ಬಂದಿತ್ತೋ – ಇದೀಗ, ತನ್ನ ಭವದ ರೂಪದಲ್ಲಿ ಪಡೆದುಕೊಂಡ ಅನುಭವ, ಅನುಭಾವದ ಮೂಲಕ ಪೂರ್ಣತೆಯನ್ನು ಸಿದ್ಧಿಸಿಕೊಂಡ ಸ್ಥಿತಿಯನ್ನು, ಈ ಆರೋಹಣದ ಹಂತದಲ್ಲಿ ಹೇಗೆ ಸಮರ್ಥವಾಗಿ ಸದುಪಯೋಗಪಡಿಸಿಕೊಂಡು ಊರ್ಧ್ವಮುಖಿಯಾಗುತ್ತದೆ ಎನ್ನುವದರ ವಿವರಣೆಗಳನ್ನು – ನಿರ್ದೇಶನಗಳನ್ನು ಕಾಣಬಹುದು.

ಜಾಗ್ರಾವಸ್ಥಿತೋ ಬ್ರಹ್ಮ ಸ್ವಪ್ನ ವಿಷ್ಣು ಸಮಾಶ್ರಿತಃ।
ಸುಷುಪ್ತಾಯಾಂ ತಥಾ ರುದ್ರಾಸ್ತೂಯಾಮೀಶ್ವರಸ್ಥಥಾ।
ಅತೀತಾಯಾಂ ಸಮಾಖ್ಯೋಯಂ ಸದಾಶಿವಃ

ಎನ್ನುವ ಸೂತ್ರವಿದೆ. ಇಲ್ಲಿ ಬ್ರಹ್ಮ/ವಿಷ್ಣು/ರುದ್ರ/ಈಶ್ವರ/ಸದಾಶಿವ ಈ ಐದೂ ತತ್ತ್ವಗಳು(ವ್ಯಕ್ತಿಗಳಲ್ಲ) ಬ್ರಹ್ಮಾಂಡದಲ್ಲಿ ಲೀನವಾಗಿ ಏಕಾಕಾರದಲ್ಲಿಯೇ ಇರುತ್ತವೆ. ಹೀಗಾಗಿ, ಈ ಐದರಲ್ಲಿ ಯಾವುದಾದರೂ ಒಂದು ರೂಪಧಾರಣೆ ಪಡೆಯಿತು ಎಂದರೆ, ಅಲ್ಲಿ ಸೀಮಿತ ವ್ಯಾಪ್ತಿ ಸಹಜವಾಗುತ್ತದೆ. ಎಲ್ಲಿ ಸೀಮಿತತನವಿರುತ್ತದೆಯೋ ಅಲ್ಲಿ ಪಲ್ಲಟಗಳು ಬಹಳವಿರುತ್ತವೆ.

## ಶ್ರೀ ಅರವಿಂದರ
## ‘ಗೀತಾ ಪ್ರಬಂಧಗಳು’

**– ಅನು: ಜಾನ್ವಿ**

**35**

### ಎರಡನೆಯ ಸರಣಿ:
### ಅಧ್ಯಾಯ – 2
### ಜ್ಞಾನ ಮತ್ತು ಭಕ್ತಿಗಳ ಸಮನ್ವಯ (2/1)

ಗೀತೆಯು ತತ್ತ್ವಶಾಸ್ತ್ರದ ಗ್ರಂಥವಲ್ಲ. ಅನೇಕ ಉನ್ನತ ಆಧ್ಯಾತ್ಮಿಕ ವಿಚಾರಗಳು ಅದರಲ್ಲಿ ಸಾಕಷ್ಟು ಪ್ರಮಾಣದಲ್ಲಿ ಬಂದಿವೆಯಾದರೂ, ಮೂಲತಃ ಅದು ತತ್ತ್ವಶಾಸ್ತ್ರದ ಗ್ರಂಥವಲ್ಲ. ಏಕೆಂದರೆ ಇಲ್ಲಿ ಆಧ್ಯಾತ್ಮಿಕ ವಿಚಾರಗಳನ್ನು ಆಧ್ಯಾತ್ಮಿಕತೆಯ ಪ್ರತಿಪಾದನೆಯ ಏಕೈಕ ಉದ್ದೇಶದಿಂದ ಹೇಳಲಾಗಿಲ್ಲ. ಪ್ರತ್ಯಕ್ಷ ವ್ಯಾವಹಾರಿಕ ಜೀವನದಲ್ಲಿ ಅಳವಡಿಸಿಕೊಳ್ಳಬಹುದಾದ ಉದ್ದೇಶದಿಂದ ಉನ್ನತ ಸತ್ಯಗಳನ್ನು ಪ್ರಸ್ತಾಪಿಸಲಾಗಿದೆ, ವಿವರಿಸಲಾಗಿದೆಯೇ ಹೊರತು ಯಾವುದೇ ಬೌದ್ಧಿಕ, ಆಧ್ಯಾತ್ಮಿಕ ತೃಪ್ತಿಗಾಗಿ ಹೇಳಿಲ್ಲ. ನಮ್ಮ ಮರ್ತ್ಯದ ಅಪರಿಪೂರ್ಣ ಸ್ಥಿತಿಯಿಂದ ಅಮರತ್ವದೆಡೆಗೆ ಸಾಗಬಹುದಾದ ದಾರಿಯನ್ನು ತೆರೆಯುವ ಉದ್ದೇಶದಿಂದ ಉಪಯುಕ್ತ ಆಧ್ಯಾತ್ಮಿಕ ಸತ್ಯಗಳನ್ನು ಗೀತೆ ವಿವರಿಸುತ್ತದೆ. ಆದ್ದರಿಂದ ಈ ಅಧ್ಯಾಯದ ಮೊದಲ ಹದಿನಾಲ್ಕು ಶ್ಲೋಕಗಳಲ್ಲಿ ನಮಗೆ ನಿಜವಾಗಿ ಏನು ಬೇಕಾಗಿದೆ, ನಮ್ಮ ಆಧ್ಯಾತ್ಮಿಕ ಅವಶ್ಯಕತೆ ಏನು ಎಂಬುದನ್ನು ತಿಳಿಸಿ, ತಕ್ಷಣವೇ ಮುಂದಿನ ಹದಿನಾರು ಶ್ಲೋಕಗಳಲ್ಲಿ ಅವುಗಳನ್ನು ಅನುಸಂಧಾನ ಮಾಡುವ ಬಗೆಯನ್ನು ವಿವರಿಸುತ್ತದೆ. ಜ್ಞಾನ, ಕರ್ಮ ಮತ್ತು ಭಕ್ತಿ ಇವು ಮೂರನ್ನು ಸಮನ್ವಯಗೊಳಿಸುವ ಮೊದಲ ಹೆಜ್ಜೆ ಅದು; ಈ ಮೊದಲಿನ ಅಧ್ಯಾಯಗಳಲ್ಲಿ ಕರ್ಮ ಮತ್ತು ಜ್ಞಾನವನ್ನು ಸಮೀಕರಿಸುವ ಬಗೆಯನ್ನು ಹೇಳಿಯಾಗಿದ್ದರಿಂದ, ಇವು ಮೂರನ್ನೂ ಸಮನ್ವಯಗೊಳಿಸಿ ಅನುಷ್ಠಾನದಲ್ಲಿ ತರುವ ಬಗೆಯನ್ನಿಲ್ಲಿ ವಿವರಿಸಲಾಗಿದೆ.

ನಮ್ಮೆದುರು ಈಗ ಮೂರು ಶಕ್ತಿಗಳಿವೆ, ಮೂರು ಸಮರ್ಥ ತತ್ತ್ವಗಳಿವೆ. ನಾವು ಸಮಗ್ರ ವಿಕಾಸ ಹೊಂದಿ ಏನಾಗಬೇಕಾಗಿದೆನೋ ಆ ಪರಮ ಸತ್ಯ ತತ್ತ್ವ ಪುರುಷೋತ್ತಮ, ಆನಂತರ ಆತ್ಮ (ಅಕ್ಷರ ಬ್ರಹ್ಮ) ಮತ್ತು ಜೀವ ಅಥವಾ ಇದನ್ನು ಹೀಗೂ ಹೇಳಬಹುದು, ನಿರ್ವೈಯ್ಯಕ್ತಿಕ ಕೂಟಸ್ಥ ಆತ್ಮ ಮತ್ತು ಅನೇಕ ರೂಪಗಳುಳ್ಳ

ಭೂತಾತ್ಮ ಮತ್ತು ನಮ್ಮ ಆಧ್ಯಾತ್ಮಿಕ ವ್ಯಕ್ತಿತ್ವದ ಶಾಶ್ವತ ಆಧಾರವಾಗಿರುವ ವೈಯಕ್ತಿಕ ಅಸ್ಮಿತೆ. ಇದನ್ನೇ ಗೀತೆ ಮಮೈವಾಂಶಃ ಸನಾತನಃ (15/7) ಎಂದು ಹೇಳುತ್ತದೆ. ಇವು ಮೂರೂ ದೈವಿಕ ತತ್ವಗಳೇ, ಮೂರೂ ಪರ ತತ್ತ್ವಗಳೇ, ಶಕ್ತಿಗಳೇ. ಪುರುಷೋತ್ತಮ ತತ್ತ್ವವೇ ಪರಾಪ್ರಕೃತಿ, ಸರ್ವಶ್ರೇಷ್ಠ ಆಧ್ಯಾತ್ಮಿಕ ಪ್ರಕೃತಿ, ಅಜ್ಞಾನದ ಉಪಾಧಿಯು ಈ ಪ್ರಕೃತಿಗೆ ಅನ್ವಯವಾಗುವುದಿಲ್ಲ. ಔಪಚಾರಿಕ ಅಜ್ಞಾನದ ಮಿತಿಗಳಿಂದ ಈ ಪ್ರಕೃತಿಯು ಯಾವ ರೀತಿಯಿಂದಲೂ ಮರ್ಯಾದಿತ–ವಾಗಿರುವುದಿಲ್ಲ. ನಿರ್ವೈಯಕ್ತಿಕ ಕೂಟಸ್ಥ ಆತ್ಮನಲ್ಲಿ ಕೂಡ ಈ ದಿವ್ಯ ಪ್ರಕೃತಿಯೇ ಇದೆ. ಆದರೆ ಇಲ್ಲಿ ಅದು ಶಾಶ್ವತ, ನಿಶ್ಚಲ, ನಿಷ್ಕ್ರಿಯ ಸ್ಥಿತಿಯಲ್ಲಿರುತ್ತದೆ. ಸಂಪೂರ್ಣ ಸಮತೋಲನವನ್ನು ಕಾಯ್ದುಕೊಂಡಿರುವ ಸ್ಥಿತಿ ಇದು. ಮೂರನೇಯದಾಗಿ ಪ್ರವೃತ್ತಿಗಾಗಿ, ಕ್ರಿಯಾಶೀಲತೆಗಾಗಿ ಪರಾ ಪ್ರಕೃತಿಯು ಅನೇಕಾತ್ಮ ಆಧ್ಯಾತ್ಮಿಕ ವ್ಯಕ್ತಿರೂಪ ಅಥವಾ ಜೀವರೂಪ ತಾಳುತ್ತದೆ. ಆದರೆ ಪರಾ ಪ್ರಕೃತಿಯ ಆಂತರಿಕ ಸ್ವಭಾವವು ಯಾವಾಗಲೂ ಆಧ್ಯಾತ್ಮಿಕವೇ ಆಗಿರುತ್ತದೆ, ದೈವೀ ಕಾರ್ಯವೇ ಆಗಿರುತ್ತದೆ. ಪರಾತ್ಪರ ದಿವ್ಯ ಪ್ರಕೃತಿಯ, ಅದರ ಪ್ರಜ್ಞಾಯುಕ್ತ ಸಂಕಲ್ಪ, ಪರಮ ಪುರುಷನ ಇಚ್ಛಾ ಶಕ್ತಿ, ಇದೇ ಜೀವನಲ್ಲಿ ವಿವಿಧ ಆಧ್ಯಾತ್ಮಿಕ ಶಕ್ತಿಯ ರೂಪದಲ್ಲಿ ಕಾರ್ಯ ಮಾಡುತ್ತದೆ. ಜೀವನಲ್ಲಿ ಪ್ರಕಟವಾದ ವೈಯಕ್ತಿಕ ಪ್ರಕೃತಿಯೇ ಅದರ ಸ್ವಭಾವವಾಗಿರುತ್ತದೆ. ಈ ಆಧ್ಯಾತ್ಮಿಕ ಶಕ್ತಿಯ ಮೂಲಕ ನಡೆಯುವ ಎಲ್ಲ ಕಾರ್ಯಗಳು, ಅವಶ್ಯವಾಗಿ ದಿವ್ಯ ಸಂಭೂತಿಗಳೇ (ಆಗುವಿಕೆ, becommings) ಶುದ್ಧ ಆಧ್ಯಾತ್ಮಿಕ ಕ್ರಿಯೆಗಳೇ ಆಗಿರುತ್ತವೆ. ಆದ್ದರಿಂದ ಪ್ರತಿ ವೈಯಕ್ತಿಕ ಮಾನವನ ಕಾರ್ಯ ಮತ್ತು ಪ್ರಯತ್ನಗಳು ಅವಶ್ಯವಾಗಿ ತನ್ನ ಮೂಲ ಆಧ್ಯಾತ್ಮಿಕ ವ್ಯಕ್ತಿತ್ವವನ್ನು ಪಡೆಯುವ ಸಲುವಾಗಿಯೇ ಪ್ರವೃತ್ತವಾಗಿರುತ್ತವೆ ಮತ್ತು ಅವನ ಎಲ್ಲ ಕೆಲಸ ಕಾರ್ಯಗಳು ಈ ಪರಾತ್ಪರ ಶಕ್ತಿಯಿಂದಲೇ ಪ್ರವೃತ್ತವಾಗುತ್ತವೆ. ಅವನ ಆತ್ಯಂತಿಕ ಆಂತರಿಕ ಸತ್ತೆಯ ಕ್ರಿಯೆಯಿಂದಲೇ ಸಂಪನ್ನವಾಗಿದ್ದು, ಆತ್ಮ ಪರವೇ ಆಗಿರುತ್ತವೆ. ಆದ್ದರಿಂದ ಎಲ್ಲ ಕಾರ್ಯಗಳು ಕೇವಲ ನಮ್ಮ ಮಾನಸಿಕ ವಿಚಾರ, ಪ್ರಾಣಿಕ ಬಯಕೆಗಳಿಂದ ಕೂಡಿರದೇ ಪರಮಾತ್ಮನ ಸಂಕಲ್ಪದಿಂದ ಪ್ರೇರಿತವಾಗಿರಬೇಕು ಮತ್ತು ದೈವೀ ಪ್ರಕೃತಿಯ ಕ್ರಿಯಾಶೀಲ ಸಂಕೇತಗಳಾಗಿರಬೇಕೆಂಬ ಕಾಳಜಿ ನಾವು ವಹಿಸಬೇಕು.

ಈ ತ್ರಿಗುಣಗಳ ನಿಮ್ನ ಪ್ರಕೃತಿಯು ಅಜ್ಞಾನದ ಪ್ರಕೃತಿಯಾಗಿದ್ದು, ಅದರ ಕ್ರಿಯೆ ಕೂಡ ಅಜ್ಞಾನ ಜನ್ಯವೇ ಆಗಿರುವುದು; ಅದು ಮಿಶ್ರಿತವೂ, ಗೊಂದಲಮಯವೂ,

ವಿಕೃತವೂ ಆಗಿರುವುದು. ಅದು ನಿಮ್ಮ ವ್ಯಕ್ತಿತ್ವದ, ಅಹಂನ ಕ್ರಿಯೆಯಾಗಿರುವುದು. ಅದರಲ್ಲಿ ಆಧ್ಯಾತ್ಮಿಕದ ಅಂಶ ಇರುವುದಿಲ್ಲ. ವೈಯಕ್ತಿಕ ಆಧ್ಯಾತ್ಮಿಕ ವಿಕಾಸದ ಅಂಶ ಇರುವುದಿಲ್ಲ. ನಾವು ಇಂಥ ವಂಚಕ ವ್ಯಕ್ತಿತ್ವದಿಂದ ಹಿಂದೆ ಸರಿದು ನಿರ್ವೈಯಕ್ತಿಕ, ನಿರಾಕಾರ ಆತ್ಮ ಭಾವದ ಜೊತೆ ಒಂದಾಗಬೇಕು. ಹೀಗೆ ವೈಯಕ್ತಿಕ ಅಹಂ ವ್ಯಕ್ತಿತ್ವದಿಂದ ಮುಕ್ತನಾದಾಗ ಮಾತ್ರ ವ್ಯಕ್ತಿ ಮತ್ತು ಪುರುಷೋತ್ತಮ ಇವರ ನಡುವಿನ ಸಂಬಂಧದ ಸ್ಪಷ್ಟ ಅರಿವು ಉಂಟಾಗುವುದು. ಸತ್ತೆಯ ದೃಷ್ಟಿಯಿಂದ ಆಂತರಿಕವಾಗಿ ಏಕರೂಪವಾಗಿದ್ದರೂ ಸಹ, ಬಾಹ್ಯತಃ ಅವಶ್ಯವಾಗಿ ಪ್ರತ್ಯೇಕವಾಗಿರುವುದು; ವೈಯಕ್ತಿಕತೆ, ಪ್ರತ್ಯೇಕತೆ ಅವಶ್ಯವಿರುವುದರಿಂದ ಕಾರ್ಯರೂಪದಲ್ಲಿ ತಾತ್ಕಾಲಿಕ–ವಾಗಿಯಾದರೂ ಮೇಲ್ಮೈಯಲ್ಲಿ ಬೇರೆಯಾಗಿಯೇ ಕಾಣಿಸುವುದು ಪ್ರಕೃತಿ ಸಹಜವಾಗಿದೆ. ನಿಮ್ಮ ಪ್ರಕೃತಿಯಿಂದ ಮುಕ್ತರಾದಾಗ ಉನ್ನತ ಪ್ರಕೃತಿಯ ಜ್ಞಾನವಾಗುವುದು. ದೈವಿಕ, ಆಧ್ಯಾತ್ಮಿಕ ಅಸ್ತಿತ್ವದ ಸಂಪೂರ್ಣ ಜ್ಞಾನವಾಗುವುದು. ಆದ್ದರಿಂದ, ನಮ್ಮ ಅಂತರಾತ್ಮನಿಂದ (soul) ಕಾರ್ಯ ಮಾಡುವುದೆಂದರೆ ವಾಸನಾಮಯ ಆತ್ಮನಿಂದಲೇ ಮಾಡುವುದು ಎಂದೇನೂ ಅರ್ಥವಲ್ಲ. ಏಕೆಂದರೆ ವಾಸನಾಮಯ ಆತ್ಮವೇನೂ ತೀರ ಆಂತರಿಕ ಸತ್ತೆ ಅಲ್ಲ, ಅದು ಕೂಡ ನಿಮ್ಮ, ಸಹಜ ಹಾಗೂ ಮೇಲ್ಮೈ ತೋರಿಕೆಯ ಸತ್ತೆಯೇ ಆಗಿರುವುದು. ಆಂತರಿಕ ಸ್ವಭಾವದನುಗುಣವಾಗಿ ಕಾರ್ಯ ಮಾಡುವುದೆಂದರೆ, ಅಹಂ ವ್ಯಕ್ತಿತ್ವದ ಆವೇಶ, ಆವೇಗದಿಂದಲೇ ಕಾರ್ಯಮಾಡುವುದೆಂದು ಭಾವಿಸಬೇಕಾಗಿಲ್ಲ. ಕೇವಲ ನಿರಾಸಕ್ತಿಯಿಂದ, ಪಾಪ ಪುಣ್ಯಗಳ ಸಹಜ, ಸ್ವಾಭಾವಿಕ ಪ್ರವೃತ್ತಿ ಅಥವಾ ತ್ರಿಗುಣಗಳ ಸ್ವ–ಸ್ವಭಾವದ ಮೂಲಕ ಕೆಲಸ ಮಾಡುವುದು ಎಂದು ಕೂಡ ಅರ್ಥವಲ್ಲ. ಆವೇಶ, ಆವೇಗಗಳಿಗೆ ಬಲಿಯಾಗುವುದು ಅಥವಾ ಅಂತರಂಗದ ಪಾಪ–ಪುಣ್ಯಗಳ ಪರಿಕಲ್ಪನೆಯಿಂದ ಪ್ರೇರಿತವಾದ ಆಧ್ಯಾತ್ಮಿಕವಾದ ರೀತಿಯಲ್ಲಿ ಆಧ್ಯಾತ್ಮಿಕ ಶಾಂತಿ ಹಾಗೂ ನಿಷ್ಪಕ್ಷಪಾತದಿಂದ ಕೆಲಸ ಮಾಡುವುದು ಅಂತಲೂ ಅರ್ಥವಲ್ಲ. ಪ್ರತಿ ವ್ಯಕ್ತಿಯು ಪುರುಷೋತ್ತಮನ ಸಂಕಲ್ಪ ಹಾಗೂ ಕಾರ್ಯಗಳ ಸಮರ್ಥ ವಾಹಕನಾಗಿದ್ದಾನೆ, ಮಾಧ್ಯಮನಾಗಿದ್ದಾನೆ, ಅವನ ಪ್ರತ್ಯಕ್ಷ ಹಾಗೂ ವ್ಯಾವಹಾರಿಕ ಶಕ್ತಿಯ ದ್ಯೋತಕನಾಗಿದ್ದಾನೆ ಎಂಬ ಭಾವದಿಂದ ಎಲ್ಲ ವಿಧದ ಕೆಲಸಗಳನ್ನು ಮಾಡುವುದು ಎಂದು ಕೂಡ ಅರ್ಥವಲ್ಲ.

ಗೀತೆಯು ಆರಂಭದಿಂದಲೇ ಸ್ಪಷ್ಟಪಡಿಸುವ ಅಭಿಪ್ರಾಯವೇನೆಂದರೆ ದಿವ್ಯ ಜನ್ಮದ ಮೂಲ ಹಾಗೂ ಏಕೈಕ ನಿಯಮ ಏನೆಂದರೆ ರಾಜಸ ವಾಸನೆ ಹಾಗೂ

ಅದರ ಸಂತಾನ ಅಥವಾ ಅದರ ಎಲ್ಲ ರೀತಿಯ ಚಟುವಟಿಕೆಗಳನ್ನು ಮೂಲತಃ ನಾಶಪಡಿಸಬೇಕೆಂದು ಹೇಳುತ್ತದೆ. ಅಂದಾಗ ಮಾತ್ರ ಪಾಪ ಕಾರ್ಯಗಳ ಸಂತತಿ ನಷ್ಟವಾಗುವುದು. ಪಾಪ ಕರ್ಮವೆನ್ನುವುದು ನಿಮ್ನ ಪ್ರಕೃತಿಯ ಪ್ರವೃತ್ತಿಯಾಗಿದೆ, ತನ್ನ ಅಜ್ಞಾನದ, ಅವಿದ್ಯೆಯ, ಜಡ ಅಥವಾ ಪ್ರಬಲ ರಾಜಸಿಕ ಹಾಗೂ ತಾಮಸಿಕ ಪ್ರವೃತ್ತಿಗಳ ತೃಪ್ತಿಗಾಗಿ ಮಾಡುವ ಕ್ರಿಯೆಯಾಗಿದೆ. ಇದು ಉನ್ನತ ಆದರ್ಶವಾದ ಸ್ವಯಂ–ನಿಯಂತ್ರಣ ಅಥವಾ ನಿಗ್ರಹ, ಸ್ವ–ಪ್ರಭುತ್ವ ಇವುಗಳಿಗೆ ಪ್ರತಿರೋಧಕ ಗುಣಕಾರ್ಯವಾಗಿದೆ. ಈ ವಿಧವಾಗಿ ನಿಮ್ನ ಪ್ರಕೃತಿಯ ಪ್ರಭಾವಗಳಿಂದ, ಒತ್ತಡದಿಂದ ಪಾರಾಗಬೇಕಾದರೆ ನಾವು ಅದೇ ಪ್ರಕೃತಿಯ ಶ್ರೇಷ್ಠ, ಉನ್ನತ ಸ್ತರಕ್ಕೆ ಏರಬೇಕು. ಅಂದರೆ ಸಾತ್ವಿಕ ಗುಣಕ್ಕೆ, ಪ್ರವೃತ್ತಿಗೆ ಏರಿ ನಿಲ್ಲಬೇಕು. ಸಾತ್ವಿಕ ಗುಣವು ಸಾಮರಸ್ಯದ ಜ್ಞಾನದ ಬೆಳಕಿಗಾಗಿ ಹಾಗೂ ಅದರ ಸಮರ್ಪಕ ಕಾರ್ಯಕ್ಕಾಗಿ ಹಂಬಲಿಸುವ ತತ್ತ್ವವಾಗಿದೆ. ನಮ್ಮೊಳಗಿರುವ ಆತ್ಮ ಅಥವಾ ಪುರುಷನು ತ್ರಿಗುಣಗಳ ಎಲ್ಲ ಧರ್ಮ ಹಾಗೂ ಕಾರ್ಯಗಳಿಗೆ ಸಮ್ಮತಿ ನೀಡಿರುತ್ತಾನೆಂಬುದು ನಿಜ; ಈಗ ಆ ಪುರುಷನೇ ಸಾತ್ವಿಕ ಗುಣದ ಕಾರ್ಯಗಳಿಗೆ ಸಮ್ಮತಿ ನೀಡಬೇಕು, ಅದೇ ನಮ್ಮ ವ್ಯಕ್ತಿತ್ವವನ್ನು ರೂಪಿಸುವ ಶಕ್ತಿಯಾಗಿ ನಿಲ್ಲಲು ಅವಕಾಶ ಮಾಡಿಕೊಡಬೇಕು. ಅಲ್ಲದೇ ರಾಜಸಿಕ ಹಾಗೂ ತಾಮಸಿಕ ಪ್ರವೃತ್ತಿಗಳಿಗೆ ಸೊಪ್ಪು ಹಾಕಬಾರದು. ನಿಜವಾಗಿ ಎಲ್ಲ ನೈತಿಕ ಸಂಸ್ಕಾರಗಳನ್ನು ವಿಧಿಸುವ ಶಾಸ್ತ್ರೋಪದೇಶದ ಸಾರ ಇದುವೇ ಆಗಿದೆ. ನಮ್ಮೊಳಗಿರುವ ಕೆಳ ಸ್ತರದ ಮತ್ತು ಅವ್ಯವಸ್ಥಿತವಾಗಿರುವ ಪ್ರಕೃತಿಯು ಉನ್ನತ ಹಂತಕ್ಕೆ, ಉನ್ನತವಾದ ಮತ್ತು ವ್ಯವಸ್ಥಿತವಾದ ಸ್ತರಕ್ಕೆ ಏರ ಬೇಕಾದರೆ ಇದೇ ನಿಯಮ ಅನ್ವಯವಾಗುವುದು. ಕೇವಲ ಆವೇಶದಲ್ಲಿ, ಅಜ್ಞಾನದಲ್ಲಿ ಕೆಲಸ ಮಾಡುವುದರಿಂದ ನೋವು, ದುಃಖ, ಅಶಾಂತಿ ಹೆಚ್ಚುವುದೇ ವಿನಃ ಹೆಚ್ಚಿನದೇನೂ ಸಾಧ್ಯವಾಗುವುದಿಲ್ಲ. ಜ್ಞಾನ, ಪ್ರದೀಪ್ತ ಸಂಕಲ್ಪ ಹಾಗೂ ಆಂತರಿಕ ಸಮತೆ, ಶಾಂತಿ ಮತ್ತು ಆನಂದಗಳಿಂದ ಮಾತ್ರ ವಿಕಾಸ ಹಾಗೂ ಉನ್ನತ ಹಂತಕ್ಕೇರುವ ಸಾಧ್ಯತೆ ಇರುವುದು. ನಾವು ಈ ತ್ರಿಗುಣಗಳನ್ನು ಮೀರಿ ಹೋಗುವುದು ಕಠಿಣ, ಮೊದಲು ನಮ್ಮಲ್ಲಿ ಉನ್ನತವಾದ ಸತ್ವ ಗುಣವನ್ನು ಸಂಪೂರ್ಣವಾಗಿ ಬೆಳೆಸಿಕೊಳ್ಳದ ಹೊರತು ಇದು ಸಾಧ್ಯವಾಗದು.

ಪುರುಷೋತ್ತಮನಾದ ಶ್ರೀಕೃಷ್ಣ ಹೇಳುತ್ತಾನೆ "ದುರಾಚಾರಿಗಳು, ದುಷ್ಕೃತಿಗಳು, ಮೂಢರು, ನರಾಧಮರು, ಮಾಯೆಯಿಂದ ಗೊಂದಲಕ್ಕೊಳಗಾಗದವರು ನನ್ನ ಬಳಿ ಬರುವುದಿಲ್ಲ, ಅವರು ನನ್ನನ್ನು ಹೊಂದುವುದಿಲ್ಲ" (7/15) ಅಹಂಭಾವದಿಂದ

ಅಭಿಭೂತರಾದ ಜನರು ಭಗವಂತನನ್ನು ಕಾಣಲಾರರು. ಗೊಂದಲಕ್ಕೆ ಒಳಗಾಗುವು–ದೆಂದರೆ ಅಹಂಭಾವದಿಂದ ಅಕ್ರಾಂತರಾಗುವುದು ಅಂತಲೇ ಅರ್ಥ. ದುರಾಚಾರಿಗಳು, ದುಷ್ಟರು ಭಗವಂತನ ಬಳಿ ಹೋಗಲಾರರು, ಏಕೆಂದರೆ ಅವರು ಸದಾ ತಮ್ಮ ಅಹಂಕಾರದ ತೃಪ್ತಿಗಾಗಿಯೇ ಕೆಲಸ ಮಾಡುತ್ತಾರೆ. ಸದಾ ಕೆಳ ಸ್ತರದಲ್ಲಿಯೇ ವ್ಯವಹರಿಸುತ್ತಾರೆ; ಅಂಥವರ ನಿಜವಾದ ದೇವರು ಅಂದರೆ ಅವರ ಅಹಂಕಾರ ಆಗಿರುತ್ತದೆ. ಅಂಥವರ ಮನೋ ಬುದ್ಧಿ ಸಂಕಲ್ಪಗಳು ತ್ರಿಗುಣಗಳ ಮಾಯೆಯಿಂದ ಮುಚ್ಚಿಹೋಗಿ, ಅಂತರಾತ್ಮನ ಉಪಕರಣವಾಗುವ ಬದಲು ತಮ್ಮ ತಮ್ಮ ಕ್ಷುಲ್ಲಕ ಆಶೆಗಳ ಗುಲಾಮರಂತಾಗಿರುತ್ತಾರೆ ಮತ್ತು ಈ ದಾಸ್ಯವು ಅವರ ಸ್ವ–ಇಚ್ಛೆಯಿಂದಲೇ ಸ್ವೀಕೃತವಾಗಿರುತ್ತದೆ. ಅಂಥವರಿಗೆ ತಮ್ಮ ನಿಮ್ನ ಅಥವಾ ಕೆಳಸ್ತರದ ಸ್ವಭಾವವೊಂದೇ ಪ್ರೇರಣಾದಾಯಕವಾಗಿರುತ್ತದೆ, ತಮ್ಮೊಳಗಿರುವ ಭಗವಂತನಾಗಲಿ ತಮ್ಮ ಅಸ್ತಿತ್ವದ ಪರಮೋಚ್ಚ ಸತ್ತೆಯಾಗಲಿ ಕಾಣುವುದಿಲ್ಲ. ಸಮಸ್ತ ಜಗತ್ತೇ ತನ್ನ ಇಚ್ಛೆಯ ಪೂರ್ತಿಗಾಗಿ ಇದೆ ಎಂಬ ಅಹಂ ಪೂರಿತ ಭಾವದಿಂದಲೇ ನೋಡುವುದರಿಂದ ಅವರಿಗೆ ತಮ್ಮ ಅಹಂ ಮತ್ತು ಕ್ಷುಲ್ಲಕ ಬಯಕೆಗಳ ಹೊರತಾಗಿ ಬೇರೆ ಏನೂ ಕಾಣುವುದೇ ಇಲ್ಲ. ಕೇವಲ ಅಹಂ ಹಾಗೂ ಬಯಕೆಗಳ ಪೂರ್ತಿಗಾಗಿ ಜೀವಿಸುವುದು, ಬೇರೆ ಯಾವ ಉನ್ನತ ಉದ್ದೇಶ, ಆದರ್ಶ, ಪ್ರಕೃತಿಗಾಗಿ ಅಭೀಪ್ಸೆ ಪಡದಿರುವುದು ಇದೆಲ್ಲ ಆಸುರೀ ಸ್ವಭಾವದ ಲಕ್ಷಣವಾಗಿದೆ. ಉನ್ನತ ಸ್ಥಿತಿಗೆ ಏರಬೇಕೆನ್ನುವಾಗ ಮೊದಲ ಹೆಜ್ಜೆ ಏನೆಂದರೆ ಅಂಥ ಪ್ರಕೃತಿಗಾಗಿ ಹಂಬಲಿಸಬೇಕು, ಅಭೀಪ್ಸೆ ಪಡಬೇಕು. ಇದು ಅತ್ಯಂತ ಅಗತ್ಯವಾದ ಮೊದಲ ನಿಯಮ, ಕ್ಷುಲ್ಲಕ ಆಶೆ ಬಯಕೆಗಳ ಆಡಳಿತಕ್ಕಿಂತ ಹಿರಿದಾದ ಆಡಳಿತಕ್ಕೆ ವಿಧೇಯರಾಗಿರಬೇಕು, ಅಹಂಕಾರಕ್ಕಿಂತ ಭಿನ್ನವಾದ, ಉನ್ನತವಾದ, ಉದಾತ್ತವಾದ ದೈವಕ್ಕೆ ಶರಣು ಹೋಗಬೇಕು. ಅಹಂ ಅಥವಾ ಭವ್ಯವಾಗಿ ಬಿಂಬಿಸಲ್ಪಟ್ಟ ಅಹಂದಿಂದ ಮೇಲಕ್ಕೇರಿ ಯೋಗ್ಯ ಕರ್ಮ, ಯೋಗ್ಯ ಕರ್ತೃವಾಗಿ ಬೆಳೆಯಬೇಕು. ಆದರೆ ಕೇವಲ ಇಷ್ಟು ಮಾತ್ರದಿಂದಲೇ ಎಲ್ಲ ಮುಗಿಯಿತು ಎಂದು ಅರ್ಥವಲ್ಲ; ಏಕೆಂದರೆ ಸಾತ್ವಿಕನಾದ ವ್ಯಕ್ತಿಯೂ ಕೂಡ ತ್ರಿಗುಣಗಳ ಮಾಯೆಯ ಮೂಲಕವೇ ಪ್ರವೃತ್ತನಾಗಿರುತ್ತಾನೆ. ಅವನಲ್ಲಿ ಇಚ್ಛಾ ದ್ವೇಷಗಳು ಇನ್ನೂ ಇರುತ್ತವೆ, ಪೂರ್ತಿ ಕರಗಿ ಹೋಗಿರುವುದಿಲ್ಲ. ಅವನು ತ್ರಿಗುಣಗಳ ವರ್ತುಳದಲ್ಲೇ ಸುತ್ತುತ್ತಿರುತ್ತಾನೆ. ಅವನಿಗಿನ್ನೂ ಉನ್ನತೋನ್ನತ ಶ್ರೇಷ್ಠ ವಿಶ್ವಾತೀತದ ಸಮಗ್ರ ಜ್ಞಾನ ಇರುವುದಿಲ್ಲ. ಆದರೂ ಸಹ ತನ್ನ ನಿರಂತರ ಹಾಗೂ ಶ್ರದ್ಧಾಪೂರ್ವಕ ಅಭೀಪ್ಸೆಯಿಂದಾಗಿ, ನೈತಿಕ ಗುರಿಯನ್ನೇ ಸಾಧನವನ್ನಾಗಿ

ಮಾಡಿಕೊಂಡು ಜೀವಿಸುವುದರಿಂದ ಅವನು ಪಾಪ ಕರ್ಮಗಳ ಪ್ರವೃತ್ತಿಯಿಂದ ದೂರವಾಗುತ್ತಾನೆ, ಪಾಪ ಕರ್ಮಗಳ ಪ್ರವೃತ್ತಿಯು ಹೆಚ್ಚಾಗಿ ರಾಜಸಿಕ ಆಶೆ, ಆವೇಶಗಳಿಂದ ಬಂದಿದ್ದು ಇವು ಅವನಿಂದ ದೂರಾಗುತ್ತವೆ, ಅವನು ನಿಮ್ನ ಸ್ತರದ ಪ್ರವೃತ್ತಿಗಳಿಂದ ಮುಕ್ತನಾಗುತ್ತಾನೆ. ಅವನು ಪಾಪ ಕರ್ಮಗಳನ್ನೂ ಮಾಡುವುದಿಲ್ಲ, ಅಷ್ಟರ ಮಟ್ಟಿಗೆ ಅವನ ಪ್ರಕೃತಿಯು ಶುದ್ಧೀಕರಣಗೊಂಡು ಮಾಯೆಯ ವಲಯದಿಂದ ಪಾರಾಗಿರುತ್ತದೆ. ಕೇವಲ ಸದ್ವರ್ತನೆಯಿಂದಲೇ ಮಾನವನು ಪರಾತ್ಪರನನ್ನು ತಲುಪಲಾರ, ಆದರೆ ಸದಾಚಾರದಿಂದ ಆಂತರಿಕ ಪುಣ್ಯವೆಂದರೆ ಸಾತ್ವಿಕವಾದ ಸ್ಪಷ್ಟತೆ ಇರಬೇಕು, ವಿಚಾರದಲ್ಲಿ ಭಾವನೆಯಲ್ಲಿ, ಕಲ್ಪನೆಯಲ್ಲಿ, ಸ್ವಭಾವದಲ್ಲಿ, ಉದ್ದೇಶದಲ್ಲಿ ಹಾಗೂ ಆಚರಣೆಯಲ್ಲಿ ಕೂಡ ಸದ್ ವೃತ್ತಿ ಇರಬೇಕೇ ವಿನಃ ಕೇವಲ ಸಾಂಪ್ರಾದಾಯಿಕ ಅಥವಾ ಸಾಮಾಜಿಕ ದೃಷ್ಟಿಕೋನದ ಪುಣ್ಯಕರ್ಮ ಅಲ್ಲ. ಪರಾತ್ಪರನನ್ನು ಪಡೆಯಲು ಬೇಕಾದ ಪ್ರಥಮ ಅವಶ್ಯಕತೆಯನ್ನು, ಅರ್ಹತೆಯನ್ನು ಗಳಿಸುತ್ತಾನೆ, ಅಧಿಕಾರವನ್ನು ಅರ್ಜಿಸಿಕೊಳ್ಳುತ್ತಾನೆ. ಒರಟು ರಾಜಸಿಕ ಹಾಗೂ ಜಡ ತಾಮಸಿಕ ಅಹಂನ್ನು ತ್ಯಜಿಸುವುದು ಸುಲಭದ ಮಾತಲ್ಲ. ಅದು ನಮ್ಮ ನಿಯಂತ್ರಣಕ್ಕೆ ಬೇಗ ಸಿಕ್ಕುವುದಿಲ್ಲ. ಸಾತ್ವಿಕ ಅಹಂನ್ನು ನಿಯಂತ್ರಿಸುವುದು, ವಶದಲ್ಲಿರಿಸಿಕೊಳ್ಳುವುದು ಅದರಷ್ಟು ಕಠಿಣವಲ್ಲ. ಕೊನೆಗೆ ಅದು ಸೂಕ್ಷ್ಮವಾಗುತ್ತ ಹೋಗಿ, ತನ್ನನ್ನೇ ಜ್ಞಾನದ ಬೆಳಕಿಗೆ ಒಡ್ಡಿಕೊಂಡಾಗ ಅದನ್ನು ಮಿರಿ ಹೋಗುವುದಾಗಲಿ, ಪರಿವರ್ತಿಸುವುದಾಗಲಿ ಅಥವಾ ಪೂರ್ತಿ ನಾಶಪಡಿಸುವುದಾಗಲಿ ಸಾಧ್ಯವಾಗುವುದು.

ಆದ್ದರಿಂದ ಮಾನವನು ಮೊದಲು ಸದಾಚಾರಿಯೂ, ನೈತಿಕನೂ ಆಗಿರಬೇಕು, ಆನಂತರ ಅದರಾಚೆಗೆ, ಅಂದರೆ ನೈತಿಕತೆಯನ್ನು ದಾಟಿ ಆಚೆಗೆ ಏರುವ ಪ್ರಯತ್ನ ಮಾಡಬೇಕು. ನೈತಿಕ ನಿಯಮಗಳನ್ನು ಮೀರಿ, ಹಿರಿದಾದ, ವಿಶಾಲವಾದ ಆಧ್ಯಾತ್ಮಿಕ ಪ್ರಕೃತಿಯ ಬೆಳಕಿನೆಡೆಗೆ ಹೋಗಲು ಯತ್ನಿಸಬೇಕು. ಅಂದರೆ ಆಗ ಅವನು ದ್ವಂದ್ವಗಳನ್ನು ಮೀರಿ, ದ್ವಂದ್ವಗಳ ಬಲೆಯಿಂದ ಭ್ರಮೆಯಿಂದ ಪಾರಾಗಿ ಹೋಗಲು ಸಾಧ್ಯವಾಗುವುದು. ಆಗ ಅವನು ತನ್ನ ವೈಯಕ್ತಿಕ ಸುಖ ಸಂತೋಷಗಳಿಗಾಗಿಯೇ ದುಡಿಯುವುದಿಲ್ಲ ಅಥವಾ ತನ್ನ ವೈಯಕ್ತಿಕ ನೋವು ದುಃಖಗಳನ್ನು ಮರೆತೇ ಬಿಡುವುನು ಎಂದೂ ಅರ್ಥವಲ್ಲ. ಇಷ್ಟೇ, ಈ ವೈಯಕ್ತಿಕ ಸುಖ ಸಂತೋಷ ಅಥವಾ ವೈಯಕ್ತಿಕ ನೋವು, ಯಾತನೆ ಅವನನ್ನು ಬಾಧಿಸುವುದಿಲ್ಲ. “ನಾನು ಸದಾಚಾರಿ ಅಥವಾ ನಾನು ಪಾಪಿಷ್ಠ” ಎಂದೇನೂ

ಅವನು ಹೇಳುವುದಿಲ್ಲ. ಬದಲಾಗಿ ತನ್ನದೇ ಆದ ರೀತಿಯಲ್ಲಿ ಉನ್ನತ ಆಧ್ಯಾತ್ಮಿಕ ಪ್ರಕೃತಿಯಲ್ಲಿ ಕೆಲಸ ಮಾಡುತ್ತ ಹೋಗುತ್ತಾನೆ. ಅವನು ಎಲ್ಲವನ್ನು ದೈವೇಚ್ಛೆ ಎಂದೇ ಮಾಡುತ್ತಾನೆ, ಎಲ್ಲವನ್ನೂ ಎಲ್ಲರ, ವಿಶ್ವದ ಕಲ್ಯಾಣಕ್ಕಾಗಿಯೇ ಮಾಡುತ್ತಾನೆ. ನಾವೀಗಾಗಲೇ ನೋಡಿದಂತೆ, ಈ ಸ್ಥಿತಿ ಪ್ರಾಪ್ತಿಯಾಗಬೇಕಾದರೆ ಆತ್ಮ ಜ್ಞಾನ, ಸಮತೆ, ನಿಷ್ಪಕ್ಷಪಾತತನ ಇವು ಪ್ರಾಥಮಿಕವಾಗಿ ಬೇಕೇ ಬೇಕು. ಇದೇ ನಿಜವಾದ ದಾರಿ, ಇದೊಂದೇ ಏಕೈಕ ದಾರಿ, ಜ್ಞಾನ ಮತ್ತು ಕರ್ಮಗಳನ್ನು ಆಧ್ಯಾತ್ಮಿಕತೆ ಮತ್ತು ಪ್ರಾಪಂಚಿಕ ವ್ಯವಹಾರ, ನಿರಂತರವೂ ನಿಶ್ಚಲವಾಗಿರುವ ಶಾಂತಿ ಇವೆಲ್ಲವನ್ನೂ ಸಮೀಕರಿಸಲು ಇರುವ ದಾರಿ ಎಂದರೆ ಇದೊಂದೇ. ಕಾಲರಹಿತ ಆತ್ಮದ ಅಚಲ ಶಾಂತಿ ಮತ್ತು ಪರಾಪ್ರಕೃತಿಯ ವ್ಯಾವಹಾರಿಕ ಶಕ್ತಿಯ ನಿರಂತರ ಚಲನೆ ಇವುಗಳನ್ನು ಒಂದಾಗಿಸಲು ಇದೊಂದೇ ಮಾರ್ಗವಿದೆ ಮತ್ತು ಇವೆರಡನ್ನೂ ಒಂದುಗೂಡಿಸುವುದು ಆಧ್ಯಾತ್ಮಿಕವಾಗಿ ಅತ್ಯಂತ ಅವಶ್ಯವಿದೆ. ಆದರೆ ಇಲ್ಲಿ ಗೀತೆಯು ಬೇರೊಂದು ಮತ್ತು ಅತಿ ಹೆಚ್ಚು ಮಹತ್ವದ ಅಗತ್ಯ ಕೆಲಸ ಮಾಡಲು ಹೇಳುತ್ತದೆ. ಜ್ಞಾನ ಯೋಗದೊಂದಿಗೆ ಏಕೀಕರಿಸಿ ತನ್ನ ಕರ್ಮಗಳನ್ನು ನೆರವೇರಿಸುವ ಕರ್ಮ ಯೋಗಿಯು ಇನ್ನೊಂದು ಮಹತ್ವದ ಕೆಲಸವನ್ನು ಮಾಡಲೇ ಬೇಕಾಗುತ್ತದೆ. ಕೇವಲ ಜ್ಞಾನ ಮತ್ತು ಕರ್ಮಗಳನ್ನು ಮಾತ್ರ ಜೋಡಿಸಿದರೆ ಸಾಲದು, ಅದಷ್ಟೇ ಅವನ ಸಾಧನೆ ಅಲ್ಲ. ಭಗವಂತನಿಗಾಗಿ ಉತ್ಕಟವಾದ ಪ್ರೇಮ ಮತ್ತು ಭಕ್ತಿ ಬೇಕೇ ಬೇಕು. ಆತ್ಮವು ಭಗವಂತನಿಗಾಗಿ ಉತ್ಕಟ ಪ್ರೇಮ, ಆರಾಧನೆ, ಭಕ್ತಿ ಹೊಂದಿರಲೇಬೇಕು. ಇದು ಅತ್ಯಂತ ಅವಶ್ಯ ಎಂದು ಗೀತೆ ಹೇಳುತ್ತದೆ. ಇದುವರೆಗೆ ಈ ಸಂಗತಿಯನ್ನು ಸ್ಪಷ್ಟವಾಗಿ ಹೇಳದೇ ಹೋದರೂ, ಸೂಚ್ಯವಾಗಿ ಅಂತೂ ಹೇಳಿದೆ. ಯೋಗದ ಮೂಲಕ ತನ್ನೆಲ್ಲ ಕೆಲಸಗಳನ್ನು, ಚಟುವಟಿಕೆಗಳನ್ನು ನಮ್ಮ ಸತ್ತೆಯ ಪರಮ ಪ್ರಭುವಾದ ಭಗವಂತನಿಗೆ ಅರ್ಪಿಸಬೇಕು. ತನ್ನೆಲ್ಲ ಸಾಮಾನ್ಯ ವಾಸನಾಯುಕ್ತ ಕರ್ಮಗಳನ್ನು ತ್ಯಜಿಸಬೇಕು, ಇದೊಂದು ಯಜ್ಞವೆಂದು ಭಾವಿಸಬೇಕು. ಕೇವಲ ನಿಷ್ಪಕ್ಷಪಾತಿಯಾದ, ನಿರ್ಗುಣನಾದ ಪರಮೇಶ್ವರನಿಗೆ ಇದನ್ನು ಅರ್ಪಿಸಬೇಕು. ಪರಮೇಶ್ವರನು ನಮ್ಮೊಳಗಿನ ನಿರ್ವಿಕಾರ ಸತ್ತೆಯ ಮೂಲಕವೇ ಕೆಲಸ ಮಾಡುತ್ತಾನೆ. ಆದ್ದರಿಂದ ನಮ್ಮ ಸತ್ತೆಯ ನಿರ್ವಿಕಾರ, ನಿಷ್ಪಕ್ಷಪಾತ ವ್ಯಕ್ತಿತ್ವದ ಮೂಲಕವೇ ಇದನ್ನು ಅರ್ಪಣ ಮಾಡಬೇಕು. ಇಲ್ಲಿಯವರೆಗೆ ಏನನ್ನು ಸೂಚ್ಯವಾಗಿ ಹೇಳಿತ್ತೋ ಅದನ್ನೀಗ ಗೀತೆಯು ಅತಿ ಸ್ಪಷ್ಟವಾಗಿ ಮತ್ತು ಅವಶ್ಯವಾದ ಕ್ರಿಯೆ ಎಂಬುದನ್ನು ವಿವರಿಸುತ್ತದೆ.

ಸಾಮಾನ್ಯ ಪ್ರಕೃತಿಯಿಂದ, ಅದರ ಚಲನೆಗಳಿಂದ ಮುಕ್ತರಾಗಿ ದಿವ್ಯತ್ವದೆಡೆಗೆ, ಆಧ್ಯಾತ್ಮಿಕ ವ್ಯಕ್ತತ್ವದೆಡೆಗೆ ಬೆಳೆಯಲು ನಾವು ಮೂರು ಪರಸ್ಪರ ಸಂಬದ್ಧಿತ ದಾರಿಗಳನ್ನು ಕಂಡುಕೊಂಡಿದ್ದೇವೆ. “ಇಷ್ಟಾನಿಷ್ಟಗಳ ದ್ವಂದ್ವ ಭಾವದಿಂದ, ಅವುಗಳ ಭ್ರಮಾವಲಯದಿಂದ ಆವೃತವಾಗಿ ಸೃಷ್ಟಿಯ ಸಮಸ್ತ ಜೀವಿಗಳು ಗೊಂದಲಕ್ಕೀಡಾಗಿವೆ, ಅವುಗಳ ಬುದ್ಧಿ ಸಂಮೂಢವಾಗಿ ಹೋಗಿದೆ” (7/27) ಎಂದು ಗೀತೆ ಹೇಳುತ್ತದೆ. ಈ ಅಜ್ಞಾನ, ಅವಿದ್ಯೆ, ಅಹಂಕಾರಗಳಿಂದಾಗಿ ನಮ್ಮ ಬುದ್ಧಿಯು ಎಲ್ಲೆಲ್ಲೂ ವ್ಯಾಪಿಸಿರುವ ಭಗವಂತನನ್ನು ಗುರುತಿಸುವಲ್ಲಿ ವಿಫಲವಾಗಿದೆ. ಅದು ಕೇವಲ ಪ್ರಕೃತಿಯ ದ್ವಂದ್ವಗಳನ್ನೇ ನೋಡುತ್ತ ತನ್ನ ಪ್ರತ್ಯೇಕ ವೈಯಕ್ತಿಕ ಅಸ್ತಿತ್ವವನ್ನೇ ಕಾಣುತ್ತ, ಅದರ ಬೇಕು–ಬೇಡಗಳನ್ನಷ್ಟೇ ಗಮನಿಸುತ್ತ ಬಂದಿರುವುದರಿಂದ ಈ ಅನರ್ಥ ಸಂಭವಿಸಿದೆ. ಇದರಿಂದ ಪಾರಾಗಬೇಕಾದರೆ ನಾವು ಮಾಡಬೇಕಾದ ಮೊದಲ ಕೆಲಸವೇನೆಂದರೆ ಪ್ರಾಣಿಕ ಅಹಂಕಾರದ ಪಾಪ ಪ್ರವೃತ್ತಿಯನ್ನು ತ್ಯಜಿಸಬೇಕು, ಪ್ರಾಣಿಕದ ಆವೇಗವನ್ನು ನಿರಾಕರಿಸಬೇಕು, ರಾಜಸಿಕ ಸ್ವಭಾವದ ಆತುರ ಮತ್ತು ಸದಾ ಏನನ್ನಾದರೂ ಬಯಸುತ್ತಲೇ ಇರುವ ಆಶೆಯ ಸ್ವಭಾವವನ್ನು ನಿವಾರಿಸಿಕೊಳ್ಳಬೇಕು ಮತ್ತು ಇದನ್ನು ಸಾತ್ವಿಕ ತುಡಿತದ ನೈತಿಕ ಸತ್ತೆ ಮೂಲಕ ನಿಧಾನವಾಗಿ ಆದರೆ ನಿರಂತರ ಪ್ರಯತ್ನದ ಮೂಲಕ ಸಾಧಿಸಬೇಕು. ಇದನ್ನು ಸಾಧಿಸಿದಾಗ “ಏಷಾಂತು ಅಂತಗತಂ ಪಾಪಂ ಜನಾನಂ ಪುಣ್ಯ ಕರ್ಮಣಾಮ್” (7/28) ಒಂದು ಹಂತದಲ್ಲಿ ಸಾತ್ವಿಕ ಧರ್ಮದ ನಿರಂತರ ಕಾರ್ಯಾಚರಣೆಯಿಂದ ಹಿರಿದಾದ ಶಾಂತಿ, ಸಮತೆ ಮತ್ತು ಇವುಗಳಾಚೆಗೆ ತ್ರಿಗುಣಗಳನ್ನು ಮೀರಿ ಹೋಗುವ ಸಾಮರ್ಥ್ಯ ಬರುವುದು. ದ್ವಂದ್ವಗಳಿಂದ ಸಂಪೂರ್ಣ ಮುಕ್ತರಾಗಿ, ನಿರ್ವಿಕಾರರಾಗಿ, ಸಮತೆಯನ್ನು ಸಿದ್ಧಿಸಿಕೊಂಡು ಅಚಲನು ಸ್ಥಿರನು ಆಗಿರುವ ಪರಮಾತ್ಮನ ಜೊತೆ ಹಾಗೂ ಅವನ ಪ್ರಕಟನೆಯಾಗಿರುವ ವಿಶ್ವದ ಜೊತೆ ಒಂದಾಗಿ ಬೆರೆಯುವುದು ಅತ್ಯಂತ ಅವಶ್ಯವಾಗಿದೆ. ಈ ರೀತಿ ಬೆಳೆಯುವುದರಿಂದ ಮಾತ್ರ ನಮ್ಮ ಪರಿಶುದ್ಧತೆ ಸಿದ್ಧಿಸುವುದು. ಈ ರೀತಿ ಬೆಳೆಯುವಾಗ ಅಥವಾ ಆತ್ಮಜ್ಞಾನವನ್ನು ಸಂಪಾದಿಸಿಕೊಳ್ಳುವಾಗ ನಮ್ಮ ಭಕ್ತಿ ಕೂಡ ಬೆಳೆಯಬೇಕು. ಏಕೆಂದರೆ ನಾವು ಸಮತೆಯ ವಿಶಾಲವಾದ ಆಧಾರವನ್ನು ಕಂಡು ಕೊಳ್ಳಬೇಕಾಗಿದೆ, ಪರಮೇಶ್ವರನಿಗೆ ಯಜ್ಞಾರ್ಥವಾಗಿ ಎಲ್ಲವನ್ನೂ ಸಮರ್ಪಿಸಿಕೊಳ್ಳಬೇಕಾಗಿದೆ. ನಾವಿನ್ನು ಸರಿಯಾಗಿ ತಿಳಿಯದಿರುವ ಆ ಭಗವಂತನಿಗೆ ನಮ್ಮನ್ನು ಸಂಪೂರ್ಣವಾಗಿ

ಸಮರ್ಪಿಸಿಕೊಳ್ಳಬೇಕಾಗಿದೆ. ನಾವು ಭಗವಂತನನ್ನು ಇಂದಿಲ್ಲ ನಾಳೆಯಾದರೂ ಅವಶ್ಯವಾಗಿ ಸಮಗ್ರವಾಗಿ ತಿಳಿದುಕೊಳ್ಳಲೇ ಬೇಕಾಗಿದೆ "ಸಮಗ್ರಂ ಮಾಮ್", ಈ ದರ್ಶನ ಸಮಗ್ರವಾದಾಗಲೇ ಎಲ್ಲೆಲ್ಲೂ ವಾಸವಾಗಿರುವ ಎಲ್ಲವನ್ನೂ ವ್ಯಾಪಿಸಿರುವ ಭಗವಂತನನ್ನು ಕಾಣಲು ಸಾಧ್ಯವಾಗುವುದು. ಸಮತೆ ಮತ್ತು ಏಕಾತ್ಮತೆಯ ದರ್ಶನ ಪರಿಪೂರ್ಣವಾಗಿ ಆದಾಗಲೇ "ತೇ ದ್ವಂದ್ವ ಮೋಹ ವಿನಿರ್ಮುಕ್ತಾಃ" (7/28) ಶ್ರೇಷ್ಠ ಭಕ್ತಿ, ಭಗವಂತನ ಸರ್ವತೋ ವ್ಯಾಪಿ ಪ್ರೇಮವೊಂದೇ ಸಾಧಕನ ಅಸ್ತಿತ್ವದ ಏಕೈಕ ನಿಯಮವಾಗುವುದು. ಆಚಾರದ ಅಥವಾ ಆಚರಣೆಯ ಉಳಿದೆಲ್ಲ ನಿಯಮಗಳು ಆಗ ಈ ಸಮರ್ಪಣೆಯಲ್ಲಿ ಕರಗಿಹೋಗಿಬಿಡುವುವು "ಸರ್ವ ಧರ್ಮಾನ್ ಪರಿತ್ಯಜ್ಯ" (18/66). ಆಗ ನಮ್ಮ ಜೀವ ಅಥವಾ ಆತ್ಮವು ಈ ಭಕ್ತಿಯಲ್ಲಿ ದೃಢವಾಗಿ ನಿಲ್ಲುವುದು ಮತ್ತು ಪರಮಾತ್ಮನಿಗೆ ತನ್ನನ್ನು ಸಂಪೂರ್ಣವಾಗಿ ನಿವೇದಿಸಿಕೊಳ್ಳುವುದು, ಜ್ಞಾನ, ಕರ್ಮ ಎಲ್ಲವೂ ಅವನಿಗೆ ಸಮರ್ಪಿತವಾಗುವುವು. ಏಕೆಂದರೆ ಸಾಧಕನ ಎಲ್ಲ ಕರ್ಮ, ಚಟುವಟಿಕೆ, ಇರುವಿಕೆ ಹೀಗೆ ಎಲ್ಲದಕ್ಕೂ ಒಂದು ದೃಢವಾದ ಆಧಾರ ದೊರಕಿರುವುದು, ಸಮಗ್ರ, ಪರಿಪೂರ್ಣ ಹಾಗೂ ಎಲ್ಲವನ್ನೂ ಏಕರೂಪಗೊಳಿಸಬಲ್ಲ ಏಕತೆಯ ಜ್ಞಾನ ಭದ್ರ ಬುನಾದಿ ದೊರೆತಿರುವುದು. "ತೇ ಭಜಂತೇ ಮಾಂ ದೃಢವ್ರತಾಃ" (7/28).

(ಸಶೇಷ)



ಫೋಟೋ: ಇಮೇಜಿಂಗ್ ಸಾವಿತ್ರಿ

ಇದೋ ಈಗಿಲ್ಲಿ ಆ ಲೋಕ ಪ್ರಭೆಯು ಈ ದಿವ್ಯಲೋಕದಿಂದ
ದೀಪ್ತಿ–ತೇಜದಲಿ ಸೂಸಿ ಓಜದಲಿ ಆಗಮಿಸಿ ಅತ್ತಣಿಂದ,
ಆ ಆದಿ–ಶಕ್ತಿಯಾ ಸಾದ್ಯಂತವನ್ನು ತಾ ವೇದ್ಯಗೊಳಿಸಲೆಂದು
ಸ್ಪಂದನದ ಛಂದ ಪ್ರಾಣಮಯ ಸ್ಪಂದ ಸಾದೃಶ್ಯವಾಗಿ ನಿಂದು.
ಅವಳೆದೆಯ ತುಡಿತ ಮಿಡಿತಗಳ ಒಡನೆ ಪಡಿಮೂಡಿಕೊಳಲು ಇಂದು
ಮುಖದ–ಮಂಡಲವು, ಒಂದು ಸಾರೂಪ್ಯ ಅನುರೂಪುಗೊಳುತ ನಿಂದು
ಸಂಯೋಗಗೊಂಡು ಸಂರಚನೆಗೊಳಿಸಿ ಅದರದೇ ದೇವ–ತಾಣ
ಜೊತೆಯಲ್ಲಿ ಪ್ರಕಟ ಆ ಶುಭದ–ಶಕುನ ಚಿರವಾಸವಿರುವ ತಾಣ.

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 8 ರೇಣು 5 ಪುಟ 528)**

**RNI No. 22511/1971**
No. of Pages **76 + 4 (Cov. Page)**
KAR Reg No.: RNP/KA/BGS/368/2024-2026
Licensed to post without prepayment License No.PMG BG/WPP-409/2024-2026
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2026
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

ದಿವ್ಯೋಲೋಕದನುಭಾವ ಗಡಿಯ–ರೇಖೆಗಳ ಆಚೆಯೀಗ
ತದುತ್ತರವನ್ನು ದರ್ಶಿಸಿದ ಸ್ಪರ್ಶ ಈ ಆತ್ಮ–ಸ್ಪಂದಕೀಗ.

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ ‘ಸಾವಿತ್ರಿ’; ದಳ 4 ರೇಣು 2 ಪುಟ 362)**

Ed. Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, ‘Sri Aurobindo Marg’,
J.P. Nagar I Phase, Bengaluru - 560 078. Phone: 080 - 22449882.